ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಜನವರಿ 11, 2022

ಸಂಪುಟ : 48 ಸಂಚಿಕೆ : 241 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com

# ಮುನ್ನೆಚ್ಚರಿಕೆ ಡೋಸ್‌ಗೆ ಚಾಲನೆ

## ಜಿಲ್ಲೆಯಲ್ಲಿ 72 ಸಾವಿರ ಜನ ಬೂಸ್ಟರ್ ಡೋಸ್ ಲಸಿಕೆ ನೀಡಲು ಆಯ್ಕೆ



ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಕೋವಿಡ್ 19 ಮುನ್ನೆಚ್ಚರಿಕೆ (ಬೂಸ್ಟರ್) ಡೋಸ್ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ದಾವಣಗೆರೆ, ಜ.10- ಜಿಲ್ಲೆಯಲ್ಲಿನ ಆರೋಗ್ಯ ಕಾರ್ಯಕರ್ತರು ಮತ್ತು ಮುಂಚೂಣಿ ಕಾರ್ಯಕರ್ತರಿಗೆ ಕೊವೀಡ್ 19 ಮುನ್ನೆಚ್ಚರಿಕೆ (ಬೂಸ್ಟರ್) ಡೋಸ್ ನೀಡುವ ಕಾರ್ಯಕ್ರಮಕ್ಕೆ ನಗರದ ಜಿಲ್ಲಾ ಚಿಗಟೇರಿ ಆಸ್ಪತ್ರೆಯಲ್ಲಿ ಸಂಸದರು, ಶಾಸಕರೊಟ್ಟಿಗೆ ಸೋಮವಾರ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಸದ ಜಿ.ಎಂ. ಸಿದ್ದೇಶ್ವರ್, ಜಿಲ್ಲೆಯಲ್ಲಿ 11,800 ಜನರಿಗೆ ಬೂಸ್ಟರ್ ಲಸಿಕೆ ನೀಡುವ ಗುರಿ ಹೊಂದಲಾಗಿದೆ. ಅನೇಕರು ಇನ್ನೂ 2ನೇ ಡೋಸ್ ಲಸಿಕೆ ಪಡೆದಿಲ್ಲ. ಎಲ್ಲರೂ ನಿರ್ಲಕ್ಷ್ಯ ಮಾಡದೆ ಲಸಿಕೆ ಹಾಕಿಸಿಕೊಳ್ಳಬೇಕು. ಇದರಿಂದ ಕೋವಿಡ್ ಬಂದರೂ ಜೀವಕ್ಕೆ ಅಪಾಯವಾಗುವುದಿಲ್ಲ ಎಂದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಜಿಲ್ಲೆಯಲ್ಲಿ 16,000 ಮುಂಚೂಣಿ ಕಾರ್ಯಕರ್ತರಿಗೆ ಮತ್ತು 16,000 ಆರೋಗ್ಯ ಕಾರ್ಯಕರ್ತರು ಒಟ್ಟು 32,000 ಜನರು. ಮತ್ತು ಇವರೊಟ್ಟಿಗೆ 60 ವರ್ಷ ಮೇಲ್ಪಟ್ಟ 40,000 ಜನರನ್ನೂ ಸೇರಿ 72 ಸಾವಿರ ಜನರನ್ನು ಬೂಸ್ಟರ್ ಡೋಸ್ ಲಸಿಕೆಗೆ ಆಯ್ಕೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಜಿಲ್ಲೆ ಮತ್ತು ತಾಲ್ಲೂಕಿನಲ್ಲಿ 11,800 ಜನರಿಗೆ ಹಂತ ಹಂತವಾಗಿ ಪ್ರತಿಯೊಬ್ಬರಿಗೂ ಲಸಿಕೆ ನೀಡಲಾಗುವುದು. ಆರೋಗ್ಯ ಕಾರ್ಯಕರ್ತರು ಈ ಮುಂಚೆ ಕೋವ್ಯಾಕ್ಸಿನ್ ಪಡೆದಿದ್ದರೆ, ಅವರಿಗೆ ಕೋವ್ಯಾಕ್ಸಿನ್ ನೀಡಲಾಗುತ್ತದೆ. ಕೋವಿಶೀಲ್ಡ್ ಪಡೆದು 9 ತಿಂಗಳು ಪೂರ್ಣಗೊಂಡವರನ್ನು ಹುಡುಕಿ ಕೋವಿಶೀಲ್ಡ್ ಬೂಸ್ಟರ್ ಡೋಸ್ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ತಮಿಳುನಾಡು ಮತ್ತು ಬೆಂಗಳೂರಿನಿಂದ ಜಿಲ್ಲೆಗೆ ಮರಳಿದ ಸುಮಾರು 30 ಜನರನ್ನು ಗುರುತಿಸಿ ಪರೀಕ್ಷಿಸಿದಾಗ ಅವರಿಗೆ ಪಾಸಿಟಿವ್ ಲಕ್ಷಣ ಕಂಡು ಬಂದಿದೆ. ಅವರನ್ನು ಐಸೋಲೇಷನ್‌ನಲ್ಲಿ ಇರಿಸಲಾಗಿದೆ. ಜನರು ಆರೋಗ್ಯದ ಹಿತದೃಷ್ಟಿಯಿಂದ ಪ್ರವಾಸಗಳನ್ನು ಮುಂದೂಡಬೇಕು ಎಂದು ಮನವಿ ಮಾಡಿದ ಅವರು, ಶಬರಿ ಮಲೈಗೆ ಹೋಗಿ ಬಂದವರು ಸ್ವಯಂ ಪ್ರೇರಿತರಾಗಿ ಪರೀಕ್ಷೆಗೆ ಒಳಗಾಗಿ ತಮ್ಮನ್ನು ರಕ್ಷಿಸಿಕೊಳ್ಳುವುದರ ಜೊತೆಗೆ ಇತರರಿಗೂ (3ನೇ ಪುಟಕ್ಕೆ)

# ಹಿರಿಯ ಸಾಹಿತಿ ಚಂಪಾ ಇನ್ನಿಲ್ಲ



ಬೆಂಗಳೂರು, ಜ. 10 - ಚಂಪಾ ಎಂದೇ ಹೆಸರಾಗಿರುವ ಹಿರಿಯ ಸಾಹಿತಿ ಚಂದ್ರಶೇಖರ ಪಾಟೀಲರು ವಯೋ ಸಹಜ ಕಾಯಿಲೆಯಿಂದ ಸೋಮವಾರ ಬೆಳಿಗ್ಗೆ ಸಾವನ್ನಪ್ಪಿದ್ದಾರೆ. ಸಂಜೆ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ, ಹಲವು ಗಣ್ಯರು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡು ಅಂತಿಮ ನಮನ ಸಲ್ಲಿಸಿದರು.

ಕವಿ, ನಾಟಕಕಾರ, ಕನ್ನಡ ಪರ ಹೋರಾಟಗಾರರಾಗಿದ್ದ ಚಂಪಾರಿಗೆ 83 ವರ್ಷ ವಯಸ್ಸಾಗಿತ್ತು. ವಯೋಸಹಜ ಕಾಯಿಲೆಯಿಂದಾಗಿ ಅವರು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

ಹಾವೇರಿ ಜಿಲ್ಲೆಯ ಹತ್ತಿಮತ್ತೂರಿನಲ್ಲಿ ಜನಿಸಿದ್ದ ಚಂಪಾ, ಕ್ರಾಂತಿಕಾರಿ ಸಾಹಿತಿ. ಕನ್ನಡ ನಾಡು, ನುಡಿಗೆ ಧಕ್ಕೆಯಾದಾಗ ಬೀದಿಗಿಳಿದು ಹೋರಾಟ ನಡೆಸಲು ಹಿಂಜರಿಯುತ್ತಿರಲಿಲ್ಲ. ಗೋಕಾಕ್ ಚಳುವಳಿ ಸೇರಿ ಹಲವು ಹೋರಾಟ ಗಳಲ್ಲಿ ಪಾಲ್ಗೊಂಡಿದ್ದ ಅವರು, ಕನ್ನಡ ಮಾಧ್ಯಮ ಕಲಿಕೆಯನ್ನು ಪ್ರತಿಪಾದಿಸುತ್ತಾ ಬಂದಿದ್ದರು.

1939ರ ಜೂನ್ 18ರಂದು ಚಂಪಾ ಅವರು ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕಿನ ಹತ್ತಿಮತ್ತೂರಿನಲ್ಲಿ ಜನಿಸಿದ್ದರು. ತಮ್ಮ ತಂದೆ ಬಸವರಾಜ ಹಿರೇಗೌಡರು ಇಂಗ್ಲಿಷಿನ ಮೇಲೆ ಅಭಿಮಾನ ಹೊಂದಿದ್ದನ್ನು ಗಮನಿಸಿದ್ದ ಚಂಪಾ, ಅದರಿಂದ ಪ್ರೇರಿತರಾಗಿ ಇಂಗ್ಲಿಷ್ ಎಂ.ಎ. ಪದವಿ ಗಳಿಸಿದ್ದರು.

ಬ್ರಿಟಿಷ್ ಕೌನ್ಸಿಲ್ ವಿದ್ಯಾರ್ಥಿ ವೇತನ ಪಡೆದು, ಇಂಗ್ಲೆಂಡ್‌ನ ಲೀಡ್ಸ್ ವಿಶ್ವವಿದ್ಯಾನಿಲಯದಿಂದ ಭಾಷಾ ಶಾಸ್ತ್ರದಲ್ಲಿನ ಸ್ನಾತಕೋತ್ತರ ಪದವಿ ಮತ್ತು ಹೈದರಾಬಾದ್‌ನ ಕೇಂದ್ರೀಯ (2ನೇ ಪುಟಕ್ಕೆ)

# ಕೊರೊನಾ ದೈನಂದಿನ ಸಾವುಗಳು ಕಳೆದ ಹತ್ತು ತಿಂಗಳಲ್ಲೇ ಕಡಿಮೆ

ನವದೆಹಲಿ, ಜ. 10 - ಕೊರೊನಾದಿಂದಾಗಿ ದೇಶದಲ್ಲಿ ಸಂಭವಿಸುವ ದೈನಂದಿನ ಸಾವುಗಳ ಸಂಖ್ಯೆ 146ರ ಹಂತಕ್ಕೆ ಇಳಿದಿದೆ. ಹತ್ತು ತಿಂಗಳ ನಂತರ ಇದೇ ಮೊದಲ ಬಾರಿಗೆ ಇಷ್ಟು ಕಡಿಮೆ ಸಾವುಗಳು ಸಂಭವಿಸಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಅಂಕಿ-ಅಂಶಗಳು ತಿಳಿಸಿವೆ. ಈ ಹಿಂದೆ ಮಾರ್ಚ್ 15ರಂದು 131 ಸಾವುಗಳು ಸಂಭವಿಸಿದ್ದವು. ನಂತರದಲ್ಲಿ ಸಾವುಗಳ ಸಂಖ್ಯೆ ಏರಿಕೆಯಾಗುತ್ತಾ ಸಾಗಿತ್ತು. ಮೇ 20ರ ವೇಳೆಗೆ ಪ್ರತಿದಿನ 4 ಸಾವಿರದಷ್ಟು ಸಾವುಗಳು ಸಂಭವಿಸುತ್ತಿದ್ದವು.

ಮೇ ನಂತರದಲ್ಲಿ ಸಾವುಗಳ ಪ್ರಮಾಣ ಇಳಿಕೆಯಾಗುತ್ತಾ ಬಂದಿದೆ. ಸೆಪ್ಟೆಂಬರ್ ನಂತರ ವಾರದ ಸರಾಸರಿ ಸಾವುಗಳ ಸಂಖ್ಯೆ 300ರ ಹಂತದಲ್ಲಿದೆ.


ದೇಶದಲ್ಲಿ ಮೂರನೇ ಅಲೆ ಕಂಡು ಬಂದ ನಂತರ, ನಿತ್ಯ ಕಂಡು ಬರುವ ಸೋಂಕಿತರ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿದೆ. ಜನವರಿ 9ರಂದು 1.79 ಲಕ್ಷ ಸೋಂಕಿತರು ಕಂಡು ಬಂದಿದ್ದಾರೆ. ಆದರೆ, ಅದೇ ಪ್ರಮಾಣದಲ್ಲಿ ಸಾವುಗಳ ಸಂಖ್ಯೆ ಹೆಚ್ಚಾಗಿಲ್ಲ.

ದೇಶದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ ಈಗ 7.23 ಲಕ್ಷಕ್ಕೆ ತಲುಪಿದೆ. ಪಾಸಿಟಿವಿಟಿ ದರ ಶೇ.13.29ರಷ್ಟಿದೆ.

ಪ್ರಸಕ್ತ ಕೊರೊನಾ ಸೋಂಕಿತರಲ್ಲಿ ಶೇ.5-10ರಷ್ಟು ಜನರು ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಹಿಂದಿನ ಅಲೆಯಲ್ಲಿ ಆಸ್ಪತ್ರೆಗೆ ದಾಖಲಾಗುತ್ತಿದ್ದವರ ಪ್ರಮಾಣ ಶೇ.20-23ರಷ್ಟಿತ್ತು.

ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಕಡಿಮೆ ಇದ್ದರೂ ಸಹ, ಪರಿಸ್ಥಿತಿ ವೇಗವಾಗಿ ಬದಲಾಗಬಹುದು. ಅದರಂತೆ ಆಸ್ಪತ್ರೆಗೆ ದಾಖಲಾಗುವವರ ಪ್ರಮಾಣವೂ ಹೆಚ್ಚಾಗಬಹುದು ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ತಿಳಿಸಿದ್ದಾರೆ.

# ಕರ್ನಾಟಕವನ್ನು ಸುರಕ್ಷತೆಗೆ ತರುವ ಗುರಿ



ಬೆಂಗಳೂರು, ಜ. 10 - ಕೋವಿಡ್ ಸೋಂಕಿನಿಂದ ಕರ್ನಾಟಕವನ್ನು ಸುರಕ್ಷತಾ ಚಕ್ರದೊಳಗೆ ತರುವುವೇ ನಮ್ಮ ಸರ್ಕಾರದ ಗುರಿ. ಈ ಗುರಿ ಸಾಧಿಸುವ ವಿಶ್ವಾಸ ತಮಗಿದೆ ಎಂದು ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಅವರು ಇಂದು ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರು ಹಾಗೂ ಸಹ ಅಸ್ವಸ್ಥತೆ ಹೊಂದಿರುವ ಹಿರಿಯ ನಾಗರಿಕರಿಗೆ ಮುನ್ನೆಚ್ಚರಿಕಾ ಡೋಸ್ ಲಸಿಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡುತ್ತಿದ್ದರು. ಕರ್ನಾಟಕದಲ್ಲಿ ಲಸಿಕೆ ಕಾರ್ಯಕ್ರಮವನ್ನು ಶೇ.99 ರಷ್ಟು ಯಶಸ್ವಿಗೊಳಿಸಲಾಗಿದೆ. ಜನವರಿ 31 ರೊಳಗೆ ಶೇ.100 ರಷ್ಟು ಸಾಧನೆ ಮಾಡಲಾಗುವುದು. ಶೇ.77 ರಷ್ಟು ಎರಡನೇ ಡೋಸ್ ಆಗಿದ್ದು, ಜನವರಿ ಅಂತ್ಯಕ್ಕೆ ಶೇ.80 ಸಾಧಿಸುವ ಗುರಿ ಇದ್ದು, ಫೆಬ್ರವರಿಯಲ್ಲಿ ಎರಡನೇ ಡೋಸ್ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು. ಕರ್ನಾಟಕ ರಾಜ್ಯವನ್ನು ಸುರಕ್ಷತಾ ಚಕ್ರದೊಳಗೆ ತರಬೇಕೆನ್ನುವ ಸರ್ಕಾರದ ಗುರಿಯನ್ನು ಮುಟ್ಟಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಕೊರೊನಾ ಯೋಧರು ದೇಶದ (2ನೇ ಪುಟಕ್ಕೆ)

# ನಗರದಲ್ಲಿ ಹೆಚ್ಚುತ್ತಿರುವ ಪಾರ್ಕಿಂಗ್ ಸಮಸ್ಯೆ

ದಾವಣಗೆರೆ, ಜ.10- ನಗರದಲ್ಲಿ ಬೈಕ್ ಕಳ್ಳತನಗಳು ಹೆಚ್ಚಾಗಿವೆ. ಈ ಹಿನ್ನೆಲೆಯಲ್ಲಿ ಕಳ್ಳರ ಮೇಲೆ ಕಣ್ಗಾವಲಾಗಿ ರಾತ್ರಿಯ ಗಸ್ತು ಮತ್ತು ರಾತ್ರಿಯ ಚೆಕ್ ಪೋಸ್ಟ್ ಗಳನ್ನು ಪ್ರಾರಂಭಿಸಲಾಗಿದ್ದು, ನಗರಕ್ಕೆ ಪ್ರವೇಶಿಸುವ ಎಲ್ಲಾ ಮುಖ್ಯ ಕೇಂದ್ರಗಳಲ್ಲಿ ಚೆಕ್ಕಿಂಗ್ ಶುರು ಮಾಡಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ತಿಳಿಸಿದರು.

ಅವರು, ಇಂದು ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಜಿಲ್ಲೆಯ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ ಸ್ವತ್ತು ಕಳವು ಪ್ರಕರಣಗಳಲ್ಲಿ ವಶಪಡಿಸಿಕೊಂಡ ಸ್ವತ್ತನ್ನು ವಾರಸುದಾರರಿಗೆ ಒಪ್ಪಿಸುವ ಪರೇಡ್ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದರು.

ಸ್ಮಾರ್ಟ್ ಸಿಟಿ ವತಿಯಿಂದ ನಗರದಲ್ಲಿ 36 ಚೆಕ್ ಪಾಯಿಂಟ್‌ಗಳಲ್ಲಿ ಕಾರ್ಯನಿರ್ವಹಿಸದೇ ಇದ್ದಂತಹ ಸಿಸಿ ಟಿವಿ ಕ್ಯಾಮೆರಾಗಳು ಇನ್ನು ಮುಂದೆ ಕಾರ್ಯ ನಿರ್ವಹಿಸಲಿದ್ದು, ನಗರದಲ್ಲಿ ಒಟ್ಟು 215 ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಇದರಿಂದ ಕಳ್ಳತನ ಸೇರಿದಂತೆ ಅಪರಾಧ ಪ್ರಕರಣಗಳ ಪತ್ತೆ ಸುಲಭವಾಗಲಿದೆ ಎಂದು ಹೇಳಿದರು.

ಜನವರಿ ತಿಂಗಳು ಪೂರ್ತಿ ಅಪರಾಧ ತಡೆ ಮಾಸಾಚರಣೆ ನಡೆಯುತ್ತಿದ್ದು, ಪಿಎಸ್‌ಐಗಳು ಪ್ರಮುಖ ವೃತ್ತಗಳಲ್ಲಿ ಹೆಲ್ಮೆಟ್ ಧರಿಸದೇ ಸಂಚರಿ (3ನೇ ಪುಟಕ್ಕೆ)

### ತಳ್ಳುವ ಗಾಡಿ ವ್ಯಾಪಾರಿಗಳಿಂದ ಸಂಚಾರಕ್ಕೆ ಸಮಸ್ಯೆ



**ಪಿ.ಬಿ. ರಸ್ತೆಯಲ್ಲಿನ ಪ್ರತ್ಯೇಕ ಸ್ಥಳವೊಂದರಲ್ಲೇ ಅಪಘಾತದಿಂದ ಇಬ್ಬರು ಮೃತಪಟ್ಟರು. ಘಟನೆಯನ್ನು ಅವಲೋಕಿಸಿದಾಗ ಸುರಕ್ಷತೆಗಾಗಿ ಸಮರ್ಪಕ ಹೆಲ್ಮೆಟ್ ಇಲ್ಲದಿರುವುದೇ ಕಾರಣ. ಎಷ್ಟೇ ಜಾಗೃತಿ, ಮನವಿ ಮಾಡಿದರೂ ಕೆಲ ದ್ವಿಚಕ್ರ ವಾಹನ ಸವಾರರು ತಮ್ಮ ಜೀವ ಸುರಕ್ಷತೆಯ ದೃಷ್ಟಿಯಿಂದ ಹೆಲ್ಮೆಟ್ ಧರಿಸಲು ಮನಸ್ಸು ಮಾಡದೇ ಕಾಟಾಚಾರ ಮತ್ತು ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರಲ್ಲದೇ, ಅರ್ಧ ಹೆಲ್ಮೆಟ್ ಮಾರಾಟ ಮಾಡುವುದರ ಮೇಲೆ ಕಠಿಣ ಕ್ರಮಕೈಗೊಳ್ಳಲಾಗಿದೆ. ಸುರಕ್ಷಿತವಲ್ಲದ ಹೆಲ್ಮೆಟ್ ಗಳನ್ನು ವಶಪಡಿಸಿಕೊಳ್ಳಲಾಗಿದೆ.**

**-ಸಿ.ಬಿ. ರಿಷ್ಯಂತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ**

# ಕೋವಿಡ್ ದೃಢಪಟ್ಟು ಲಕ್ಷಣ ಇಲ್ಲದಿದ್ದರೆ ಅಡ್ಮಿಟ್ ಮಾಡಿಕೊಳ್ಳುವ ಅಗತ್ಯವಿಲ್ಲ

## ಕೋವಿಡ್ ನಿಯಂತ್ರಣ ತುರ್ತು ಸಭೆಯಲ್ಲಿ ಖಾಸಗಿ ಆಸ್ಪತ್ರೆಗಳಿಗೆ ಮಹಾಂತೇಶ ಬೀಳಗಿ ಸೂಚನೆ



ದಾವಣಗೆರೆ, ಜ. 10- ಕೋವಿಡ್ ಸೋಂಕು ದೃಢಪಟ್ಟು, ಯಾವುದೇ ರೋಗ ಲಕ್ಷಣ ಇಲ್ಲದಿರುವಂತಹ ರೋಗಿಗಳನ್ನು ಖಾಸಗಿ ಆಸ್ಪತ್ರೆಗಳು ಅಡ್ಮಿಟ್ ಮಾಡಿಕೊಂಡು ಕೋವಿಡ್ ಚಿಕಿತ್ಸೆ ನೀಡುವ ಅಗತ್ಯವಿಲ್ಲ. ರೋಗಲಕ್ಷಣಗಳಿಲ್ಲದವರು ಹೋಂ ಐಸೋಲೇಷನ್‌ನ ನಿಯಮ ಗಳನ್ನು ಕಡ್ಡಾಯವಾಗಿ ಪಾಲಿಸಿಕೊಂಡು, ವೈದ್ಯರ ಸೂಚನೆಯಂತೆ ಔಷಧೋಪಚಾರ ಗಳೊಂದಿಗೆ ಮನೆಯಲ್ಲಿಯೇ ಇರುವು ದನ್ನು ಅಧಿಕಾರಿಗಳು ಖಾತ್ರಿಪಡಿಸಿಕೊಳ್ಳ ಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.

ಕೋವಿಡ್ ನಿಯಂತ್ರಣ ಕುರಿತಂತೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ ತುರ್ತು ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಖಾಸಗಿ ಆಸ್ಪತ್ರೆಗಳು ನಿಯಮಗಳನ್ನು ಗಾಳಿಗೆ ತೂರಿ, ಜನರಿಂದ ಹಣ ಸುಲಿಗೆ ಮಾಡಿದ್ದು ಕಂಡುಬಂದಿದ್ದು, ಖಾಸಗಿ ಆಸ್ಪತ್ರೆಗಳು ಸರ್ಕಾರ ನಿಗದಿಪಡಿಸಿರುವ ದರ ಮಾತ್ರ ಪಡೆಯಬೇಕು. ಹೆಚ್ಚಿನ ಹಣ ವಸೂಲಿ (2ನೇ ಪುಟಕ್ಕೆ)

### ಯಾತ್ರಿಗಳ ಮೇಲೆ ನಿಗಾ

**ಸಂಕ್ರಾಂತಿ ನಿಮಿತ್ತ ಶಬರಿಮಲೆ ಯಾತ್ರೆ ಕೈಗೊಳ್ಳುವವರ ಸಂಖ್ಯೆ ಅಧಿಕವಾಗಿದ್ದು, ಅದರ ಜೊತೆಗೆ ತಮಿಳುನಾಡಿಗೂ ಓಂ ಶಕ್ತಿ ಪೂಜೆ ಯಾತ್ರಾರ್ಥಿಗಳು ಹೋಗಿ ಬರುತ್ತಿರುವುದು ಕಂಡುಬಂದಿದ್ದು, ಯಾತ್ರಾರ್ಥಿಗಳಿಗೆ ಆರ್‌ಟಿಪಿಸಿಆರ್ ಪರೀಕ್ಷೆ ಮಾಡಬೇಕು. 72 ಗಂಟೆಗಳ ಅವಧಿಯಲ್ಲಿನ ನೆಗೆಟಿವ್ ವರದಿ ಇರುವುದನ್ನು ಖಚಿತಪಡಿಸಿಕೊಳ್ಳಬೇಕು. ಆರ್‌ಟಿಒ ಅಧಿಕಾರಿಗಳು, ಟ್ರಾವೆಲ್ ಏಜೆನ್ಸಿಯವರೊಂದಿಗೆ ಸಂಪರ್ಕ ಸಾಧಿಸಿ, ಟ್ರಾವೆಲ್ ಏಜೆನ್ಸಿಗಳು, ಕೇರಳ, ಮಹಾರಾಷ್ಟ್ರ, ತಮಿಳುನಾಡಿಗೆ ಹೋಗಿಬರುವುದಕ್ಕೆ ಸಂಬಂಧಿಸಿ** (2ನೇ ಪುಟಕ್ಕೆ)

# ಜ.14ರ ಹರಜಾತ್ರೆ ಮುಂದೂಡಿಕೆ



ಹರಿಹರ, ಜ. 10 - ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ಜ. 14, 15 ರಂದು ಆಯೋಜಿಸಿದ್ದ ಹರ ಜಾತ್ರೆಯನ್ನು ಮುಂದೂಡಲಾಗಿದೆ ಎಂದು ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ತಿಳಿಸಿದ್ದಾರೆ.

ನಗರದ ಗುರು ಪೀಠದಲ್ಲಿ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶ್ರೀಗಳು, ರಾಜ್ಯ ಹಾಗೂ ದೇಶದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಮುಂದೂಡುವ ತೀರ್ಮಾನವನ್ನು ಇಂದು ಗುರುಪೀಠದಲ್ಲಿ ನಡೆದ ಸಮುದಾಯದ ಮುಖಂಡರ ಸಭೆಯಲ್ಲಿ ಕೈಗೊಳ್ಳಲಾಗಿದೆ. ಮುಂದಿನ ದಿನಾಂಕವನ್ನು ನಂತರದಲ್ಲಿ ಪ್ರಕಟಿಸಲಾಗುವುದು ಎಂದು ತಿಳಿಸಿದರು.

ಹರಜಾತ್ರೆ ಹಿನ್ನೆಲೆಯಲ್ಲಿ ಹರಮಾಲೆ ಆಯೋಜಿಸಲಾಗಿತ್ತು. ಜ. 14 ರಂದು ಇಲ್ಲಿಗೆ ಆಗಮಿಸುವ ಮಾಲಾಧಾರಿಗಳು 'ಹರಮಾಲೆ ಸಂಕಲ್ಪ ಸಮರ್ಪಣೆ' ಮಾಡಬೇಕಿತ್ತು. ಜಾತ್ರೆ ಮುಂದೂಡಿರುವುದರಿಂದ ಮಾಲಾಧಾರಿಗಳು ಅವರವರ (2ನೇ ಪುಟಕ್ಕೆ)

# ಸೋಂಕಿತರ ಸಂಪರ್ಕಕ್ಕೆ ಬಂದ ಎಲ್ಲರ ಟೆಸ್ಟ್ ಬೇಕಿಲ್ಲ

**ಕೇಂದ್ರ**

ನವದೆಹಲಿ, ಜ. 10 – ಕೊರೊನಾ ಸೋಂಕು ಖಚಿತವಾದ ಸಂದರ್ಭದಲ್ಲಿ ಸೋಂಕಿತರ ಸಂಪರ್ಕದಲ್ಲಿರುವ ಎಲ್ಲರನ್ನೂ ಪರೀಕ್ಷೆಗೆ ಒಳಪಡಿಸಬೇಕಿಲ್ಲ. ವಯಸ್ಸು ಹಾಗೂ ಸಹ ಅಸ್ವಸ್ಥತೆಗಳ ಆಧಾರದ ಮೇಲೆ ಹೆಚ್ಚಿನ ಅಪಾಯ ಇರುವವರನ್ನು ತಪಾಸಣೆಗೆ ಒಳಪಡಿಸಬೇಕು ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಅಂತರ ರಾಜ್ಯ ಪ್ರಯಾಣ ಮಾಡುವವರನ್ನೂ ಸಹ ಪರೀಕ್ಷೆಗೆ ಒಳಪಡಿಸುವ ಅಗತ್ಯವಿಲ್ಲ ಎಂದು ಕೇಂದ್ರ ಸರ್ಕಾರ ಹೊಸ ಮಾರ್ಗಸೂಚಿಯಲ್ಲಿ ತಿಳಿಸಿದೆ.

# ನಗರ ದೇವತೆಯರ ಜಾತ್ರೆ ರದ್ದು

**ರಾಣೇಬೆನ್ನೂರು**

ರಾಣೇಬೆನ್ನೂರು, ಜ.10 - ಇದೇ ದಿನಾಂಕ 17 ರಿಂದ 22 ವರೆಗೆ ನಡೆಸಲು ತೀರ್ಮಾನಿಸಲಾಗಿದ್ದ ಇಲ್ಲಿನ ನಗರದೇವತೆಯರಾದ ಗಂಗಾಜಲ ಹಾಗೂ ತುಂಗಾಜಲ ಚೌಡೇಶ್ವರಿ ಜಾತ್ರೆಗೆ ಜಿಲ್ಲಾ ಹಾಗೂ ತಾಲ್ಲೂಕು ಆಡಳಿತ ಅವಕಾಶ ಕೊಡುವುದಿಲ್ಲ ಎಂದು ಸ್ಪಷ್ಟಪಡಿಸಿತು.

ಇಂದು ಇಲ್ಲಿನ ತಾ.ಪಂ. ಸಭಾಭವನದಲ್ಲಿ ಕರೆದಿದ್ದ ಎರಡು ಹಾಗೂ ಆದಿಶಕ್ತಿ ದೇವಿಯ ಸಮಿತಿಗಳ ಪದಾಧಿಕಾರಿಗಳು ಮತ್ತು ಸಾರ್ವಜನಿಕರು ಪಾಲ್ಗೊಂಡಿದ್ದ ಶಾಂತಿಸಭೆಯಲ್ಲಿ ತಹಶೀಲ್ದಾರ್ ಶಂಕರ್ ಮಾತನಾಡಿದರು.

ಸಾಂಕ್ರಾಮಿಕ ರೋಗಗಳನ್ನು ತಡೆಯಲು ಹಿರಿಯರು ದೇವಿಯರ ಜಾತ್ರೆ ಮಾಡುತ್ತಿದ್ದರು. (3ನೇ ಪುಟಕ್ಕೆ)

# ಅನಧಿಕೃತ ಬಡಾವಣೆಗಳ ನಿರ್ಮಾಣ ತಡೆಗೆ ಸೂಚನೆ



ದಾವಣಗೆರೆ, ಜ.10- ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ಪ್ರದೇಶದಲ್ಲಿ ನಿರ್ಮಾಣವಾಗುವ ಅನಧಿಕೃತ ಬಡಾವಣೆ ಗಳನ್ನು ತಡೆ ಹಿಡಿಯಲು ಕ್ರಮ ವಹಿಸುವಂತೆ ಮಹಾನಗರ ಪಾಲಿಕೆ, ಕಂದಾಯ, ಬೆಸ್ಕಾಂ, ನೋಂದಣಿ ಹಾಗೂ (2ನೇ ಪುಟಕ್ಕೆ)

# 4 ಕೋಟಿ ರೂ. ಮೌಲ್ಯದ ಸ್ವತ್ತುಗಳನ್ನು ವಾರಸುದಾರರ ಕೈ ಸೇರಿಸಿದ ಜಿಲ್ಲಾ ಪೊಲೀಸ್





ದಾವಣಗೆರೆ, ಜ.10- ಪ್ರದರ್ಶನಕ್ಕಿಟ್ಟಿರುವಂತೆ ಕಣ್ಣಿಗೆ ಕಾಣುವ ಕಳುವಾದ ಚಿನ್ನಾಭರಣ, ವಿವಿಧ ಬಗೆಯ ವಾಹನಗಳು, ಪ್ರಯಾಣಿಕರ ಆಟೋಗಳು, ಸಿಲಿಂಡರ್ ಗಳ ಹೊತ್ತ ಆಟೋ, ರೈತರ ನಗದುಳ್ಳ ಪೆಟ್ಟಿಗೆ, ಚಿಪ್ಪು ಹಂದಿ ಚಿಪ್ಪು ಸೇರಿದಂತೆ ಸುಮಾರು 4 ಕೋಟಿಗೂ ಅಧಿಕ ಮೌಲ್ಯದ ವಸ್ತುಗಳು. ಕಳುವಾದ ವಸ್ತುಗಳು ಯಾವಾಗ ಕೈ ಸೇರುವುದೋ ಎಂಬ ನಿರೀಕ್ಷೆ. ತಮ್ಮ ಠಾಣಾ ವ್ಯಾಪ್ತಿಯಲ್ಲಿ ಕಳುವಾದ ವಸ್ತುಗಳ ಜೋಡಿಸಿಟ್ಟ ಪೊಲೀಸರು. ವಾರಸುದಾರರಿಗೆ ಸಿದ್ಧವಾಗಿದ್ದ ವಸ್ತುಗಳನ್ನು ಪರಿಶೀಲಿಸಿ ಒಪ್ಪಿಸಿದ ಎಸ್ಪಿ.

ಈ ಎಲ್ಲಾ ದೃಶ್ಯಗಳು ಇಂದು ಮಧ್ಯಾಹ್ನ ನಗರದ ಪೊಲೀಸ್ ಕವಾಯತ್ತು ಮೈದಾನದಲ್ಲಿ ಕಳವು ಪ್ರಕರಣಗಳಲ್ಲಿ ವಶಪಡಿಸಿಕೊಂಡ ಸ್ವತ್ತಿನ ಪರೇಡ್ ನಲ್ಲಿ ಕಂಡು ಬಂದವು.

ಜಿಲ್ಲೆಯ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಕಳೆದ 2021 ವರ್ಷದಲ್ಲಿ ದಾಖಲಾಗಿದ್ದ ಸುಮಾರು 500 ಕಳ್ಳತನ ಪ್ರಕರಣಗಳ ಪೈಕಿ ಬೈಕ್, ಕಾರು, ಪ್ರಯಾಣಿಕರ ಆಟೋಗಳು, ಸಿಲಿಂಡರ್ ಗಳ ಸಾಗಿಸುವ ಏಜೆನ್ಸಿಯೊಂದರ ಆಟೋ, ಚಿನ್ನಾಭರಣ ಕಳ್ಳತನ ಹಾಗೂ ರೈತರ ಮೆಕ್ಕೆಜೋಳದ ವಂಚನೆ ಹಣ, ಚಿಪ್ಪು ಹಂದಿಗಳ ಚಿಪ್ಪು ವಶ ಸೇರಿದಂತೆ 250 ಪ್ರಕರಣಗಳು ಪತ್ತೆಯಾಗಿವೆ. ಈ ಪ್ರಕರಣಗಳಲ್ಲಿ 4 ಕೋಟಿ 63 ಲಕ್ಷದ 89 ಸಾವಿರದ 662 ರೂ. ಮೌಲ್ಯದ ಸ್ವತ್ತುಗಳು ವಶಪಡಿಸಿಕೊಳ್ಳಲಾಗಿದೆ.

ಹೀಗೆ ವಶಪಡಿಸಿಕೊಂಡ ಸ್ವತ್ತುಗಳನ್ನು ಅದಕ್ಕೆ ಸಂಬಂಧಿಸಿದ ವಾರಸುದಾರರಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ವಿತರಣೆ ಮಾಡಿದರು. ಅದಕ್ಕೂ ಮುನ್ನ ಜೋಡಿಸಿಡಲಾಗಿದ್ದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳವಾದ ಸ್ವತ್ತುಗಳನ್ನು ವೀಕ್ಷಿಸಿದರು.

ದಾವಣಗೆರೆ ನಗರ ಉಪ ವಿಭಾಗ ವ್ಯಾಪ್ತಿಯಲ್ಲಿ 37 ಲಕ್ಷದ 32 ಸಾವಿರ ಮೌಲ್ಯದ ಚಿನ್ನಾಭರಣ, 65 ಲಕ್ಷದ 58 ಸಾವಿರ ಮೌಲ್ಯದ 84 ವಿವಿಧ ವಾಹನಗಳು, 9 ಲಕ್ಷದ 44 ಸಾವಿರ ನಗದು, ಇತರೆ ಸೇರಿ ಒಟ್ಟು 3 ಕೋಟಿ 83 ಲಕ್ಷದ 33 ಸಾವಿರ ಮೌಲ್ಯದ ಸ್ವತ್ತು. ದಾವಣಗೆರೆ ಗ್ರಾಮಾಂತರ ಉಪ ವಿಭಾಗ ವ್ಯಾಪ್ತಿಯಲ್ಲಿ 25 ಲಕ್ಷದ 23 ಸಾವಿರ ಮೌಲ್ಯದ ಚಿನ್ನಾಭರಣ, 1 ಲಕ್ಷದ 85 ಸಾವಿರ ಮೌಲ್ಯದ 4 ವಾಹನಗಳು, 3 ಲಕ್ಷದ (2ನೇ ಪುಟಕ್ಕೆ)

# ಬಹುಮುಖ ವ್ಯಕ್ತಿತ್ವದ ಬಂಡಾಯ ಸಾಹಿತಿ ಚಂಪಾ



## ಹರಿಹರ ತಾಲ್ಲೂಕು ಕ.ಸಾ.ಪ. ಸಭೆಯಲ್ಲಿ ಶ್ರದ್ಧಾಂಜಲಿ

ಹರಿಹರ, ಜ. 10 - ನಾಡಿನ ಹಿರಿಯ ಕವಿ, ಬಹುಮುಖ ವ್ಯಕ್ತಿತ್ವದ ಪ್ರೊ. ಚಂಪಾ ಅವರು ಪ್ರಾಧ್ಯಾಪಕರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಸಂಕ್ರಮಣ ಪತ್ರಿಕೆಯ ಸಂಪಾದಕರಾಗಿ, ಅಂಕಣಕಾರರಾಗಿ, ಲೇಖಕರಾಗಿ ಬಂಡಾಯ, ನವೋದಯ ಸಾಹಿತ್ಯ ಚಳವಳಿಯಲ್ಲಿ ಸಕ್ರಿಯವಾಗಿ ಸೇವೆ ಸಲ್ಲಿಸಿದ್ದರು. ಅಂತಹ ಮಹಾನ್ ಚೇತನ ಅಗಲಿರುವುದು ನಾಡಿನ ಕನ್ನಡಿಗರಿಗೆ ದೊಡ್ಡದಾದ ಅಪಘಾತವನ್ನು ಉಂಟುಮಾಡಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ನಿಯೋಜಿತ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ ತಿಳಿಸಿದ್ದಾರೆ.

ನಗರದ ಸಭಾ ಭವನದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕನ್ನಡ ಪರ ಸಂಘಟನೆಗಳ ಸಾರಥ್ಯದಲ್ಲಿ ಕನ್ನಡ ನಾಡಿನ ಹಿರಿಯ ಸಾಹಿತಿ ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ) ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ವಿದ್ಯಾರ್ಥಿ ದೆಸೆಯಿಂದಲೂ ಅನೇಕ ಕನ್ನಡ ಪರ ಚಳವಳಿಗಳಲ್ಲಿ ಭಾಗವಹಿಸುತ್ತಿದ್ದ ಚಂಪಾ ಅವರು ರಾಜ್ಯ ಬಂಡಾಯ ಸಾಹಿತ್ಯ ಸಂಘ ಟನೆಯ ಸಂಚಾಲಕರಾಗಿ, ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಗೋಕಾಕ್ ನಂತಹ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದರು. ಅವರು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಜೈಲು ವಾಸ ಸಹ ಅನುಭವಿಸಿದ್ದರು ಎಂದು ಹೇಳಿದರು.

ಹಿರಿಯ ಸಾಹಿತಿ ಪ್ರೊ. ಭಿಕ್ಷಾವರ್ತಿಮಠ ಮಾತನಾಡಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಚಂಪಾ ಅವರು, ಪುಸ್ತಕ ಸಂತೆಯನ್ನು ಏರ್ಪಡಿಸಿ ಸಣ್ಣ ಪ್ರಮಾಣದ ಪ್ರಕಾಶಕರನ್ನು ಉತ್ತೇಜಿಸುವ ಕೆಲಸ ಮಾಡಿದ್ದರು. ಗಡಿನಾಡ ಕನ್ನಡಿಗರ ಸಮಸ್ಯೆಗಳ ಪರಿಹಾರಕ್ಕಾಗಿ ಅಧ್ಯಕ್ಷರ ಪುಸ್ತಕ ನಿಧಿಯನ್ನು ಪ್ರಾರಂಭಿಸಿ ನೆರವಾಗಿದ್ದರು ಎಂದು ಹೇಳಿದರು.

ಮೈಸೂರಿನಲ್ಲಿ ಜರುಗಿದ 83ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ನೀಡಿ, ಕನ್ನಡ ಸಾಹಿತ್ಯ ಪರಿಷತ್ತು ಗೌರವಿಸಿತ್ತು. ಕನ್ನಡ ಕನ್ನಡ ಬರ್ರೀ ನಮ್ಮ ಸಂಗಡ ಎಂದು ಎಲ್ಲರನ್ನೂ ಕನ್ನಡದ ಕಾಯಕದಲ್ಲಿ ಒಳಗೊಳ್ಳುವಂತೆ ಪ್ರೇರಣೆ ನೀಡಿದ್ದರು ಎಂದು ಹೇಳಿದರು.

ಈ ಸಂದರ್ಭದಲ್ಲಿ ಹಿರಿಯ ಬಂಡಾಯ ಸಾಹಿತಿ ಜೆ.ಕಲೀಂಬಾಷಾ, ಪ್ರೊ.ಸಿ.ವಿ.ಪಾಟೀಲ್, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಸ್.ಹೆಚ್. ಹೂಗಾರ್, ಕಾರ್ಮಿಕ ಮುಖಂಡರಾದ ಹೆಚ್.ಕೆ.ಕೊಟ್ರಪ್ಪ, ಹಿರಿಯ ಕ್ರೀಡಾಪಟು ಹೆಚ್.ನಿಜ ಗುಣ, ಕರವೇ ಜಿಲ್ಲಾ ಉಪಾಧ್ಯಕ್ಷ ನಾಗರಾಜ್ ಮೆಹರ್ವಾಡೆ, ಪರಸ್ಪರ ಬಳಗದ ಸಂಚಾಲಕ ಎ. ರಿಯಾಜ್ ಅಹ್ಮದ್, ತಾ.ಕಸಾಪ ನಿಕಟಪೂರ್ವ ಕಾರ್ಯದರ್ಶಿ ಎ.ಡಿ.ಕೊಟ್ರಬಸಪ್ಪ, ತಾಲ್ಲೂಕು ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷ ಡಿ.ಟಿ. ತಿಪ್ಪಣ್ಣರಾಜು, ಕಾರ್ಯದರ್ಶಿ ಈಶಪ್ಪ ಬೂದಿಹಾಳ, ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್.ಚಂದ್ರಪ್ಪ, ತಾ.ಕಜಾಪ ಅಧ್ಯಕ್ಷ ಬಿ.ಬಿ.ರೇವಣನಾಯ್ಕ್, ಸಾಹಿತ್ಯ ಸಂಗಮದ ಅಧ್ಯಕ್ಷ ವಿ.ಬಿ.ಕೊಟ್ರೇಶಪ್ಪ, ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ವಿಜಯ ಮಹಾಂತೇಶ, ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ರಮೇಶ್ ಮಾನೆ, ವೈಜ್ಞಾನಿಕ ಚಿಂತಕ ಹರಿ ಜಾದುಗಾರ್, ಸಾಹಿತಿ ಜೆ. ವಸುಪಾಲಪ್ಪ, ಹೊಳೆಸಿರಿಗೆರೆ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಎಸ್.ಬಿ.ಮಹಬೂಬ್ ಭಾಷಾ ಹಾಗು ಇತರರು ಇದ್ದರು.

# ಜ.14ರ ಹರಜಾತ್ರೆ ಮುಂದೂಡಿಕೆ



(1ನೇ ಪುಟದಿಂದ) ಮನೆಯಲ್ಲಿಯೇ ಹರಮಾಲೆ ಸಂಕಲ್ಪ ಸಮರ್ಪಣೆ ಮಾಡಬೇಕು. ಇನ್ನು ಮುಂದೆ ರುದ್ರಾಕ್ಷಿ ಮಾಲೆ ತೊಟ್ಟು ಪ್ರತಿದಿನ ಹರ ಮಂತ್ರ ಪಠಿಸಬೇಕು ಎಂದು ಸ್ವಾಮೀಜಿ ತಿಳಿಸಿದರು.

ಹರಜಾತ್ರೆಗೆ ಆಹ್ವಾನಿತರಾಗಿದ್ದ ಉಪ ರಾಷ್ಟ್ರಪತಿ ವೆಂಕಯ್ಯನಾಯ್ಡು ಹಾಗೂ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರು ಹರಜಾತ್ರೆ ಮುಂದೂಡಲು ಸಲಹೆ ನೀಡಿದ್ದರು. ಮುಂದಿನ ದಿನಗಳಲ್ಲಿ ನಡೆಯುವ ಜಾತ್ರೆಯಲ್ಲಿ ತಾವು ಪಾಲ್ಗೊಳ್ಳುವುದಾಗಿ ಭರವಸೆ ನೀಡಿದ್ದಾರೆ ಎಂದು ಶ್ರೀಗಳು ತಿಳಿಸಿದರು.

ಸಮಾಜದ ಮುಖಂಡರಾದ ಬಿ.ಸಿ. ಉಮಾಪತಿ, ನಾಗನಗೌಡ್ರು, ಪಿ.ಡಿ. ಶಿರೂರ, ಚಂದ್ರಶೇಖರ ಪೂಜಾರ, ಸೋಮನಗೌಡ ಪಾಟೀಲ, ಮಹೇಶ ಹಾವೇರಿ, ಪ್ರಕಾಶ್ ಪಾಟೀಲ, ಬಸವನಗೌಡ್ರು ತೊಂಡಿಹಾಳ, ಶ್ರೀಮತಿ ವಸಂತ ಹುಲ್ಲತ್ತಿ, ಸುನಂದಮ್ಮ, ಗೀತಮ್ಮ ಮತ್ತಿತರರು ಉಪಸ್ಥಿತರಿದ್ದರು.

# ಹರಪನಹಳ್ಳಿಯಲ್ಲಿ ಚಂಪಾ ನಿಧನಕ್ಕೆ ಸಂತಾಪ



ಹರಪನಹಳ್ಳಿ, ಜ.10 - ಕನ್ನಡದ ಕವಿ, ನಾಟಕಕಾರ, ವಿಮರ್ಶಕ, ಹೋರಾಟಗಾರ ಚಂಪಾ ಎಂದೇ ಹೆಸರಾಗಿದ್ದ ಡಾ. ಚಂದ್ರಶೇಖರ್ ಪಾಟೀಲ್ ಬೆಂಗಳೂರಿನಲ್ಲಿ ನಿಧನರಾಗಿದ್ದಾರೆ.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ರಾಮನಮಲಿ, ಕಸಾಪ ಮಾಜಿ ಅಧ್ಯಕ್ಷ ಬಿ.ರಾಮಪ್ರಸಾದ್ ಗಾಂಧಿ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಸಿದ್ದಲಿಂಗನಗೌಡ್ರು, ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ಬಸವರಾಜ ಸಂಗಪ್ಪನವರ್, ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ, ಶಶಿಧರ ಪೂಜಾರ್ ಪ್ರಗತಿ ಪರ ಸಂಘಟನೆಯ ಹೊಸಹಳ್ಳಿ ಮಲ್ಲೇಶ್, ಗುಡಿಹಳ್ಳಿ ಹಾಲೇಶ್, ಸಾಹಿತಿ ಇಸ್ಮಾಯಿಲ್ ಎಲಿಗಾರ್ ಸೇರಿದಂತೆ, ಇತರರು ಸಂತಾಪ ಸೂಚಿಸಿದ್ದಾರೆ.

# ಅನಧಿಕೃತ ಬಡಾವಣೆಗಳ ನಿರ್ಮಾಣ ತಡೆಗೆ ಸೂಚನೆ



(1ನೇ ಪುಟದಿಂದ) ಆರಕ್ಷಕ ಇಲಾಖೆಗೆ ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್ ಆದೇಶಿಸಿದ್ದಾರೆ.

ಸರ್ಕಾರದ ಸೂಚನೆಯಂತೆ ಸೋಮವಾರ ನಡೆದ ಸಭೆಯಲ್ಲಿ ದೂಡಾ ವ್ಯಾಪ್ತಿಯ ಪ್ರದೇಶದಲ್ಲಿ ಯಾವುದೇ ಅನಧಿಕೃತ ಬಡಾವಣೆಗಳು ನಿರ್ಮಾವಾಗದಂತೆ ತಡೆ ಹಿಡಿಯಲು ಕಟ್ಟು ನಿಟ್ಟಿನ ಕ್ರಮ ಜರುಗಿಸುವಂತೆ ಸೂಚಿಸಿದರು.

ಸಭೆಯಲ್ಲಿ ದೂಡಾ ಅಧ್ಯಕ್ಷ ಬಿ.ಟಿ. ಕುಮಾರ ಸ್ವಾಮಿ, ಸಹಾಯಕ ಕಾರ್ಯಪಾಲಕ ಅಭಿಯಂತರ ಕೆ.ಹೆಚ್. ಶ್ರೀಕರ್, ಸದಸ್ಯರುಗಳಾದ ಮಾರುತಿ ರಾವ್ ಘಾಟ್ಗೆ, ಲಕ್ಷ್ಮಣ, ಬಾತಿ ಚಂದ್ರಶೇಖರ್, ಗೌರಮ್ಮ ವಿ. ಪಾಟೀಲ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಪಾಲ್ಗೊಂಡಿದ್ದರು.

# ಹರಪನಹಳ್ಳಿ ತಾಲ್ಲೂಕಿನಲ್ಲಿ ಇಂದು ಸಂಸದ ಸಿದ್ದೇಶ್ವರ ಅವರ ಪ್ರವಾಸ

ದಾವಣಗೆರೆ ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಇಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12 ರವರೆಗೆ ಹರಪನಹಳ್ಳಿ ವಿಧಾನಸಭಾ ಕ್ಷೇತ್ರದ ನಾಗತಿಕಟ್ಟೆ, ಚಿಕ್ಕಮೇಗಳಗೆರೆ, ವಡ್ಡಿನಹಳ್ಳಿ ಮತ್ತು ಹಿರೇಮೇಗಳಗೆರೆ ಗ್ರಾಮಗಳಲ್ಲಿ ನಡೆಯಲಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸುವರು.

# ರಾಜನಹಳ್ಳಿ ಮಠ ತಲುಪಿದ ನೂತನ ರಥದ ಬಿಡಿಭಾಗಗಳು





## ಹರಿಹರ, ರಾಜನಹಳ್ಳಿಯಲ್ಲಿ ಸಂಭ್ರಮದ ಸ್ವಾಗತ

ಮಲೇಬೆನ್ನೂರು, ಜ.10- ಯಲ್ಲಾಪುರದಲ್ಲಿ ಕೆತ್ತನೆಗೊಂಡಿರುವ ವಾಲ್ಮೀಕಿ ಗುರುಪೀಠದ ನೂತನ ರಥದ ಬಿಡಿ ಭಾಗಗಳನ್ನು ಹೊತ್ತ 2 ಬೃಹತ್ ಲಾರಿಗಳು ಸೋಮವಾರ ಬೆಳಿಗ್ಗೆ ಹಂಪಿಯಿಂದ ಹೊರಟು ಹೊಸಪೇಟೆ, ಮರಿಯಮ್ಮನಹಳ್ಳಿ, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ, ಹರಿಹರ, ಕುಮಾರಪಟ್ಟಣಂ ಮಾರ್ಗವಾಗಿ ಸಂಜೆ ರಾಜನಹಳ್ಳಿ ಮಠ ತಲುಪಿದವು.

ರಾಜನಹಳ್ಳಿ ಪುರ ಪ್ರವೇಶ ಮಾಡಿದ 2 ಲಾರಿಗಳಿಗೆ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿ, ಪುಣ್ಯಕೋಟಿ ಮಠದ ಸ್ವಾಮೀಜಿ ಹಾಗೂ ನೂರಾರು ಭಕ್ತರು ಹೂ ಮಾಲೆ ಹಾಕಿ ಪೂಜೆ ಸಲ್ಲಿಸಿ ಬರಮಾಡಿಕೊಂಡರು. 1.70 ಕೋಟಿ ರೂ ವೆಚ್ಚದಲ್ಲಿ ಸಿದ್ದಗೊಂಡಿರುವ ನೂತನ ರಥಕ್ಕೆ ಸಚಿವ ಆನಂದ್‌ಸಿಂಗ್ ಅವರು 1.40 ಕೋಟಿ ರೂ, ಸಂಸದ ಅರಸೀಕೆರೆ ದೇವೇಂದ್ರಪ್ಪ ಅವರು 10 ಲಕ್ಷ ರೂ, ಶಾಸಕ ಜಿ.ಟಿ. ದೇವೇಗೌಡ ಅವರು 10 ಲಕ್ಷ ರೂ ಮತ್ತು ಉಳಿದ 10 ಲಕ್ಷ ರೂ.ಗಳನ್ನು 10 ಜನ ಭಕ್ತರು ತಲಾ 1 ಲಕ್ಷ ರೂ. ಗಳಂತೆ ದೇಣಿಗೆ ನೀಡಿದ್ದಾರೆಂದು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ತಿಳಿಸಿದರು.

ಬುಧವಾರದಿಂದ ಮಠದ ಆವರಣದಲ್ಲಿ ರಥಕ್ಕೆ ಬಿಡಿಭಾಗಗಳ ಜೋಡಣೆ ಕೆಲಸ ಆರಂಭವಾಗಲಿದ್ದು, ಫೆ. 5 ಕ್ಕೆ 65 ಅಡಿ ಎತ್ತರದ ರಥ ಸಜ್ಜಾಗಿ ನಿಲ್ಲಲಿದೆ ಎಂದು ಮಠದ ಧರ್ಮದರ್ಶಿ ಹೊಸಪೇಟೆಯ ಜಂಬಣ್ಣ ನಾಯಕ ಮಾಹಿತಿ ನೀಡಿದರು. ಮಠದ ಆಡಳಿತಾಧಿಕಾರಿ ಟಿ.ಓಬಳಪ್ಪ, ಧರ್ಮದರ್ಶಿಗಳಾದ ಬಿ. ವೀರಣ್ಣ, ನಲುವಾಗಲು ನಾಗರಾಜಪ್ಪ, ಕೆ.ಬಿ. ಮಂಜುನಾಥ್, ಗ್ರಾ.ಪಂ. ಅಧ್ಯಕ್ಷೆ ಚೈತ್ರ ಲಂಕೇಶ್ ಸೇರಿದಂತೆ, ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

ಇದಕ್ಕೂ ಮುನ್ನ ಹರಿಹರ ನಗರದ ಗಾಂಧಿ ವೃತ್ತದಲ್ಲಿ ಜಿ.ಪಂ. ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ತಾ. ನಾಯಕ ಸಮಾಜದ ಅಧ್ಯಕ್ಷ ಜಿಗಳಿ ರಂಗಪ್ಪ, ನಗರಸಭೆ ಸದಸ್ಯ ದಿನೇಶ್‌ಬಾಬು, ಮಾರುತಿ ಬೇಡರ್, ಜಿಲ್ಲಾ ವಾಲ್ಮೀಕಿ ಮಹಿಳಾ ಸಂಘದ ಅಧ್ಯಕ್ಷೆ ಶ್ರೀಮತಿ ವಿಜಯ ಶ್ರೀ ಮಹೇಂದ್ರ ಕುಮಾರ್, ಕಾರ್ಯದರ್ಶಿ ಗೌರಮ್ಮ ಮಂಜುನಾಥ್, ಹರಿಹರದ ಪಾರ್ವತಿ, ಮಲೇಬೆನ್ನೂರಿನ ಕೆ.ಜಿ. ರಂಗನಾಥ್, ಪಾಳೇಗಾರ್ ನಾಗರಾಜ್, ಪಾಲಾಕ್ಷಪ್ಪ, ಮಧು, ಮೂರ್ತಿ, ಆಟೋ ಹನುಮಂತ, ಹೆಚ್. ಸುಧಾಕರ್, ಪತ್ರಕರ್ತ ಜಿಗಳಿ ಪ್ರಕಾಶ್, ಮೆಣಸಿನಹಾಳ್ ಬಸವರಾಜ್ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದು, ರಥದ ಬಿಡಿಭಾಗಗಳನ್ನು ಹೊತ್ತು ಬಂದ ಲಾರಿಗಳನ್ನು ಸಂಭ್ರಮದಿಂದ ಸ್ವಾಗತಿಸಿ, ಬೀಳ್ಕೊಟ್ಟರು.

# ಕನ್ನಡದ ಸಾಕ್ಷಿ ಪ್ರಜ್ಞೆಯಂತಿದ್ದ ಚಂಪಾ: ಪ್ರೊ. ರಂಗನಾಥ್

ದಾವಣಗೆರೆ, ಜ. 10- ಪ್ರತಿಭೆ, ಬಂಡಾಯ ಮನೋಭಾವ, ವೈಚಾರಿಕತೆಗಳ ಸಂಗಮ ಹಾಗು ಕನ್ನಡದ ಸಾಕ್ಷಿ ಪ್ರಜ್ಞೆಯಂತಿದ್ದ ಹೆಸರಾಂತ ಸಾಹಿತಿ ಚಂಪಾ ನಿಧನಕ್ಕೆ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರೂ ಆದ ಸಿರಿಗೆರೆ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಪ್ರೊ. ಎಸ್.ಬಿ. ರಂಗನಾಥ್ ಸಂತಾಪ ಸೂಚಿಸಿದ್ದಾರೆ. ಪ್ರಾಧ್ಯಾಪಕರಾಗಿ, ಸಾಹಿತಿಯಾಗಿ, ಪತ್ರಕರ್ತರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ, ದಣಿವರಿಯದ ಹೋರಾಟಗಾರರಾಗಿದ್ದ ಚಂಪಾ, ಕನ್ನಡಕ್ಕೆ ಸಲ್ಲಿಸಿರುವ ಸೇವೆ ಚಿರಸ್ಮರಣೀಯ. ವರ್ಣರಂಜಿತ ಪತ್ರಕರ್ತ/ ಸಾಹಿತಿ ಖುಷ್ವಂತ ಸಿಂಗ್ ಅವರ 'ಬಾಟಮ್ ಪಿಂಚರ್' ಎಂಬ ಪ್ರಸಿದ್ಧ ಹಾಸ್ಯ ಕಥೆಯ ಅನುವಾದವನ್ನು ಚಂಪಾರವರ 'ಸಂಕ್ರಮಣ' ಪತ್ರಿಕೆ ಯಲ್ಲಿ ಪ್ರಕಟಿಸಿದ್ದನ್ನು ರಂಗನಾಥ್ ನೆನಪಿಸಿಕೊಂಡರು.

# ಇಂದು - ನಾಳೆ 'ಸುಕಲ್ಪ' ರಾಜ್ಯಮಟ್ಟದ ತಾಂತ್ರಿಕ ಸ್ಪರ್ಧೆ

ದಾವಣಗೆರೆ, ಜ.10- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಾಳೆ ದಿನಾಂಕ 11 ಮತ್ತು 12 ರಂದು 'ಸುಕಲ್ಪ' ರಾಜ್ಯಮಟ್ಟದ ತಾಂತ್ರಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸ್ಪರ್ಧೆಯು ಪ್ರಬಂಧ ಮಂಡನೆ, ಕೋಡಿಂಗ್, ಪರಿಕಲ್ಪನಾ ಪ್ರಸ್ತುತಿ ಮುಂತಾದವುಗಳನ್ನು ಒಳಗೊಂಡಿರುತ್ತದೆ. ಐಎಸ್‌ಟಿಇ ಸಹಯೋಗದಲ್ಲಿ ನಡೆಯುವ ಈ ಸ್ಪರ್ಧೆ ತಾಂತ್ರಿಕ ಸಂಸ್ಥೆಗಳಾದ ಬಿಪಿಎ ಲ್ಯಾಬ್ಸ್ ಹಾಗೂ ಸೂಕ್ಷ್ಮಸ್ ಸಹಯೋಗದಲ್ಲಿ ನಡೆಯಲಿದೆ ಎಂದರು.

ನಾಳೆ ದಿನಾಂಕ 11 ರ ಮಂಗಳವಾರ ಬೆಳಿಗ್ಗೆ 9.30 ಕ್ಕೆ ಉದ್ಘಾಟನಾ ಕಾರ್ಯಕ್ರಮ ನಡೆಯಲಿದ್ದು, ಬೆಂಗಳೂರಿನ ಆರ್‌ವಿಸಿಇ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಜಿ.ಎಸ್. ಶರ್ವಾಣಿ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದು, ಐಎಸ್ ಅಂಡ್ ಇ ಮುಖ್ಯಸ್ಥ ಡಾ. ಬಿ.ಎಸ್. ಸುನೀಲ್ ಕುಮಾರ್, ಸಂಯೋಜಕರಾದ ಎಂ.ಬಿ. ನಸ್ರಿನ್‌ತಾಜ್, ಸಿ. ಅಮಿತ್ ಶೇಖರ್ ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಟ್ರೈನಿಂಗ್ ಅಂಡ್ ಪ್ಲೇಸ್‌ಮೆಂಟ್ ಅಧಿಕಾರಿ ತೇಜಸ್ವಿ ಕಟ್ಟಿಮನಿ, ಸಂಯೋಜಕರಾದ ಅಮಿತ್ ಶೇಖರ್ ಉಪಸ್ಥಿತರಿದ್ದರು.

# ಸುರಕ್ಷತೆಗೆ ತರುವ ಗುರಿ

(1ನೇ ಪುಟದಿಂದ) ನಿಜವಾದ ರಕ್ಷಕರಾಗಿದ್ದಾರೆ. ಯೋಧರು ದೇಶವನ್ನು ರಕ್ಷಿಸುವಂತೆ ಕೊರೊನಾ ಯೋಧರು ದೇಶದ ಪ್ರತಿಯೊಂದು ಕುಟುಂಬವನ್ನು ರಕ್ಷಿಸುತ್ತಿದ್ದಾರೆ ಎಂದು ತಿಳಿಸಿದರು.

ಕರ್ತವ್ಯ ನಿರ್ವಹಿಸುವಾಗ ಹಲವಾರು ತೊಂದರೆಗಳನ್ನು ಎದುರಿಸಿದರೂ, ಅವುಗಳನ್ನು ಲೆಕ್ಕಿಸದೇ ಆಶಾ ಕಾರ್ಯಕರ್ತರು, ವೈದ್ಯರು, ನರ್ಸ್‌ಗಳೂ ಸೇರಿದಂತೆ ಮುಂಚೂಣಿ ಕಾರ್ಯಕರ್ತರು ಅಮೋಘ ಸೇವೆ ಸಲ್ಲಿಸುತ್ತಿದ್ದು, ದೇಶದ ನಿಜವಾದ ರಕ್ಷಕರಾಗಿದ್ದಾರೆ ಎಂದು ಮುಖ್ಯಮಂತ್ರಿಗಳು ಪ್ರಶಂಸಿಸಿದರು.




ಚಿರಸ್ಮರಣೆ

ತಾವು ನಮ್ಮನ್ನಗಲಿ ಇಂದಿಗೆ 28 ವರ್ಷಗಳಾದವು. ತಾವು ಹಾಕಿ ಕೊಟ್ಟ ಸನ್ಮಾರ್ಗ, ಸನ್ನಡತೆ ಹಾಗೂ ಸದಾ ತಮ್ಮ ನೆನಪಿನಲ್ಲಿರುವ:

ಶ್ರೀಮತಿ ಕಲ್ಲಮ್ಮನವರು
ನಿಧನ: 11-01-1994

ತಮ್ಮ ಪತಿ, ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು.


# ಹಿರಿಯ ಸಾಹಿತಿ ಚಂಪಾ ಇನ್ನಿಲ್ಲ

(1ನೇ ಪುಟದಿಂದ) ಇಂಗ್ಲಿಷ್ ಸಂಸ್ಥೆ ಯಿಂದ ಇಂಗ್ಲಿಷ್ ಅಧ್ಯಯನದ ಡಿಪ್ಲೋಮಾ ಪಡೆದಿದ್ದರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ಇಂಗ್ಲಿಷ್ ವಿಭಾಗದಲ್ಲಿ ಅವರು ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ಸಂಕ್ರಮಣ ಎಂಬ ಸಾಹಿತ್ಯ ಪತ್ರಿಕೆಯನ್ನು ನಡೆಸಿಕೊಂಡು ಬಂದಿದ್ದ ಅವರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಹಾವೇರಿ, ಧಾರವಾಡದಲ್ಲಿ ಶಿಕ್ಷಣ ಪೂರೈಸಿದ್ದ ಅವರು, ಕಾಲೇಜು ವಿದ್ಯಾರ್ಥಿಯಾಗಿದ್ದಾಗ ವಿ.ಕೃ. ಗೋಕಾಕರ ಮಾರ್ಗದರ್ಶನ ಪಡೆದಿದ್ದರು. ವಿದ್ಯಾರ್ಥಿಯಾಗಿದ್ದಾಗ ಬಾನುಲಿ ಎಂಬ ಕವನ ಸಂಕಲನ ಪ್ರಕಟಿಸಿದ್ದರು. ಕಾವ್ಯ ಕೃಷಿಗಾಗಿ ಅವರು ನವ್ಯ ಮಾರ್ಗವನ್ನು ಆಯ್ಕೆ ಮಾಡಿಕೊಂಡಿದ್ದರು.

ಧಾರವಾಡದ ಸ್ನೇಹಿತರಾದ ಗಿರಡ್ಡಿ ಗೋವಿಂದರಾಜು ಹಾಗೂ ಸಿದ್ದಲಿಂಗ ಪಟ್ಟಣಶೆಟ್ಟಿ ಜೊತೆ ಸೇರಿ ಅವರು 1964ರಲ್ಲಿ ಸಂಕ್ರಮಣ ದ್ವೈಮಾಸಿಕ ಸಾಹಿತ್ಯ ಪತ್ರಿಕೆ ಆರಂಭಿಸಿದ್ದರು. ನಿರಂತರವಾಗಿ ಪತ್ರಿಕೆ ಪ್ರಕಟವಾಗುವಂತೆ ಚಂಪಾ ಕಾಳಜಿ ವಹಿಸಿದ್ದರು.

ಕರ್ನಾಟಕ ವಿ.ವಿ. ಇಂಗ್ಲಿಷ್ ವಿಭಾಗದ ಪ್ರಾಧ್ಯಾಪಕರಾಗಿ ಹಾಗೂ ನಂತರ ಛೇರ್‌ಮನ್ ಆಗಿದ್ದ ಅವರು, ನಿವೃತ್ತಿ ನಂತರ ಬೆಂಗಳೂರಿನಲ್ಲಿ ವಾಸವಾಗಿದ್ದರು.

ಚಂಪಾ ಅವರು ಸಂಕ್ರಮಣ ಕಾವ್ಯ, ಗಾಂಧಿ ಗಾಂಧಿ, ಜೂನ್ 75 - ಮಾರ್ಚ್ 77, ಬಂಡಾಯ ಮತ್ತು ಸಾಹಿತ್ಯ, ನೆಲ್ಸನ್ ಮಂಡೇಲಾ, ಕನ್ನಡನಾಡಿಗೊಂದು ಪ್ರಾದೇಶಿಕ ಪಕ್ಷ, ಮತ್ತಿತರೆ ಕೃತಿಗಳನ್ನು ಸಂಪಾದಿಸಿದ್ದಾರೆ.

ಅವರು ಕೇಂದ್ರ ಸಾಹಿತ್ಯ ಅಕಾಡೆಮಿ, ರಾಜ್ಯ ಸಾಹಿತ್ಯ ಅಕಾಡೆಮಿ, ದಿನಕರ ದೇಸಾಯಿ ಪ್ರತಿಷ್ಠಾನ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಸಾಹಿತ್ಯವಷ್ಟೇ ಅಲ್ಲ ಹೋರಾಟದಲ್ಲೂ ಚಂಪಾರದ್ದು ದೊಡ್ಡ ಹೆಸರು. ತುರ್ತು ಪರಿಸ್ಥಿತಿ ವಿರುದ್ಧ ಹೋರಾಟ ನಡೆಸಿದ್ದ ಅವರು, ಜಯಪ್ರಕಾಶ್ ನಾರಾಯಣ್ ಅವರ ಚಳುವಳಿ ಬೆಂಬಲಿಸಿ ಜೈಲುವಾಸ ಸಹ ಅನುಭವಿಸಿದ್ದರು.

ಚಂಪಾ ನಿಧನಕ್ಕೆ ಸಿಎಂ ಬಸವರಾಜ ಬೊಮ್ಮಾಯಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಗೃಹ ಸಚಿವ ಆರಗ ಜ್ಞಾನೇಂದ್ರ, ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಸೇರಿದಂತೆ, ಹಲವರು ಸಂತಾಪ ಸೂಚಿಸಿದ್ದಾರೆ.


## ದಾವಣಗೆರೆ ನಗರದ ರೇವಣಸಿದ್ದಪ್ಪ ಬಾದಾಮಿ ನಿಧನ



ದಾವಣಗೆರೆ ನಗರದ ಎಂಸಿಸಿ 'ಬಿ' ಬ್ಲಾಕ್ ವಾಸಿಯಾದ
ಶ್ರೀಮತಿ ಸುಮಂಗಲ ಬಾದಾಮಿ ಅವರ ಪತಿ ಹಾಗೂ ನೇತ್ರದಾನಿ

**ಶ್ರೀ ರೇವಣಸಿದ್ದಪ್ಪ ಬಿ. ಬಾದಾಮಿ** (85 ವರ್ಷ)

ಇವರು ದಿನಾಂಕ 10.1.2022ರ ಸೋಮವಾರ ಬೆಳಗ್ಗೆ 10.50ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರಿ, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10.01.2022ರ ಸೋಮವಾರ ಸಂಜೆ 5.30ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿತು.

ದುಃಖತಪ್ತರು :

**ಆರ್.ಬಿ. ಸುಮಂಗಲ ಬಾದಾಮಿ ಮತ್ತು ಬಾದಾಮಿ ವಂಶಸ್ಥರು, ದಾವಣಗೆರೆ.**


# ಸ್ವತ್ತುಗಳನ್ನು ವಾರಸುದಾರರ ಕೈ ಸೇರಿಸಿದ ಜಿಲ್ಲಾ ಪೊಲೀಸ್

(1ನೇ ಪುಟದಿಂದ) 35 ಸಾವಿರ ನಗದು, ಇತರೆ ಸೇರಿ ಒಟ್ಟು 31 ಲಕ್ಷದ 19 ಸಾವಿರ ಮೌಲ್ಯದ ಸ್ವತ್ತು. ಚನ್ನಗಿರಿ ಉಪ ವಿಭಾಗ ವ್ಯಾಪ್ತಿಯಲ್ಲಿ 21 ಲಕ್ಷದ 56 ಸಾವಿರ ಮೌಲ್ಯದ ಚಿನ್ನಾಭರಣ, 13 ಲಕ್ಷದ 20 ಸಾವಿರ ಮೌಲ್ಯದ ವಾಹನಗಳು, 8 ಲಕ್ಷದ 77 ಸಾವಿರ ನಗದು ಹಾಗೂ ಇತರೆ ಸೇರಿ ಒಟ್ಟು 49 ಲಕ್ಷದ 36 ಸಾವಿರ ಮೌಲ್ಯದ ಸ್ವತ್ತು.

ಈ ಮೂರು ವಿಭಾಗಗಳು ಸೇರಿ ಒಟ್ಟು 84.12 ಲಕ್ಷ ಮೌಲ್ಯದ 1740.329 ಗ್ರಾಂ ಚಿನ್ನ, 1751.544 ಬೆಳ್ಳಿ. ದಾವಣಗೆರೆಯ ಬಡಾವಣೆ, ಕೆಟಿಜೆ ನಗರ, ವಿದ್ಯಾನಗರ, ಹರಿಹರ ಗ್ರಾಮಾಂತರ ಸೇರಿದಂತೆ ಇತರೆ ಪೊಲೀಸ್ ಠಾಣೆ ಪ್ರದೇಶದಲ್ಲಿ ಕಳ್ಳತನವಾಗಿದ್ದ 20 ಕಾರು, ಬೈಕ್‌ಗಳು, ಪ್ರಯಾಣಿಕರ 2 ಆಟೋ ಸೇರಿದಂತೆ ಒಟ್ಟು 80.63 ಲಕ್ಷ ಮೌಲ್ಯದ 97 ವಿವಿಧ ವಾಹನಗಳನ್ನು ಪತ್ತೆ ಮಾಡಲಾಗಿದೆ. ಇನ್ನೂ 21.56 ಲಕ್ಷ ನಗದು ಮತ್ತು 2 ಕೋಟಿ 77 ಲಕ್ಷದ 57 ಸಾವಿರದ ಇತರೇ ವಸ್ತುಗಳು ಸೇರಿದಂತೆ ಒಟ್ಟು 4 ಕೋಟಿ 63 ಲಕ್ಷದ 89 ಸಾವಿರದ 662 ರೂ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಎಸ್ಪಿ ಸಿ.ಬಿ. ರಿಷ್ಯಂತ್ ಸುದ್ದಿಗಾರರಿಗೆ ಮಾಹಿತಿ ನೀಡಿದರು.

**ರೈತರ ಕೈ ಸೇರಿದ ವಂಚನೆಯಾಗಿದ್ದ ಹಣ** : ಮೆಕ್ಕೆಜೋಳ ಖರೀದಿಸಿ ರೈತರು ಮತ್ತು ವರ್ತಕರಿಂದ ಮೆಕ್ಕೆಜೋಳ ಖರೀದಿಸಿ ಹಣ ನೀಡದೇ ವಂಚಿಸಿದ್ದ ಪ್ರಕರಣ ಆರ್‌ಎಂಸಿ ಯಾರ್ಡ್‌ನ ಪೊಲೀಸ್ ಠಾಣೆಯಲ್ಲಿ ದಾಖಲಾಗಿತ್ತು. ವಿಶೇಷವಾದ ಈ ಪ್ರಕರಣವನ್ನು ವಿಶೇಷ ತಂಡ ತನಿಖೆ ನಡೆಸಿ, ರೈತರ 1 ಕೋಟಿ 51 ಲಕ್ಷದ 86 ಸಾವಿರ ರೂ. ಹಾಗೂ ವರ್ತಕರ 1 ಕೋಟಿ 16 ಲಕ್ಷ ರೂ. ಸೇರಿ ಒಟ್ಟು 2 ಕೋಟಿ 76 ಲಕ್ಷದ 91 ಸಾವಿರ ರೂ ಪತ್ತೆ ಮಾಡಿತ್ತು. ಈ ಹಣವನ್ನು ಸಂಬಂಧಿಸಿದ ರೈತರು, ವರ್ತಕರಿಗೆ ಹಿಂದಿರುಗಿಸಲಾಯಿತು.

**67 ಕೆ.ಜಿ. ಚಿಪ್ಪು ಹಂದಿ ಚಿಪ್ಪು**: ಚಿಪ್ಪು ಹಂದಿ ಗಳ ಚಿಪ್ಪನ್ನು ಶಿವಮೊಗ್ಗ ಜಿಲ್ಲೆಯಿಂದ ಮಹಾರಾಷ್ಟ್ರಕ್ಕೆ ಸಾಗಾಟ ಮಾಡುತ್ತಿದ್ದ ಪ್ರಕರಣ ಬೇಧಿಸಿ ಇಲ್ಲಿನ ಸಿಇಎನ್ ಅಪರಾಧ ಪೊಲೀಸರು 18 ಮಂದಿ ಆರೋಪಿಗಳನ್ನು ಬಂಧಿಸಿದ್ದರು. 67 ಕೆ.ಜಿ.ಯಷ್ಟು ಚಿಪ್ಪನ್ನು ವಶಪಡಿಸಿಕೊಳ್ಳಲಾಗಿತ್ತು. ಪ್ರಾಣಿ ರಕ್ಷಣೆ ಕಾಯ್ದೆಯಡಿ ಆರೋಪಿಗಳ ಮೇಲೆ ಪ್ರಕರಣ ದಾಖಲಾಗಿದೆ ಎಂದು ಎಸ್ಪಿ ಸಿ.ಬಿ. ರಿಷ್ಯಂತ್ ತಿಳಿಸಿದರು. ಈ ಚಿಪ್ಪನ್ನು ಅರಣ್ಯ ಇಲಾಖೆಗೆ ಹಸ್ತಾಂತರ ಮಾಡಲಾಗಿದೆ. ಈ ಚಿಪ್ಪನ್ನು ಔಷಧಿ ಮತ್ತು ಬುಲೆಟ್ ಪ್ರೂಫ್‌ಗೆ ಬಳಕೆ ಮಾಡಿಕೊಳ್ಳಲಾಗುತ್ತದೆ ಎಂಬ ಮಾಹಿತಿ ನೀಡಲಾಯಿತು.

**ಓ.ಜಿ. ಕುಪ್ಪಂ ಗ್ಯಾಂಗ್‌ನ 25 ಮಂದಿ ಬಂಧನ** : ಸಾರ್ವಜನಿಕರ ಗಮನವನ್ನು ಬೇರೆಡೆಗೆ ಸೆಳೆದು ಅವರ ಬಳಿ ಇದ್ದ ಹಣವನ್ನು ಕಳ್ಳತನ ಮಾಡುತ್ತಿದ್ದ ಓ.ಜಿ. ಕುಪ್ಪಂ ಗ್ಯಾಂಗ್‌ನ 25 ಜನ ಕಳ್ಳರನ್ನು ಬಂಧಿಸಲಾಗಿದೆ. ಜಿಲ್ಲೆಯಲ್ಲಿ ಜನರ ಗಮನವನ್ನು ಬೇರೆಡೆಗೆ ಸೆಳೆದು ಅವರಿಂದ ಹಣ ಕಳ್ಳತನ ಮಾಡಲಾಗುತ್ತಿತ್ತು. ಇಂತಹ ಬಹಳಷ್ಟು ಪ್ರಕರಣಗಳು ಬ್ಯಾಂಕ್‌ಗಳ ಮುಂದೆ ನಡೆಯುತ್ತಿದ್ದವು. ಇದು ಆಂಧ್ರ ಪ್ರದೇಶದ ಓ.ಜಿ. ಕುಪ್ಪಂ ಗ್ಯಾಂಗ್‌ನ ಕೃತ್ಯ ಎಂದು ಕಂಡು ಬಂದಿತ್ತು. ಈ ಹಿನ್ನೆಲೆಯಲ್ಲಿ ಪೊಲೀಸರು ಈ ತಂಡದ ಹಿಂದೆ ಬಿದ್ದು 25 ಜನರನ್ನು ಬಂಧಿಸಿದ್ದಾರೆ. ಇದು ಪೊಲೀಸ್ ಇಲಾಖೆಗೆ ಹೆಮ್ಮೆಯ ಸಂಗತಿ ಎಂದು ಎಸ್ಪಿ ರಿಷ್ಯಂತ್ ತಿಳಿಸಿದರು.

# ಲಕ್ಷಣ ಇಲ್ಲದಿದ್ದರೆ ಅಡ್ಮಿಟ್ ಮಾಡಿಕೊಳ್ಳುವ ಅಗತ್ಯವಿಲ್ಲ

(1ನೇ ಪುಟದಿಂದ) ಮಾಡಿದಲ್ಲಿ ಅಂತಹವರ ವಿರುದ್ಧ ಕಾನೂನಾತ್ಮಕ ಕ್ರಮ ಕೈಗೊಳ್ಳುವ ಜೊತೆಗೆ ಆಸ್ಪತ್ರೆಗಳನ್ನು ಬಂದ್ ಮಾಡಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಖಾಸಗಿ ಆಸ್ಪತ್ರೆಗಳು ಕೂಡ ಜ್ವರ, ನೆಗಡಿ, ಕೆಮ್ಮು ಮುಂತಾದ ರೋಗ ಲಕ್ಷಣ ಹೊಂದಿರುವವರಿಗೆ ಕಡ್ಡಾಯವಾಗಿ ಆರ್‌ಟಿಪಿಸಿಆರ್ ಪರೀಕ್ಷೆಗೆ ಶಿಫಾರಸು ಮಾಡಬೇಕು. ಈ ಕುರಿತ ವರದಿಯನ್ನು ಆರೋಗ್ಯ ಇಲಾಖೆಗೆ ಸಲ್ಲಿಸಬೇಕು. ಸಾರ್ವಜನಿಕರೂ ಕೂಡ ಸೋಂಕು ದೃಢಪಟ್ಟು ರೋಗ ಲಕ್ಷಣಗಳು ಇಲ್ಲದಿದ್ದಲ್ಲಿ ವೈದ್ಯರ ಸಲಹೆ, ಸೂಚನೆಯಂತೆ ಔಷಧೋಪಚಾರ ಪಡೆದು ಮನೆಯಲ್ಲಿಯೇ ಹೋಂ ಐಸೋಲೇಷನ್ ಆಗಿರಬೇಕು. ಇಂತಹವರ ಮನೆಗೆ ಹೋಂ ಐಸೋಲೇಷನ್ ಸ್ಟಿಕ್ಕರ್‌ಗಳನ್ನು ಅಧಿಕಾರಿಗಳು ಅಂಟಿಸಿ ನಿಗಾ ವಹಿಸಬೇಕು ಎಂದರು.

**ಟೆಸ್ಟ್ ಹೆಚ್ಚಿಸಿ** : ಸೋಂಕು ದೃಢಪಟ್ಟವರ ಪ್ರಾಥಮಿಕ ಹಾಗೂ ದ್ವಿತೀಯ ಹಂತದ ಸಂಪರ್ಕಿತರನ್ನು ಪತ್ತೆ ಹಚ್ಚಿ, ಅವರೆಲ್ಲರಿಗೂ ಕೋವಿಡ್ ಟೆಸ್ಟ್ ತಪ್ಪದೇ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

**ಖಾಸಗಿ ಆಸ್ಪತ್ರೆ, ಮೆಡಿಕಲ್ ಕಾಲೇಜುಗಳ ಸಹಕಾರ** : ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಪ್ರಕರಣಗಳು ಕಂಡುಬಂದಲ್ಲಿ ಜಿಲ್ಲಾಸ್ಪತ್ರೆಯನ್ನು ಸಂಪೂರ್ಣ ಕೋವಿಡ್ ಆಸ್ಪತ್ರೆಯನ್ನಾಗಿಸಲಾಗುವುದು. ಈ ವೇಳೆ ಜಿಲ್ಲಾ ಆಸ್ಪತ್ರೆಗೆ ಕೋವಿಡ್ ಹೊರತುಪಡಿಸಿ, ಇತರೆ ಕಾಯಿಲೆಗಳಿಗಾಗಿ ಬರುವ ರೋಗಿಗಳನ್ನು ಖಾಸಗಿ ಆಸ್ಪತ್ರೆಗಳಿಗೆ ಶಿಫಾರಸ್ಸು ಮಾಡಲಾಗುವುದು. ಅಂತಹ ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡುವ ಮೂಲಕ ಖಾಸಗಿ ಆಸ್ಪತ್ರೆಗಳು, ವೈದ್ಯಕೀಯ ಕಾಲೇಜುಗಳು ಸಹಕರಿಸಬೇಕು ಎಂದು ಜಿಲ್ಲಾಧಿಕಾರಿಗಳು ಮನವಿ ಮಾಡಿದರು.

ಸರ್ಕಾರದ ಆದೇಶದಂತೆ ಖಾಸಗಿ ಆಸ್ಪತ್ರೆಗಳು ಶೇ. 50 ರಷ್ಟು ಹಾಗೂ ಖಾಸಗಿ ಮೆಡಿಕಲ್ ಕಾಲೇಜುಗಳು ಶೇ. 75 ರಷ್ಟು ಬೆಡ್‌ಗಳನ್ನು ಸರ್ಕಾರಕ್ಕೆ ಬಿಟ್ಟುಕೊಡಬೇಕು. ಈ ಬಗ್ಗೆ ಯಾವುದೇ ರಾಜೀ ಇಲ್ಲ. ಸರ್ಕಾರಿ ವೈದ್ಯರಿಂದ ಶಿಫಾರಸ್ಸು ತರುವ ರೋಗಿಗಳಿಗೆ ಎಬಿಎಆರ್‌ಕೆ ಯೋಜನೆಯಡಿ ದಾಖಲಿಸಿ, ಉಚಿತವಾಗಿ ಚಿಕಿತ್ಸೆ ಕೊಡಬೇಕು, ಸರ್ಕಾರದ ಸೂಚನೆಯಂತೆ ಎಬಿಎಆರ್‌ಕೆ ಕಾರ್ಡ್ ಹೊರತುಪಡಿಸಿ, ರೋಗಿಗಳಿಂದ ಯಾವುದೇ ದಾಖಲೆ ಕೇಳಬಾರದು. ಅಲ್ಲದೆ, ಇಂತಹವರಿಂದ ಯಾವುದೇ ಬಗೆಯ ಮುಂಗಡ ಹಣ ಪಾವತಿಸಿಕೊಳ್ಳುವಂತಿಲ್ಲ ಎಂದರು.

**ಕೋವಿಡ್ ಕೇರ್ ಸೆಂಟರ್ ಪ್ರಾರಂಭಕ್ಕೆ ಸಿದ್ಧತೆ** : ಆಸ್ಪತ್ರೆಗಳಲ್ಲಿ ಆಕ್ಸಿಜನ್, ವೆಂಟಿಲೇಟರ್, ಮಾನಿಟರ್, ಐಸಿಯುಗಳು, ಆಕ್ಸಿಜನ್ ಕಾನ್ಸಂಟ್ರೇಟರ್ ಸಹ ಎಲ್ಲವೂ ಸಿದ್ಧವಾಗಿವೆ. ಅಗತ್ಯ ಮಾನವ ಸಂಪನ್ಮೂಲ, ಔಷಧಿಗಳು ಕೂಡ ವ್ಯವಸ್ಥೆಗೊಳಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ದಿನಕ್ಕೆ ಸಾವಿರ ಪ್ರಕರಣಗಳು ಕಂಡುಬರುವ ಎಲ್ಲ ಸಾಧ್ಯಗಳಿದ್ದು, ಎಎನ್‌ಎಂ ತರಬೇತಿ ಕೇಂದ್ರವನ್ನು ಕೋವಿಡ್ ಕೇರ್ ಸೆಂಟರ್ ಆಗಿ ಪ್ರಾರಂಭಿಸುವಂತೆ ಸೂಚನೆ ನೀಡಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ರಾಘವನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ, ಜಿ.ಪಂ. ಉಪಕಾರ್ಯದರ್ಶಿ ಆನಂದ್, ಡಿಹೆಚ್‌ಒ ಡಾ. ನಾಗರಾಜ್, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ. ಮೀನಾಕ್ಷಿ ಇತರರು ಉಪಸ್ಥಿತರಿದ್ದರು.

## ಯಾತ್ರಿಗಳ ಮೇಲೆ ನಿಗಾ

**(1ನೇ ಪುಟದಿಂದ) ದಂತೆ ಮಾಹಿತಿ ನೀಡಬೇಕು. ಇದೇ ರೀತಿ ಜಿಲ್ಲೆಯ ಎಲ್ಲ ನಗರ, ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ಮಾಹಿತಿ ಸಂಗ್ರಹಿಸಿ ಜಿಲ್ಲಾಡಳಿತಕ್ಕೆ ಸಲ್ಲಿಸಬೇಕು. ಮಾಹಿತಿ ನೀಡದ ಟ್ರಾವೆಲ್ಸ್‌ಗಳ ಅಂತರರಾಜ್ಯ ಓಡಾಟದ ಪರವಾನಗಿ ರದ್ದುಪಡಿಸಲು ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು. ಎಸ್ಪಿ ಸಿ.ಬಿ. ರಿಷ್ಯಂತ್ ಮಾತನಾಡಿ, ಈ ಕುರಿತು ಟ್ರಾವೆಲ್ ಏಜೆನ್ಸಿಯವರೊಂದಿಗೆ ಸಭೆ ನಡೆಸಿ ತಾಕೀತು ಮಾಡಲಾಗುವುದು ಎಂದರು.**

# ಶತಮಾನೋತ್ಸವದ ಸಂಭ್ರಮದಲ್ಲಿ ಚಿಗಟೇರಿ ಬಂಗ್ಲೆ

ದಾವಣಗೆರೆ ಎಂದಾಕ್ಷಣ 'ದೇವನಗರಿ' ಎಂಬ ಪುರಾಣ ಕಾಲದ ಹೆಸರು ನೆನಪಾಗುವಂತಹ ಐತಿಹ್ಯವಿದೆ. ಅಂತೆಯೇ ದಾವಣಗೆರೆಯಲ್ಲಿ ದೇವ ಮಾನವರಾಗಿ, ದೇವ ಪುರುಷನಾಗಿ ಜನ್ಮ ತಳೆದ 'ಧರ್ಮಪ್ರಕಾಶ' ಶ್ರೀ ಚಿಗಟೇರಿ ಮುರಿಗೆಪ್ಪನವರು ನೆನಪಾಗುತ್ತಾರೆ. ಇವರು ದಾವಣಗೆರೆಯ ಇತಿಹಾಸದಲ್ಲಿಯೇ ದಾನಶ್ರೇಷ್ಠರಲ್ಲಿ ಅಗ್ರಗಣ್ಯರು.



ಜನವರಿ 12, 2022 ಅವರ 65ನೇ ವರ್ಷದ ಪುಣ್ಯಸ್ಮರಣೆ ಜೊತೆಗೆ ಅವರು ಕಟ್ಟಿಸಿದ 'ಚಿಗಟೇರಿ ಬಂಗ್ಲೆ' '1921-2022 ಅದರ 100 ರ ಸಂಭ್ರಮ. ಈ ದಿನದ ವಿಶೇಷತೆಗಾಗಿ ಅವರ ಜೀವನ, ಸಾಧನೆ ವ್ಯಕ್ತಿತ್ವದ ಒಂದು ಸವಿನೆನಪು.

ನಗರದ ಚಿಗಟೇರಿ ಜನರಲ್ ಆಸ್ಪತ್ರೆ (CGH) ಎಂದೇ ಪ್ರಖ್ಯಾತಿ ಪಡೆದಿರುವ ಸರ್ಕಾರಿ ಆಸ್ಪತ್ರೆ ಇವರ ದಾನಗಳ ಸಾಲಿನಲ್ಲಿ ಮುಕುಟಮಣಿಯಾಗಿದೆ. CGH ಶಿಲಾನ್ಯಾಸಕ್ಕೆ ಅಂದಿನ ಮೈಸೂರು ಮಹಾರಾಜರಾದ ಶ್ರೀಮಾನ್ ಜಯಚಾಮರಾಜೇಂದ್ರ ಒಡೆಯರ್ ಬಂದಿದ್ದರು. ಆಸ್ಪತ್ರೆಯ ಉದ್ಘಾಟನೆಗೆ ಬಿ.ಡಿ. ಜತ್ತಿ ಮೈಸೂರು ರಾಜ್ಯದ ಮುಖ್ಯಮಂತ್ರಿ ಆಗಮಿಸಿದ್ದರು. CGHಗೆ ಇಂದು ದಾವಣಗೆರೆಯ ಸುತ್ತಮುತ್ತಲಿನ 4-5 ಜಿಲ್ಲೆಗಳಿಂದ ಚಿಕಿತ್ಸೆಗಾಗಿ, ಆಸ್ಪತ್ರೆಯ ಸೇವಾ ಸೌಲಭ್ಯಗಳಿಗೆ ರೋಗಿಗಳು ಬರುತ್ತಿರುವುದು ನಿಜಕ್ಕೂ ಪ್ರಶಂಸನೀಯವಾಗಿದೆ. ಆಸ್ಪತ್ರೆಯ ದಾನದ ಪುಣ್ಯ ಮುರಿಗೆಪ್ಪನವರಿಗೆ ಸಲ್ಲಬೇಕಾಗಿದೆ. ಇವರ ದಾನದ ಪರಂಪರೆಗೆ ಅಂದಿನ ಮೈಸೂರು ಮಹಾರಾಜರು 1947 ರಲ್ಲಿ ಇವರಿಗೆ 'ಧರ್ಮಪ್ರಕಾಶ' ಎಂಬ ಬಿರುದನ್ನು ಜೊತೆಗೆ ಬಂಗಾರದ ಪದಕ ನೀಡಿ ಗೌರವಿಸಿದರು.

ಮುರಿಗೆಪ್ಪನವರು 6-05-1887ರಂದು ದಾವಣಗೆರೆಯಲ್ಲಿ ಜನಿಸಿದರು. ತಂದೆ ಸಣ್ಣ ರಾಚಪ್ಪ, ತಾಯಿ ನಾಗಮ್ಮ ಇವರ 10ನೇ ಪುತ್ರರಾಗಿದ್ದರು. ಹುಟ್ಟುತ್ತಲೇ ತಂದೆಯನ್ನು ಕಳೆದುಕೊಂಡರು. ವಿದ್ಯಾಭ್ಯಾಸ 5ನೇ ತರಗತಿಗೆ ಕೊನೆಯಾಯಿತು. ಅಣ್ಣಂದಿರ ಜೊತೆಗೆ ವ್ಯಾಪಾರದಲ್ಲಿ ಸಹಾಯ ಮಾಡುತ್ತಾ ದಾವಣಗೆರೆಯಲ್ಲಿ 1905ರಲ್ಲಿ ಅರಳೆ (ಹತ್ತಿ) ಸರಕು ಸಾಗಣೆ ವ್ಯಾಪಾರ. ಶೇಂಗಾ ಎಣ್ಣೆ, ಜಿನ್ನಿಂಗ್ ಫ್ಯಾಕ್ಟರಿ ಕೊಟ್ಟೂರಿನಲ್ಲಿ ಆರಂಭಿಸಿ ಹಂತ ಹಂತವಾಗಿ ಪ್ರಗತಿ ಹೊಂದುತ್ತಾ, 1948 ರಲ್ಲಿ ಶಂಕರ್ ಮಿಲ್ ಸ್ಥಾಪನೆ. ನಂತರ ಚಿಗಟೇರಿ ಮಿಲ್ 1964ರಲ್ಲಿ ಸ್ಥಾಪಿತವಾದವು.



ಧರ್ಮಪ್ರಕಾಶ ಶ್ರೀ ಚಿಗಟೇರಿ ಮುರಿಗೆಪ್ಪನವರು (1887 - 1957) ಸವಿನೆನಪು

ಇವರ ಪ್ರಕಾರ ಬಟ್ಟೆಯ ಗಿರಣಿ ಕೇವಲ ಮಾಲೀಕರ ಗಳಿಕೆಯ ಮೂಲವಲ್ಲ, ನಾಡಿನ ಕೈಗಾರಿಕೋದ್ಯಮದ ಪ್ರಗತಿ ಮತ್ತು ನೂರಾರು ಜನ ಸ್ಥಳೀಯರಿಗೆ ಆಶ್ರಯ. ಅದರಂತೆ ಅಂದಿನ ದಾವಣಗೆರೆಯ ಜನಸಂಖ್ಯೆಗೆ ಅನುಗುಣವಾಗಿ ಇವರ ಮಿಲ್‌ಗಳಲ್ಲಿ ಸುಮಾರು 1200 ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದರು.

ಇವರ ವ್ಯಾಪಾರ ವಹಿವಾಟು ಹೊರ ರಾಜ್ಯಗಳಿಗೂ ವಿಸ್ತರಿಸಿತ್ತು. 'ಅರಳೆಯ ಅರಸ' Cotton of Magnet ಎಂಬ ಖ್ಯಾತಿ ಪಡೆದಿದ್ದರು. (ಮೀರಜ್, ಸಾಂಗ್ಲಿ, ಮುಂಬೈ, ಕಲ್ಕತ್ತಾ, ಕರಾಚಿ, ಅಹಮದಾಬಾದ್, ಪೂನಾ, ನಾಸಿಕ್, ಪಾಂಡಿಚೆರಿ) ಅರಳೆಯ ಪರೀಕ್ಷೆಯಲ್ಲಿ ದಾವಣಗೆರೆ ದಕ್ಷಿಣದಲ್ಲೇ ಅವರಷ್ಟು ಪರಿಣಿತಿ ಪಡೆದವರು ಆಗ ಯಾರೂ ಇರಲಿಲ್ಲ ಎಂದು ಅನೇಕ ಬಲ್ಲವರು ಹೇಳುತ್ತಾರೆ. ಮದ್ರಾಸು ಮತ್ತು ಬೆಂಗಳೂರಿನಲ್ಲಿರುವ ಬಿನ್ನಿ ಮಿಲ್ಸ್ ಅವರೊಡನೆ ಹಾಗೂ ಪಾಂಡಿಚೆರಿಯ ಆಂಗ್ಲೋ ಫ್ರೆಂಚ್ ಮಿಲ್ಸ್‌ನೊಡನೆ ನೇರ ಸಂಪರ್ಕ ಬೆಂಗಳೂರು, ಮದ್ರಾಸು ಹಾಗೂ ಪಾಂಡಿಚೆರಿ ಮಿಲ್ಲುಗಳಿಗೆ ಇದರಿಂದಲೇ ಭರವಸೆಯ ಅರಳೆ ಸರಬರಾಜು. ಎಲ್ಲಾ 'Test Guarantee' ಆಧಾರ. ಆಗ ಪಾಂಡಿಚೆರಿ ಫ್ರೆಂಚ್ ವಸಾಹತು. ಇಲ್ಲಿಂದ ಹರಳೆ (ಹತ್ತಿ) ಹೋಗಲು ಪರವಾನಗಿ ಇರಲಿಲ್ಲ. ಆದರೂ ಮುರಿಗೆಪ್ಪನವರು ಅಲ್ಲಿಗೂ ತಮ್ಮ ವ್ಯಾಪಾರದ ಹೆಜ್ಜೆಯಿಟ್ಟಿದ್ದರು. ಕರಾಚಿಗೆ ಹೋಗಿ ಅರಳೆಯನ್ನು ಕೊಂಡು ಅಲ್ಲಿಂದ ಸ್ಟೀಮರ್ ಮೂಲಕ ಪಾಂಡಿಚೆರಿಗೆ ಕಳುಹಿಸುತ್ತಿ ದ್ದರು. ಆಗ Tata Company ಯವರು (1943) ಟಪಾಲು ಸಾರಿಗೆಗಾಗಿ 4 ಜನ ಕೂರಬಹುದಾದ ಒಂದು ವಿಮಾನ ನಡೆಸುತ್ತಿ ದ್ದರು. ಮುರಿಗೆಪ್ಪನವರು ಆ ವಿಮಾನದಲ್ಲೇ ಕರಾಚಿ, ಮುಂಬೈ, ಅಹಮದಾಬಾದ್, ಮದ್ರಾಸ್ ಮೊದಲಾದ ಕಡೆ ಹೋಗಿ ವ್ಯಾಪಾರ ಮಾಡುತ್ತಿದ್ದರು. ಜೊತೆಗೆ ಶೇಂಗಾ ಎಣ್ಣೆ, ಹಿಂಡಿ ಮತ್ತು ಕಾಟನ್ ಬೇಲ್ ಇಂಗ್ಲೆಂಡ್‌ಗೆ ರವಾನೆಯಾಗುತ್ತಿತ್ತು. ಸ್ವಾತಂತ್ರ್ಯ ಪೂರ್ವ ದಲ್ಲಿಯೇ ನಮ್ಮ ದಾವಣಗೆರೆಯ ವ್ಯಾಪಾರ ವಹಿವಾಟು ಪ್ರಗತಿ ಪಥದಲ್ಲಿತ್ತು ಎಂದರೆ ಇದಕ್ಕೆ ಮುರಿಗೆಪ್ಪನವರ ಜಾಣ್ಮೆ, ವ್ಯವಹಾರದ ಕಲೆಗೆ ಒಂದು ಮೆಚ್ಚುಗೆ ಸೂಚಿಸಬೇಕು.

ಮುರಿಗೆಪ್ಪನವರು ಒಬ್ಬ ಆದರ್ಶ ಸಂಸಾರಿ, ಯೋಜಿತ ಕುಟುಂಬ ಅವರದು. 2 ಗಂಡು ಮಕ್ಕಳು ಮತ್ತು 1 ಹೆಣ್ಣು, ಧರ್ಮಪತ್ನಿ ಗುರುಶಾಂತಮ್ಮನವರು. ಹಿರಿಯ ಮಗ ವೀರಭದ್ರಪ್ಪ ಚಿಗಟೇರಿ, ಕಿರಿಯ ಪುತ್ರ ಜಯಣ್ಣ ಚಿಗಟೇರಿ, ಮಗಳು (4ನೇ ಪುಟಕ್ಕೆ)

# ನಗರ ದೇವತೆಯರ ಜಾತ್ರೆ ರದ್ದು



**(1ನೇ ಪುಟದಿಂದ)** ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ಕೊಡುವುದಿಲ್ಲ, ಕೋವಿಡ್ ನಿಯಮಗಳನ್ನು ಪಾಲಿಸುತ್ತೇವೆ, ದೇವಿಯರ ಜಾತ್ರೆ ನಮ್ಮ ಸಂಸ್ಕೃತಿ, ನಮ್ಮದು ಹಿಂದು ಪರಂಪರೆ ಜಾತ್ರೆ ಮಾಡುವ ನಮ್ಮ ಹಕ್ಕು ಕಸಿಯಬೇಡಿ. ಇನ್ನು ಅನೇಕ ರೀತಿಯಲ್ಲಿ ಮಾತನಾಡಿದರೂ ಜಾತ್ರೆ ಮಾಡಲೇಬೇಕು ಎನ್ನುವ ಪ್ರಯತ್ನಕ್ಕೆ ಫಲ ದೊರಕಲಿಲ್ಲ.

ಕಮಿಟಿಯವರು ಹಾಗೂ ಭಕ್ತರ ಅಪೇಕ್ಷೆಗೆ ಬೆಲೆ ಕೊಡಿ ಎಂದರೆ, ಕೆಲ ವಕೀಲರು ಧಾರ್ಮಿಕ ಸ್ವಾತಂತ್ರ್ಯ ಕಸಿಯುತ್ತೀರಿ ಎಂದು ಆಪಾದಿಸಿದರು.

ಹೊರಗಿನಿಂದ ಬೀಗರನ್ನು ಜಾತ್ರೆಗೆ ಕರೆಯಲು ಅವಕಾಶ ಕೊಡಿ ಎಂದು ಹತ್ತು ಹಲವು ರೀತಿಯಲ್ಲಿ ಪ್ರಯತ್ನಿಸಿದ ಕಮಿಟಿಯವರ, ದೇವಿಯ ಭಕ್ತರ ಬೇಡಿಕೆಗೆ ಸರ್ಕಾರದ ಆದೇಶ ಪಾಲನೆ ನಮ್ಮ ಕೆಲಸ ಎಂದು ಅಧಿಕಾರಿಗಳು ಸ್ಪಷ್ಟವಾಗಿ ತಿಳಿಸಿದರು.

ರಾಜಕಾರಣಿಗಳ ಸಭೆ - ಸಮಾರಂಭಗಳಿಗೆ, ಪ್ರತಿಭಟನೆಗಳಿಗೆ ಕೋವಿಡ್ ನಿಯಮ ಜಾರಿಯಾಗಲ್ಲ, ದೇವರ ಉತ್ಸವಗಳಿಗೆ ಕೋವಿಡ್ ನೆಪ ಹೇಳುವುದು ಸರಿ ಅಲ್ಲ ಎನ್ನುವ ಮಾತುಗಳನ್ನು ಉಲ್ಲೇಖಿಸಿದ ಡಿವೈಎಸ್‌ಪಿ ಅವರು, ಜಿಲ್ಲೆಯಲ್ಲಿ ಕೋವಿಡ್‌ನಿಂದ ಅತೀ ಹೆಚ್ಚು ಸಾವುಗಳಾಗಿವೆ. ಅವುಗಳನ್ನು ನೆನೆಪಿಸಿಕೊಳ್ಳಿ, ಇತರೆ ಜಾತ್ರೆಗಳನ್ನು ರದ್ದು ಮಾಡಿದ್ದನ್ನು ಉದಾಹರಣೆಯಾಗಿ ಇಟ್ಟುಕೊಳ್ಳಿ ರಾಜಕಾರಣಿಗಳ ಸಭೆಗಳ ಉದಾಹರಣೆ ಬೇಡ ಎಂದು ಭಕ್ತರ ಮನ ಒಲಿಸುವ ಪ್ರಯತ್ನ ಮಾಡಿದರು.

ದೇವಿಯರ ಮೆರವಣಿಗೆಗೆ ಅವಕಾಶವಿಲ್ಲ. ರಾತ್ರಿ 12 ಗಂಟೆ ನಂತರ 5 ಜನ ಸೇರಿ ಜಾತ್ರಾ ಸ್ಥಳ ಗಂಗಾಜಲ, ತುಂಗಾಜಲಕ್ಕೆ ತರುವುದು, ಯಾವುದೇ ಅಂಗಡಿ, ತೊಟ್ಟಿಲು, ಮನರಂಜನೆ ಆಟಗಳಿಗೆ ಸಮ್ಮತಿ ಇಲ್ಲಾ. ಕೇವಲ 5 ಜನ ಸೇರಿ ಪೂಜಾ ವಿಧಿ-ವಿಧಾನಗಳಿಗೆ ಮಾತ್ರ ಅವಕಾಶವಿದೆ. ಸರ್ಕಾರದಿಂದ ಜಾರಿಯಾಗಿರುವ ಕೋವಿಡ್ ನಿಯಮಗಳನ್ನು ಉಲ್ಲಂಘಿಸಿದರೆ ಸಮಿತಿಯವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಯಲ್ಲಿ ತಿಳಿಸಲಾಯಿತು.

ನಗರಾಧ್ಯಕ್ಷೆ ರೂಪಾ ಚಿನ್ನಿಕಟ್ಟಿ, ಉಪಾಧ್ಯಕ್ಷೆ ಕಸ್ತೂರಿ ಚಿಕ್ಕಬಿದರಿ, ಹೆಚ್ಚುವರಿ ಎಸ್ಪಿ ಸಂತೋಷ್, ಡಿವೈಎಸ್ಪಿ ಟಿವಿ ಸುರೇಶ್, ನಗರಸಭೆ ಪೌರಾಯುಕ್ತ ಉದಯಕುಮಾರ್, ಸಿಪಿಐ ಗೌಡಪ್ಪಗೌಡ್ರ ವೇದಿಕೆಯಲ್ಲಿದ್ದರು. ನಗರಸಭೆ ಸದಸ್ಯರಾದ ಶೇಖಪ್ಪ ಹೊಸಗೌಡ್ರ, ಶಶಿ ಬಸೇನಾಯ್ಕ, ಪುಟ್ಟಪ್ಪ ಮರಿಯಮ್ಮನವರ, ಪ್ರಕಾಶ್ ಪೂಜಾರ, ಮಲ್ಲಪ್ಪ ಅಂಗಡಿ, ಪ್ರಭಾವತಿ ತಿಳವಳ್ಳಿ, ಲಿಂಗರಾಜ ಕೋಡಿಹಳ್ಳಿ, ನೋಟರಿ ಮುದಿಗೌಡ್ರ, ಕುಮಾರ ಮಡಿವಾಳರ ಪೂನಮ್‌ಚಂದ ಗುಪ್ತಾ ಹಾಗೂ ಇನ್ನು ಅನೇಕರು ಪಾಲ್ಗೊಂಡಿದ್ದರು.

# ವೀರಶೈವ ಮಹಿಳಾ ಘಟಕದಿಂದ ಬಕ್ಕೇಶ್ವರ ಸ್ವಾಮಿಗೆ ಪೂಜೆ



ದಾವಣಗೆರೆ, ಜ. 10- ಜಿಲ್ಲೆಯಲ್ಲಿ ಮತ್ತೆ ಕೊರೊನಾ ಹೆಚ್ಚಾಗುತ್ತಿದೆ. ವಾರದಿಂದೀಚೆಗೆ ಕೊರೊನಾ ಸೋಂಕಿತ ಪ್ರಕರಣಗಳು ವರದಿಯಾಗುತ್ತಿವೆ. ಈ ಹಿಂದೆ ಎರಡು ಅಲೆಯಿಂದಾಗಿ ಜನರ ಜೀವನಕ್ಕೆ ತುಂಬಾ ಹೊಡೆತ ಬಿದ್ದಿದೆ. ಜೊತೆಗೆ ಜನತೆ ತತ್ತರಿಸಿ ಹೋಗಿದ್ದಾರೆ. ಈ ಬಾರಿಯೂ ಮತ್ತೆ ಕೋವಿಡ್ ಆರ್ಭಟ ಹೆಚ್ಚಾಗುತ್ತಿರುವುದು ಆತಂಕಕ್ಕೆ ಕಾರಣವಾಗಿದೆ.

ಈ ಹಿನ್ನೆಲೆಯಲ್ಲಿ ಜಿಲ್ಲಾ ವೀರಶೈವ ಮಹಿಳಾ ಘಟಕದ ನೇತೃತ್ವದಲ್ಲಿ ದೇವರ ಮೊರೆ ಹೋಗಿ, ಕೊರೊನಾ ಮತ್ತು ಓಮಿಕ್ರಾನ್ ಸೋಂಕು ಹಿಮ್ಮೆಟ್ಟಬೇಕು ಹಾಗೂ ಲೋಕ ಕಲ್ಯಾಣಾರ್ಥವಾಗಿ ನಗರದ ಶ್ರೀ ಗುರು ಬಕ್ಕೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಶ್ರೀ ಗುರು ಬಕ್ಕೇಶ್ವರ ಸ್ವಾಮಿ ದೇವರಲ್ಲಿ ಪ್ರಾರ್ಥನೆ ಮಾಡಿದ ಬಳಿಕ ಮುತ್ತೈದೆಯರಿಗೆ ಅರಿಶಿನ ಕುಂಕುಮ ನೀಡಿ, ಉಡಿ ಕೊಡಲಾಯಿತು. ಎಲ್ಲಾ ರೀತಿಯಲ್ಲಿಯೂ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ. ಕೊರೊನಾ ಸೋಂಕಿನ ನಡುವೆ ಈಗ ಓಮಿಕ್ರಾನ್ ಸಹ ಹೆಚ್ಚಾಗುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ಶ್ರೀ ಗುರು ಬಕ್ಕೇಶ್ವರ ಸ್ವಾಮಿ ಈ ಸೋಂಕು ಹರಡದಂತೆ ತಡೆಯಬೇಕು ಎಂದು ಪ್ರಾರ್ಥಿಸಿ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥನೆ ಮಾಡಿರುವುದಾಗಿ ಘಟಕದ ಪ್ರಮುಖರು ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಜಿಲ್ಲಾ ವೀರಶೈವ ಮಹಿಳಾ ಘಟಕದ ಪ್ರಮುಖರಾದ ಶೋಭಾ ಕೊಟ್ರೇಶ್, ದ್ರಾಕ್ಷಾಯಿಣಿ ಅಂದಾನಪ್ಪ, ಮಂಜುಳಾ ಅಣಬೂರು ಮಠ, ದ್ರಾಕ್ಷಾಯಣಮ್ಮ, ರಾಜೇಶ್ವರಿ, ಕೊಟ್ರಮ್ಮ, ಅನ್ನಪೂರ್ಣಮ್ಮ, ಶಕುಂತಲಮ್ಮ ಬಸಪ್ಪ ಮತ್ತಿತರರು ಪಾಲ್ಗೊಂಡಿದ್ದರು.

# ಮುನ್ನೆಚ್ಚರಿಕೆ ಡೋಸ್‌ಗೆ ಚಾಲನೆ

**(1ನೇ ಪುಟದಿಂದ)** ಸೋಂಕು ಹರಡದಂತೆ ಜಾಗೃತಿ ವಹಿಸಬೇಕೆಂದು ಹೇಳಿದರು.

ಶಾಸಕ ಎಸ್.ಎ.ರವೀಂದ್ರನಾಥ್, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಡಿ.ಹೆಚ್.ಓ ಡಾ. ನಾಗರಾಜ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ರಾಘವನ್, ಬಡಾವಣೆ ಪೊಲೀಸ್ ಠಾಣೆ ಎ.ಎಸ್.ಐ ಜಯಣ್ಣ ಹಾಗೂ ಇತರರು ಬೂಸ್ಟರ್ ಡೋಸ್ ಲಸಿಕೆ ಹಾಕಿಸಿಕೊಂಡರು. ಈ ಸಂದರ್ಭದಲ್ಲಿ ಆರ್.ಸಿ. ಹೆಚ್ ಅಧಿಕಾರಿ ಮೀನಾಕ್ಷಿ, ಪಾಲಿಕೆ ಮೇಯರ್ ಎಸ್.ಟಿ ವೀರೇಶ್, ಟಿ.ಹೆಚ್.ಓ ಡಾ. ವೆಂಕಟೇಶ್ ಇತರು ಉಪಸ್ಥಿತರಿದ್ದರು.

## ತಪ್ಪು ಲೆಕ್ಕ ಕೊಡುವ ಅಗತ್ಯವೇ ಇಲ್ಲ: ಸಿದ್ದೇಶ್ವರ

ದೇಶದಲ್ಲಷ್ಟೇ ಅಲ್ಲ ಪ್ರಪಂಚದಲ್ಲಿಯೇ ಸೋಂಕಿತರ ಸಂಖ್ಯೆ ಹೆಚ್ಚಾಗಿದೆ. ಹೀಗಿದ್ದಾಗ ರಾಜ್ಯದಲ್ಲಿ ಸೋಂಕಿತರ ಹೆಚ್ಚಳದ ಬಗ್ಗೆ ತಪ್ಪು ಲೆಕ್ಕ ಕೊಡುವ ಅಗತ್ಯವಿಲ್ಲ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ಸೋಂಕಿತರ ವಿಷಯದಲ್ಲಿ ರಾಜ್ಯ ಸರ್ಕಾರ ತಪ್ಪು ಲೆಕ್ಕ ಕೊಡುತ್ತಿದೆ ಎಂಬ ಕಾಂಗ್ರೆಸ್ ನಾಯಕ ಆರೋಪಕ್ಕೆ ಸಂಸದರು ಮೇಲಿನಂತೆ ಪ್ರತಿಕ್ರಿಯಿಸಿದರು.

**ಬೇಳೆ ಬೇಯಿಸಿಕೊಳ್ಳಲು ಆರೋಪ:** ಕಾಂಗ್ರೆಸ್ ನಾಯಕರು ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಮೇಕೆ ದಾಟು ವಿಷಯದಲ್ಲಿ ಬಿಜೆಪಿ ವಿರುದ್ಧ ಸುಳ್ಳು ಆಪಾದನೆಗಳನ್ನು ಮಾಡು ತ್ತಿದ್ದಾರೆ. ಮೇಕೆದಾಟು ವಿಷಯಕ್ಕೆ ಸಂಬಂಧಿಸಿದಂತೆ ತಮಿಳು ನಾಡು ಸರ್ಕಾರ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿತ್ತು. ಈಗ ನಿಮ್ಮದೇ ಡಿಎಂಕೆ ಸರ್ಕಾರವಿದೆ. ಪ್ರಕರಣ ಹಿಂಪಡೆಯುವಂತೆ ಹೇಳಿ ಕೂಡಲೇ ಮೇಕೆದಾಟು ನಿರ್ಮಿಸುತ್ತೇವೆ ಎಂದು ಸಂಸದರು ಹೇಳಿದರು.

ರಾಜಕೀಯ ಗಿಮಿಕ್‌ನಿಂದ ಕಾಂಗ್ರೆಸ್ ಪಕ್ಷಕ್ಕೆ ಪ್ರಯೋಜನವಿಲ್ಲ. ಜನರು ಎಚ್ಚೆತ್ತು ಕೊಂಡಿದ್ದಾರೆ. ದೇಶ ಹಾಗೂ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಯಸುತ್ತಿದ್ದಾರೆ. ಪಾದಯಾತ್ರೆ ನಿಯಮ ಉಲ್ಲಂಘಿಸಿದವರ ಮೇಲೆ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಲಿದ್ದಾರೆ ಎಂದು ಹೇಳಿದರು.

# ಚಂಪಾ ಎಂಬ ಕನ್ನಡದ ಕಂಪು ಮರೆಯಾಯಿತೇ?

ನಾನಾಗ ಜಗಳೂರಿನ ನಾಲಂದ ಕಾಲೇಜು ವಿದ್ಯಾರ್ಥಿ. ಆಗ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದ ಎಂ. ಬಸವಪ್ಪ ನವರು ನಮಗೆ ಕನ್ನಡದ ಉದ್ದಾಮ ಸಾಹಿತಿಗಳ ಬಗ್ಗೆ ಹಲವಾರು ವಿಷಯಗಳನ್ನು ತಿಳಿಸುತ್ತಿದ್ದರು. ಆ ಮೂಲಕ ನಮಗೆ ಕುತೂಹಲ ಮೂಡಿಸಿದವರು ಪ್ರೊ. ಚಂದ್ರಶೇಖರ ಪಾಟೀಲರು. ಅವರ ವೈಚಾರಿಕ ನಿಲುವು, ಬಂಡಾಯ ಧೋರಣೆ, ಪ್ರತಿಭಟನಾತ್ಮಕ ಚಟುವಟಿಕೆಗಳಿಂದ ಚಂಪಾ ವಿದ್ಯಾರ್ಥಿ ಸಮೂಹವನ್ನು ತಮ್ಮತ್ತ ಸುಲಭವಾಗಿ ಸೆಳೆಯಬಲ್ಲವರಾಗಿದ್ದರು. ನಾಲಂದ ಕಲಾ ಭಾರತಿ ತಂಡದ ಬಸವಪ್ಪ, ಪ್ರಭಾಕರ ಲಕ್ಕೊಳ, ಕೊಂಗವಾಡ, ಮರಿಗೌಡರ್ ಮುಂತಾದ ಉಪನ್ಯಾಸಕರು ಚಂಪಾ ಅವರು ರಚಿಸಿದ ಒಂದೆರಡು ನಾಟಕಗಳನ್ನು ಜಗಳೂರಿನಲ್ಲಿ ಅಭಿನಯಿಸಿದರು. ಹಾಗಾಗಿ ಚಂಪಾರವರು ಜಗಳೂರಿನವರಿಗೆ ಮೊದಲು ಪರಿಚಯವಾದುದು ಅವರ ನಾಟಕಗಳ ಮೂಲಕವೇ.



1985 ರಲ್ಲಿ ನಾನು ಕೆನರಾ ಬ್ಯಾಂಕ್ ವೃತ್ತಿ ನಿಮಿತ್ತ ಧಾರವಾಡ ಜಿಲ್ಲೆಯಲ್ಲಿದ್ದೆ. ಆಗ ಸಂಕ್ರಮಣದ ಮೂಲಕ ಚಂಪಾರವರು ಸುದ್ದಿಯಲ್ಲಿದ್ದರು. ಒಮ್ಮೆ ನಾನು ಸಂಕ್ರಮಣದ ಸಭೆಗೆ ಹಾಜರಾಗಿ ಅವರನ್ನು ಪರಿಚಯಿಸಿಕೊಂಡೆ. ಸಂಕ್ರಮಣದ ವರದಿಗಾರನಾಗಿಯೂ ಆಯ್ಕೆ ಗೊಂಡೆ. ಸಂಕ್ರಮಣವನ್ನು ವಾರ ಪತ್ರಿಕೆಯಾಗಿ ರೂಪಿಸುವ ಎಲ್ಲ ಪ್ರಯತ್ನಗಳನ್ನು ಚಂಪಾ ಮಾಡಿದರು. ಆದರೆ ಅದು ಬಹಳ ದಿನ ಮುಂದುವರೆಯಲಿಲ್ಲ.

ಸಂಕ್ರಮಣದ ಮೂಲಕ ಕುಡಿಯೊಡೆದ ನನ್ನ ಚಂಪಾರವರ ನಂಟು ಮುಂದೆ ದಶಕಗಳ ಕಾಲ ಮುಂದುವರೆದುದು ಮಾತ್ರ ಸಂತಸ ತರಬಲ್ಲದು. ಚಂಪಾರವರು ನಿವೃತ್ತಿಯ ನಂತರ ಧಾರವಾಡ ತ್ಯಜಿಸಿ ಬೆಂಗಳೂರಿನಲ್ಲಿ ನೆಲೆ ನಿಂತರು. ನಾನು ಸಹ ವರ್ಗಾವಣೆ ನಿಮಿತ್ತ ಬೆಂಗಳೂರು ಸೇರಿದೆ. ಅಲ್ಲಿ ನನ್ನ ಗೆಳೆಯ ಜರಗನಹಳ್ಳಿ ಶಿವಶಂಕರ್ ಜೊತೆ ಚಂಪಾರವರ ಎಡೆಬಿಡದ ನಂಟು. ಆ ಕಾರಣದಿಂದ ಚಂಪಾ ಮತ್ತೆ ಹತ್ತಿರ ವಾದರು.

2000 ಇಸವಿಯಲ್ಲಿ ಜಗಳೂರಿನಲ್ಲಿ ಬಿಡುಗಡೆಯಾದ ನನ್ನ ಕೃತಿ ಸ್ವಸಹಾಯ ಸಂಘಗಳು ಒಂದು ಪರಿಕಲ್ಪನೆ ಬಿಡುಗಡೆಗೆ ಜಗಳೂರಿಗೆ ಬಂದರು. ಜೊತೆಗೆ ಜರಗನಹಳ್ಳಿ ಶಿವಶಂಕರ್, ಪ್ರೊ.ಹೆಚ್.ಎಂ. ಮರುಳಸಿದ್ದಯ್ಯ, ಡಾ.ಟಿ. ತಿಪ್ಪೇ ಸ್ವಾಮಿಯವರು ಆ ಸಮಾರಂಭದಲ್ಲಿ ಭಾಗವಹಿಸಿ ಶುಭ ಕೋರಿದರು. ಅಂದು ಸಂಜೆ ಚಂಪಾರೊಡಗೂಡಿ ಎಲ್ಲ ಅತಿಥಿಗಳು ನನ್ನ ಮನೆಯಲ್ಲಿ ನಡೆದ ಔತಣ ಕೂಟದಲ್ಲಿ ಭಾಗವಹಿಸಿ ನಕ್ಕು ನಲಿದ ನೆನಪು ಮಾತ್ರ ಎಂದಿಗೂ ಮರೆಯಲಾಗದು.

ಎಳೆಯರಲ್ಲಿ ಗೆಳೆಯರಂತೆ ವರ್ತಿಸಿ ಅವರನ್ನು ಕನ್ನಡದ ಕೆಲಸಕ್ಕೆ ಹಚ್ಚುವ ಜಾಣ್ಮೆ ಚಂಪಾರವರಿಗೆ ಕರತಲಾ ಮಲಕವಾಗಿತ್ತು. ಕನ್ನಡ, ಕನ್ನಡ, ಬರ್ರಿ ನನ್ನ ಸಂಗಡ ಎಂದು ಕನ್ನಡದ ಕುಲ ಕೋಟಿಯನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಚಂಪಾರವರು ಕನ್ನಡದ ತೇರನ್ನು ಎಳೆದ ಪರಿ ಅನುಪಮವಾದುದು.

ನಾನು 1982ರಿಂದ 5 ವರ್ಷಗಳ ಕಾಲ ಅವರ ಸ್ವಂತ ಊರಾದ ಹತ್ತಿ ಮತ್ತೂರು ಬಳಿ ಕೆಲಸ ಮಾಡುತ್ತಿದ್ದೆ. ಚಂಪಾರವರು ಊರಿಗೆ ಬಂದರೆಂದರೆ ಊರವರಿಗೆ ಹುಗ್ಗಿ ಉಂಡಷ್ಟು ಸಂತೋಷ. ನಾನು ಅಲ್ಲಿನ ಕಾರ್ಯಗಳಲ್ಲಿ ಭಾಗಿಯಾಗುತ್ತಿದ್ದೆ. ಅಲ್ಲಿ ನಾವು ಚಂಪಾರವರ ಪ್ರಖರ ಮಾತುಗಳಿಗೆ ಮನ ಸೋತೆವೆಂದೇ ಅರ್ಥ.

ಗೋಕಾಕ್ ಚಳವಳಿಯ ಸೂತ್ರಧಾರರಾಗಿ, ಬಂಡಾಯ ಸಾಹಿತ್ಯ ಚಳುವಳಿಯ ಸಂಘಟಕರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ,ಕನ್ನಡ ಸಾಹಿತ್ಯ ಪರಿಷತ್ ನ ಅಧ್ಯಕ್ಷರಾಗಿ ಚಂಪಾರವರು ಸಲ್ಲಿಸಿದ ಸೇವೆ ಅಗಾಧವಾದುದು.

ವಸ್ತುನಿಷ್ಠ ವಿಚಾರಗಳಿಗೆ ಇವರು ಎತ್ತಿದ ಕೈ. ಮಠ ಮಂದಿರಗಳಿರಲಿ, ರಾಜಕಾರಿಣಿಯಿರಲಿ,ಯಾರೇ ಆಗಿರಲಿ ಅವರ ಎದುರೇ ತಮಗನ್ನಿಸಿದ್ದನ್ನು ಖಂಡ ತುಂಡವಾಗಿ ಹೇಳಿ ಕೈ ತೊಳೆವ ತಾಕತ್ತು ಚಂಪಾರವರದು. ಅವರು ಒಮ್ಮೆ ಗುಡುಗು, ಸಿಡಿಲಿನಂತೆ. ಮತ್ತೊಮ್ಮೆ ಹುಣ್ಣಿಮೆಯ ತಂಪು ಬೆಳದಿಂಗಳಂತೆ.

ಅವರ ವ್ಯಕ್ತಿತ್ವ ವನ್ನು ಹತ್ತಿರದಿಂದ ನೋಡುವ ಅನೇಕ ಅವಕಾಶಗಳು ನನಗೆ ದೊರೆತದ್ದು ನನ್ನ ಭಾಗ್ಯವೆಂದು ನಂಬುವೆ.

ವರ್ಷದ ಕೆಳಗೆ ಗೆಳೆಯ ಜರಗನಹಳ್ಳಿ ಶಿವಶಂಕರ್ ಮನೆಯಲ್ಲಿ ಜೊತೆಯಲ್ಲಿ ಕುಳಿತು ಊಟ ಮಾಡಿದ ನೆನಪು ಹಸಿರಾಗಿಯೇ ಇದೆ.

ಈ ನಡುವೆ ಶಿವಶಂಕರ್ ಮರೆಯಾದರು. ಈಗ ನೋಡಿದರೆ ಚಂಪಾರವರೂ ಶಿವಶಂಕರರ ಹಾದಿ ಹಿಡಿಯುವಂತಾಯಿತೇ?

ತಾವು ನಡೆದಾಡಿದ ಕಡೆಯಲ್ಲೆಲ್ಲ ಕನ್ನಡದ ಕಂಪನ್ನು ಸುಲಲಿತವಾಗಿ ಸೂಸಿದ ಚಂಪಾ ಮರೆಯಾದರೇ? ನಂಬಲಾಗುತ್ತಿಲ್ಲ.

- ಎನ್.ಟಿ. ಎರ್ರಿಸ್ವಾಮಿ
ಕೆನರಾ ಬ್ಯಾಂಕ್ ನಿವೃತ್ತ ವಿಭಾಗೀಯ ವ್ಯವಸ್ಥಾಪಕರು,
ಜಗಳೂರು - 577528.
ಮೊ. 9901909672

# 'ಚಂದ್ರಬಿಂಬ'ದಲ್ಲಿದೆ ಚಂದ್ರಶೇಖರ ಅಡಿಗ ವ್ಯಕ್ತಿತ್ವ

## 'ಚಂದ್ರಬಿಂಬ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರಧ್ವಾಜ್



ದಾವಣಗೆರೆ, ಜ.10- ಕಳೆದ ಐವತ್ತು ವರ್ಷಗಳ ಇತಿಹಾಸದಲ್ಲಿ ಚಂದ್ರಶೇಖರ ಅಡಿಗ ಅವರ ಕಲಾ ಹಾಗೂ ಸಾಂಸ್ಕೃತಿಕ ಸೇವೆ ಮರೆಯಲಾಗದು ಎಂದು ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರಧ್ವಾಜ್ ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಮೊನ್ನೆ ಏರ್ಪಾಡಾಗಿದ್ದ ಅದಮ್ಯ ಕ್ರಿಯಾಶೀಲ ಚೇತನ ಕೀರ್ತಿಶೇಷ ಹೆಸ್ಕುಂದ ಚಂದ್ರಶೇಖರ ಅಡಿಗರ ನೆನಪಿನಲ್ಲೊಂದು ಕೃತಿ ನಮನ ಕಾರ್ಯಕ್ರಮದಲ್ಲಿ ಚಂದ್ರಬಿಂಬ ಕೃತಿ ಲೋಕಾರ್ಪಣೆ ಸಮಾರಂಭ ಉದ್ಘಾಟಿಸಿ, ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಹೋಟೆಲ್ ಉದ್ಯಮದ ಮೂಲಕ ಅನ್ನವನ್ನೂ ಅನ್ನಪೂರ್ಣೇಶ್ವರಿ ಅಂತ ಭಾವಿಸಿದವರು ಅಡಿಗ ಅವರು. ಅವರಲ್ಲಿ ಕಾಯಕ ನಿಷ್ಠೆ, ಕರ್ಮಯೋಗ ಇತ್ತು. ಉದ್ಯಮದ ಜೊತೆ ಸಂಸಾರಕ್ಕೂ ಉತ್ತಮ ಅರ್ಥ ತಂದುಕೊಟ್ಟವರು ಅಡಿಗ ಎಂದು ಹೇಳಿದರು.

ನಮಗೆ ದೊರೆಯುವ ನಿಜವಾದ ಪ್ರಶಸ್ತಿ ಎಂದರೆ, ನಮ್ಮ ಸುತ್ತ ಮುತ್ತಲಿನವರು ಹಾಗೂ ಕೆಳ ಹಂತದಲ್ಲಿದ್ದವರು ನಮ್ಮನ್ನು ಗೌರವಿಸುವುದು. ಹಾಗೆಯೇ ಅಡಿಗ ಅವರ ಬಳಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರೊಬ್ಬರು ಮೆಚ್ಚುಗೆಯ ಲೇಖನ ಬರೆದಿದ್ದಾರೆ. ಅಡಿಗ ಅವರ ದಾರಿಯಲ್ಲಿಯೇ ಅವರ ಕುಟುಂಬ ವರ್ಗ ನಡೆಯುತ್ತಿದೆ. ಅವರ ನೆನಪುಗಳನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಜಾನಪದ ತಜ್ಞ ಡಾ.ಎಂ.ಜಿ. ಈಶ್ವರಪ್ಪ ಮಾತನಾಡಿ, ಹೋಟೆಲ್ ಉದ್ಯಮದ ಜೊತೆ ಸಾಂಸ್ಕೃತಿಕ ಉದ್ಯಮವನ್ನೂ ನಡೆಸಿದ ಕೀರ್ತಿ ಅಡಿಗ ಅವರದ್ದು ಎಂದರು.

ಅಡಿಗ ಅವರು ನಮ್ಮ ಹೊಟ್ಟೆಗೆ ಆಹಾರ ನೀಡಿದಂತೆ ಕಲಾ ಕಾರ್ಯಕ್ರಮಗಳ ಮೂಲಕ ಮೆದುಳಿಗೂ ಉತ್ತಮ ಆಹಾರ ನೀಡುತ್ತಿದ್ದರು.

ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸದಾ ಕ್ರಿಯಾಶೀಲರಾಗಿ ಓಡಾಡುತ್ತಿದ್ದರು. ಅವರ ಮಕ್ಕಳು ನಮ್ಮ ವಿದ್ಯಾರ್ಥಿಗಳಾಗಿದ್ದು, ಇದೀಗ ದೇಶ-ವಿದೇಶದಲ್ಲೂ ಹೆಸರು ಮಾಡುತ್ತಿರುವುದು ಶಿಕ್ಷಕರಾದ ನಮಗೆ ಹೆಮ್ಮೆಯ ವಿಷಯ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸಿದ್ದರು. ಕಲಾವಿದೆ ವಿದುಷಿ ಶ್ರೀಮತಿ ಆಶಾ ಶ್ರೀನಿವಾಸ್ ಆಚಾರ್ಯ ಉಪಸ್ಥಿತರಿದ್ದರು. ಶ್ರೀಮತಿ ಶ್ರೀಮತಿ ಚಂದ್ರಶೇಖರ ಅಡಿಗ ಸ್ವಾಗತಿಸಿದರು.

ಕು. ಅದಿತಿ ಆಚಾರ್ಯ ಹಾಗೂ ಅಭಿರಾಮ ಆಚಾರ್ಯ ಅವರು ಭರತನಾಟ್ಯ ಕಾರ್ಯಕ್ರಮ ನಡೆಸಿಕೊಟ್ಟರು. ಶ್ರೀಮತಿ ದೀಪಾ ಅಡಿಗ ಪ್ರಾರ್ಥಿಸಿದರು. ಸಾಲಿಗ್ರಾಮ ಗಣೇಶ್ ಶೆಣೈ ನಿರೂಪಿಸಿದರು.

# ನಗರದಲ್ಲಿ ಹೆಚ್ಚುತ್ತಿರುವ ಪಾರ್ಕಿಂಗ್ ಸಮಸ್ಯೆ

**(1ನೇ ಪುಟದಿಂದ)** ಸುವವರ ವಿರುದ್ಧ ದಂಡ ವಿಧಿಸುವುದರ ಜೊತೆಗೆ ಜಾಗೃತಿ ಮೂಡಿಸುತ್ತಿದ್ದಾರೆ. ದಂಡ ವಿಧಿಸುವುದು ಮುಖ್ಯ ಉದ್ದೇಶವಲ್ಲ. ಶಾಲಾ - ಕಾಲೇಜುಗಳಲ್ಲಿಯೂ ಜಾಗೃತಿ ಮೂಡಿಸಲಾಗುವುದು ಎಂದರು.ಹಳೇ ದಾವಣಗೆರೆಯಲ್ಲಿ ಪಾರ್ಕಿಂಗ್ ಸಮಸ್ಯೆ ಹೆಚ್ಚಾಗಿದ್ದು, ತಳ್ಳುವ ಗಾಡಿ ವ್ಯಾಪಾರಿಗಳು ರಸ್ತೆ ಮಧ್ಯದಲ್ಲಿಯೇ ವ್ಯಾಪಾರ ಮಾಡುತ್ತಿರುವುದರಿಂದ ಸಂಚಾರಕ್ಕೆ ಸಮಸ್ಯೆಯಾಗುತ್ತಿದೆ. ಏಕಮುಖ ಸಂಚಾರದ ಫಲಕ ಇದ್ದರೂ ವಿರುದ್ಧ ದಿಕ್ಕಿನಲ್ಲಿ ಬರುತ್ತಿದ್ದು, ಅದನ್ನು ತಡೆಯಲು ಕ್ರಮ ವಹಿಸಲಾಗುವುದು ಎಂದರು.

ಎಎಸ್ಪಿ ಕನಿಕಾ ಸಿಕ್ರಿವಾಲ್, ಡಿವೈಎಸ್‌ಪಿಗಳಾದ ನರಸಿಂಹ ತಾಮ್ರಧ್ವಜ, ಡಿ.ಎಸ್. ಬಸವರಾಜ, ಕೆ. ಎನ್. ಸಂತೋಷ್, ಪ್ರಕಾಶ್ ಸೇರಿದಂತೆ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳು ಇದ್ದರು.

ಲುಂಬಿನಿ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾ ಮೆಡಿಕಲ್ ಸೈನ್ಸ್ ಕಾಲೇಜ್, ದಾವಣಗೆರೆ.
Hurry Up
ಕೆಲವೇ ಸೀಟುಗಳು ಮಾತ್ರ ಲಭ್ಯ
★ DOT & AT ★ DOT ★ DHI
ಲುಂಬಿನಿ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾ ಮೆಡಿಕಲ್ ಸೈನ್ಸ್ ಕಾಲೇಜ್
ಎ.ವಿ.ಕೆ. ಕಾಲೇಜು ರಸ್ತೆ, ಲತಾ ನರ್ಸಿಂಗ್ ಹೋಂ ಎದುರು, 9ನೇ ಅಡ್ಡ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
70195 86789, 99020 55335

ಮಾಂತ್ರಿಕ ಮೋಡಿ ಬೆಟ್ಟಪ್ಪ ಜ್ಯೋತಿಷ್ಯರು
Most Populr Astrologer

ಉಚಿತ ಭವಿಷ್ಯ ಖಚಿತ ಪರಿಹಾರ, ಫೋನ್ ಮೂಲಕ ಸಂಪರ್ಕಿಸಿ
ನಂ.1 ವಶೀಕರಣ ಸ್ಪೆಷಲಿಸ್ಟ್, ನೀವು ಇಷ್ಟಪಟ್ಟವರು ನಿಮ್ಮಂತಾಗಲು
ನಿಮ್ಮ ಸಮಸ್ಯೆಗಳೇನು ? ನಿಮ್ಮ ಸಂಕಷ್ಟಗಳೇನು ? ನಮ್ಮಲ್ಲಿ ಕೇಳಿ ತಿಳಿಯಿರಿ
ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಯಂತ್ರ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ, ಬಲಿಷ್ಠ ಗಿಡಮೂಲಿಕೆಗಳಿಂದ ಪರಿಹಾರ ಮಾಡಿತ್ತಾರೆ.
ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 9 ದಿನಗಳೊಳಗೆ 100% ಪರಿಹಾರ ಶತಸಿದ್ಧ. ನಿಮ್ಮ ದಾವಣಗೆರೆ ನಗರದಲ್ಲಿ ಇಂದೇ ಭೇಟಿ ಕೊಡಿ
ಮೊಬೈಲ್ : 89716 99826

ಮೂಲ ಕ್ರಯಪತ್ರ ಕಳೆದಿರುತ್ತದೆ
ಶ್ರೀಮತಿ ಜ್ಞಾನೇಶ್ವರಿ ಕೋಂ ಲೇಟ್ ಎ. ವಿಶ್ವಮೂರ್ತಿ
# 2486 ಆಶೀರ್ವಾದ ನಿಲಯ, 9ನೇ ಮೇನ್, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ
1) ದಿನಾಂಕ 23.8.1979 ರಂದು **ವಿಜಯಕುಮಾರ್** ಮತ್ತು **ಎಂ.ವಿ. ನಾಗರಾಜ್ ಬಿನ್ ಬಿ.ಕೆ. ವಿಶ್ವನಾಥ್** ಇವರಿಂದ ದಾವಣಗೆರೆ ಸಬ್ ರಿಜಿಸ್ಟ್ರಾರ್ ಕಛೇರಿ 1ನೇ ಪುಸ್ತಕದ 1443ನೇ ಸಂಪುಟದ 223-225ನೇ ಪುಟಗಳಲ್ಲಿ 2025ನೇ ನಂಬರಾಗಿ ರಿಜಿಸ್ಟರ್ ಆಗಿರುವ ದಾವಣಗೆರೆ ಎಂಸಿಸಿ 'ಎ' ಬ್ಲಾಕ್, 9ನೇ ಮೇನ್ ರೋಡ್ # 2486 ವುಳ್ಳ ಆರ್‌ಸಿಸಿ ಮನೆ ಕ್ರಯಪತ್ರ
2) ದಿನಾಂಕ : 4.5.1979ರಂದು **ಬಿ.ಕೆ. ವಿಶ್ವನಾಥಚಾರಿ** ಇವರು **ಎಸ್.ಜಿ. ಸೋಮಶೇಖರಪ್ಪ ಬಿನ್ ಎಸ್.ಜಿ. ಸಿದ್ದಪ್ಪ** ಇವರಿಂದ ಕ್ರಯಕ್ಕೆ ಪಡೆದುಕೊಂಡ ಪತ್ರ.
3) ದಿನಾಂಕ 7.5.1979 ಎಂಸಿಸಿ 'ಎ' ಬ್ಲಾಕ್ 1ನೇ ಪುಸ್ತಕದ 1433ನೇ ಸಂಪುಟದ 75-77ನೇ ಪುಟಗಳಲ್ಲಿ 442 ನಂಬರಾಗಿ ರಿಜಿಸ್ಟ್ರಾರ್ ಆಗಿರುವ ಎಂಸಿಸಿ 'ಎ' ಬ್ಲಾಕ್ 2486 ವುಳ್ಳ ಆರ್‌ಸಿಸಿ ಹೊದಿಕೆಯ ವಾಸದ ಮನೆಯನ್ನು ನನಗೆ ಕ್ರಯಕ್ಕೆ ಕೊಟ್ಟಿರುವ **ಶ್ರೀ ಬಿ.ಕೆ. ವಿಶ್ವನಾಥಚಾರಿ** ಇವರು **ಎಸ್.ಜೆ. ಸೋಮಶೇಖರಪ್ಪ ಬಿನ್ ಎಸ್. ಸಿದ್ದಪ್ಪ** ಇವರಿಂದ ಕ್ರಯಕ್ಕೆ ಪಡೆದುಕೊಂಡ ಕ್ರಯಪತ್ರಗಳ ಮೂಲ ಪತ್ರಿಗಳನ್ನು ನಾನು ಬ್ಯಾಂಕಿಗೆ ಹಾಜರುಪಡಿಸ ಬೇಕಾಗಿದ್ದು, ದಿನಾಂಕ 3.11.2021 ರಂದು ಸಂಜೆ 6.30ರ ಸಮಯದಲ್ಲಿ ದಾವಣಗೆರೆ ಎಂಸಿಸಿ 'ಬಿ' ಬ್ಲಾಕ್ ಬಾಪೂಜಿ ಪ್ರೌಢಶಾಲೆ ರಸ್ತೆಯಲ್ಲಿರುವ ಜೆರಾಕ್ಸ್ ಅಂಗಡಿಯಲ್ಲಿ ಜೆರಾಕ್ಸ್ ಮಾಡಿಸಿಕೊಂಡು ಮನೆಗೆ ಹೋಗುವ ದಾರಿ ಮಧ್ಯೆದಲ್ಲಿ ಮೇಲ್ಕಂಡ ಸ್ವತ್ತುಗಳ ಮೂಲ ಕ್ರಯಪತ್ರದ ಪ್ರತಿಗಳು ಹಾಗೂ ಇನ್ನಿತರೆ ಕಂದಾಯ ರಸೀದಿ, ಖಾತೆ ಎಕ್ಸ್‌ಟ್ರಾಕ್ಟ್ ಪ್ರತಿಗಳು ಕಳೆದಿರುತ್ತವೆ. ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ಫೋನ್ ನಂಬರಿಗಾಗಲೀ ಅಥವಾ ಈ ಮೇಲಿನ ವಿಳಾಸಕ್ಕಾಗಲೀ ತಲುಪಿಸಬೇಕಾಗಿ ವಿನಂತಿ.
ಶ್ರೀಮತಿ ಜ್ಞಾನೇಶ್ವರಿ
ಮೊ: 80734 67637, 99803 36682

# ಅಪರೂಪದ ವ್ಯಕ್ತಿ ಮಂಜಣ್ಣ - ಇನ್ನು ನೆನಪು ಮಾತ್ರ...



**ತಿಂಗಳ ಸ್ಮರಣೆ**

ಕಳೆದ ಎರಡು ವರ್ಷಗಳು ಸರ್ವರ ಪಾಲಿಗೆ ಮರೆಯಲಾಗದ ದಿನಗಳು. ಕೊರೊನಾ ಅಕಾಲಿಕ ಹಾಗೂ ಅಪಾರ ಪ್ರಮಾಣದ ಸಾವು, ನೋವು, ಅತಿವೃಷ್ಟಿ, ಅಪಘಾತ ಮತ್ತಿತರೆ ಘಟನೆಗಳು ಮನುಕುಲಕ್ಕೆ ಸವಾಲಾಗಿ ಪರಿಣಮಿಸಿದವು.

ವೈದ್ಯರು, ಕಲಾವಿದರು, ವಿಜ್ಞಾನಿಗಳು, ನಾಗರಿಕರು ಸೇರಿದಂತೆ ಸಹಸ್ರಾರು ಜನ ಇಹ ಲೋಕ ತ್ಯಜಿಸಿದರು. ಖ್ಯಾತ ಹಿನ್ನಲೆ ಗಾಯಕ ಡಾ. ಎಸ್.ಪಿ. ಬಾಲಸುಬ್ರ ಮಣ್ಯಂ, ಜನರಲ್ ಬಿಪಿನ್ ರಾವತ್ ಮತ್ತು ಹಲವು ಸೇನಾಪಡೆ ಗಣ್ಯರು, ರಾಜಕಾರಣಗಳು, ನಮ್ಮ ನೆಚ್ಚಿನ ಪುನೀತ್ ಹಾಗೂ ಹಿರಿಯ ಕಲಾವಿದ ಶಿವರಾಂ ಅವರನ್ನೂ ಕಳೆದುಕೊಂಡೆವು.

ಇಷ್ಟೆಲ್ಲಾ ಮನ ನೋಯಿಸುವ ಘಟನೆಗಳು, ಅಪಘಾತಗಳು, ಸಾವುಗಳು ಸಂಭವಿಸುತ್ತಿರುವ ಸಂದರ್ಭದಲ್ಲಿ ನಮ್ಮ ಆತ್ಮೀಯ ಮಂಜಣ್ಣ ನಮ್ಮನ್ನು ಬಿಟ್ಟು ಅಗಲಿರುವುದು ಮನಸ್ಸಿಗೆ ನೋವು ಉಂಟು ಮಾಡಿದೆ.

ಡಿ. 8ರ ಬುಧವಾರ ರಾತ್ರಿ ಸುಮಾರು 9.30 ಸಮಯದಲ್ಲಿ ಮಂಜಣ್ಣನವರ ಪುತ್ರಿ ಡಾ|| ರಚಿತಾ ಫೋನ್ ಮಾಡಿ, ಗುರು ಅಂಕಲ್ ಪಪ್ಪಗೆ ರಿಂಗ್ ರೋಡ್ ನಲ್ಲಿ ಆಕ್ಸಿಡೆಂಟ್ ಆಗಿದೆ, ಅವರನ್ನು ಎಸ್‌ಎಸ್ ಆಸ್ಪತ್ರೆಗೆ ಸೇರಿಸಲಾಗಿದೆ ಎಂದಾಕ್ಷಣ ನನಗೆ ನಂಬಲಾಗಲಿಲ್ಲ. ತಕ್ಷಣ ಸ್ಥಳಕ್ಕೆ ದಾವಿಸಿದೆ.

ಆಸ್ಪತ್ರೆಯಲ್ಲಿ ಅವರ ಸ್ಥಿತಿಯನ್ನು ನೋಡಿದಾಗ, ಯಾರೋ ಹಂತಕರು ಹಲ್ಲೆ ಮಾಡಿರಬಹುದು ಅನ್ನಿಸುತ್ತಿತ್ತು. ಅಜಾತ ಶತ್ರು ಮಂಜಣ್ಣನಿಗೆ ಯಾರು ಈ ರೀತಿ ಮಾಡಿರಲು ಸಾಧ್ಯ ಎಂದು ಸಮಾಧಾನ ಮಾಡಿಕೊಂಡೆ. ನಂತರ ಎರಡು ದಿನಗಳು ಹಗಲಿರುಳೂ ತಜ್ಞ ವೈದ್ಯರ ತಂಡ ಚಿಕಿತ್ಸೆ ನೀಡಿತು. ಅದರಲ್ಲೂ ನರರೋಗ ಚಿಕಿತ್ಸಾ ತಜ್ಞ ಡಾ|| ಅವಿನಾಶ್, ಮನೆಯವರೇ ಆದ ಕೀಲು ಮೂಳೆ ತಜ್ಞ ಡಾ|| ಕರಿಬಸಪ್ಪ ಹಾಗೂ ಅರಿವಳಿಕೆ ತಜ್ಞ ಡಾ|| ವಿಶ್ವಾಸ್ ಹಾಗೂ ವೈದ್ಯರ ತಂಡ, ಸರ್ವಪ್ರಯತ್ನ ಮಾಡಿದ್ದರು. ಸರ್ವ ಅಂಗಾಂಗಗಳ ವೈಫಲ್ಯತೆಯಿಂದ ಡಿಸೆಂಬರ್ 10ರ ಶುಕ್ರವಾರ ಬೆಳಗ್ಗೆ ಇಹಲೋಕ ತ್ಯಜಿಸಿದರು.

> **"ಹೂವು ಎಂದಿಗೂ ಎರಡು ಬಾರಿ ಅರಳುವುದಿಲ್ಲ ಈ ಜನ್ಮ ಮತ್ತೆ ಮತ್ತೆ ಬರುವುದಿಲ್ಲ. ಜೀವನದಲ್ಲಿ ಸಾವಿರಾರು ಜನರು ಸಿಕ್ಕರೂ ಮನಸ್ಸಿಗೆ ಎಲ್ಲರೂ ಇಷ್ಟ ಆಗುವುದಿಲ್ಲ. ಇಷ್ಟ ಆದವರನ್ನು ಒಮ್ಮೆ ಕಳೆದುಕೊಂಡರೆ ಅಂತಹವರು ಮತ್ತೆ ಮತ್ತೆ ಸಿಗುವುದಿಲ್ಲ"**
> **- ಅನಾಮಿಕ**

ಜನವರಿ 21, 1964 ರಂದು ದಿವಂಗತ ಇಟಗಿ ಶಂಕರಣ್ಣ ಹಾಗೂ ಸುವರ್ಣಮ್ಮ ಅವರ ಪುತ್ರನಾಗಿ ಜನಿಸಿದರು. ಪ್ರಾಥಮಿಕ ಶಿಕ್ಷಣದ ನಂತರ ಬಾಪೂಜಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಬಿ.ಇ ಮುಗಿಸಿ, ಸಿವಿಲ್ ಇಂಜಿನಿಯರ್ ಎಸ್. ಮಂಜುನಾಥ್, ಅಂದಿನಿಂದ ಟೊಯೋಟಾ ಮಂಜಣ್ಣ ಎಂದೇ ಪರಿಚಿತರು.

ತದನಂತರ ಕಾಂಟ್ರಾಕ್ಟರ್ ಆಗಿ ಸೇವೆ ಆರಂಭಿಸಿದ ಅವರು, ತಮ್ಮ ಕಾರ್ಯ ವೈಖರಿಯಿಂದ ಹಾಗು ಸಮಾಜದ ಕಳಕಳಿಯಿಂದ ಎಲ್ಲರ ಮನಸ್ಸನ್ನು ಗೆದ್ದರು. ಪತ್ನಿ ಶ್ರೀಮತಿ ವಿನುತ ಹಾಗು ಇಬ್ಬರು ಹೆಣ್ಣುಮಕ್ಕಳ ತಂದೆಯಾದ ಮಂಜಣ್ಣ ಎಲ್ಲರ ಪಾಲಿಗೆ ಆಪತ್ಭಾಂದವ. ಯಾರಿಗೆ ತೊಂದರೆಯಾದರೂ ಅವುಗಳನ್ನು ಸರಾಗವಾಗಿ ನಿರ್ವಹಿಸುವ ಅಗಾಧ ಶಕ್ತಿ ಅವರಲ್ಲಿತ್ತು.

ಸರ್ವರ ಪಾಲಿಗೆ ಬಲಗೈ ಬಂಟನಂತಿದ್ದ ಮಂಜಣ್ಣ ಎಲ್ಲರ ಹೃದಯವನ್ನು ಗೆದ್ದಿದ್ದರು. ಎಂತಹ ಸಂದರ್ಭದಲ್ಲಿಯೂ ಧೃತಿಗೆಡದೆ ಪರಿಹಾರ ಕಂಡು ಕೊಳ್ಳುತ್ತಿದ್ದರು. ಇಂದಿನ ದಿನಗಳಲ್ಲಿ ಮಾನವೀಯತೆ ಮರೆವ ಹಾಗೂ ಜನಪರ ಕಾರ್ಯಗಳನ್ನು ಮಾಡುವ ವ್ಯಕ್ತಿಗಳು ವಿರಳ. ತನ್ನ ಸ್ವಾರ್ಥಗಳನ್ನು ಮರೆತು, ಇತರರ ಏಳಿಗೆ ಬಯಸುತ್ತಿದ್ದ ಅಪರೂಪದ ವ್ಯಕ್ತಿ ನಮ್ಮ ಮಂಜಣ್ಣ. ಸರ್ವಸ್ವವನ್ನು ಸಮಾಜದ ಏಳಿಗೆಗಾಗಿ ಮುಡಿಪಿಟ್ಟ ಮಂಜಣ್ಣನವರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾರೈಸೋಣ.

**- ಡಾ|| ಜಿ. ಗುರುಪ್ರಸಾದ್**
ಮಕ್ಕಳು ಮತ್ತು ನವಜಾತ ಶಿಶು ತಜ್ಞರು.

Advt.

# 5 ಕುಟುಂಬಗಳಿಗೆ ಧರ್ಮಸ್ಥಳದ ನೆರವು



**ಯಲವಟ್ಟಿ**

ಮಲೇಬೆನ್ನೂರು, ಜ.10- ಯಲವಟ್ಟಿ ಗ್ರಾಮದಲ್ಲಿ ನವೆಂಬರ್ ತಿಂಗಳಿನಲ್ಲಿ ಸುರಿದ ಅಕಾಲಿಕ ಮಳೆಯಿಂದಾಗಿ 5 ಮನೆಗಳು ಕುಸಿದು ಬಿದ್ದಿದ್ದವು. ಆ ಕುಟುಂಬಗಳಿಗೆ ಭಾನುವಾರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ತಲಾ 10 ಸಾವಿರ ರೂ. ಗಳ ಸಹಾಯ ಧನದ ಚೆಕ್ಕನ್ನು ಯೋಜನೆಯ ಜಿಲ್ಲಾ ನಿರ್ದೇಶಕ ಜಯಂತ್ ಪೂಜಾರ್ ವಿತರಿಸಿದರು.

ಡಿಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಗ್ರಾಮದ ಮುಖಂಡ ಜಿ. ಆಂಜನೇಯ, ಎ. ಈಶ್ವರಪ್ಪ, ಟಿ. ಹನುಮಂತಪ್ಪ, ತಿಮ್ಮೇನಹಳ್ಳಿ ಚಂದ್ರಪ್ಪ, ಪಿಎಸಿಎಸ್ ಸಿಇಓ ಶೇಖರಪ್ಪ, ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ, ವಲಯದ ಮೇಲ್ವಿಚಾರಕರಾದ ಪದ್ಮಾವತಿ, ಒಕ್ಕೂಟದ ಅಧ್ಯಕ್ಷೆ ಪೂರ್ಣಿಮಾ, ಸೇವಾ ಪ್ರತಿನಿಧಿಗಳಾದ ಮಮತಾ, ರತ್ನಮ್ಮ ಹಾಗೂ ಸ್ವ-ಸಹಾಯ ಸಂಘಗಳ ಸದಸ್ಯರು ಈ ವೇಳೆ ಹಾಜರಿದ್ದರು.

# ಜಗಳೂರು ತಾಲ್ಲೂಕಿನ ವಿವಿಧೆಡೆ ವಿದ್ಯುತ್ ವ್ಯತ್ಯಯ

ಜಗಳೂರು ಉಪ ವಿಭಾಗ ವ್ಯಾಪ್ತಿಯ 66/11ಕೆ.ವಿ. ಎಂ.ಯು.ಎಸ್.ಎಸ್‌ನಿಂದ ಅಶ್ವತ್‌ರೆಡ್ಡಿ ನಗರದವರೆಗೆ ಎಸ್.ಡಿ.ಪಿ ಹೆಚ್.ಟಿ ಎ.ಬಿ ಕೇಬಲ್ ಕಾಮಗಾರಿ ನಿರ್ವಹಿಸಬೇಕಾಗಿರುವುದರಿಂದ ಜಗಳೂರು ವಿ.ವಿ. ಕೇಂದ್ರ ವ್ಯಾಪ್ತಿಯಲ್ಲಿ ಬರುವ ಜೆಎಫ್-13 ರಸ್ತೆ ಮಾಕುಂಟೆ, ಜೆಎಫ್-14 ಅರಿಶಿನಗುಂಡಿ ಹಾಗೂ ಜೆಎಫ್-15 ಜ್ಯೋತಿಪುರ ನಿರಂತರ ಜ್ಯೋತಿ ಫೀಡರ್‌ಗಳಲ್ಲಿ ಬರುವ ಎಲ್ಲಾ ಗ್ರಾಮಗಳಿಗೆ ಇಂದಿನಿಂದ ಇದೇ ದಿನಾಂಕ 22 ರವರೆಗೆ ಮಧ್ಯಾಹ್ನ 12 ರಿಂದ ಸಂಜೆ 6ರ ವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಮತ್ತು ನೀರಾವರಿ ಪಂಪ್‌ಸೆಟ್ ಮಾರ್ಗಗಳಿಗೆ ಎಫ್-05 ಜಮ್ಮಾಪುರ ಎಫ್-06 ಅಣಬೂರು ಎಫ್-07 ಹನುಮಂತಾಪುರ ಮತ್ತು ಎಫ್-08 ಕಸವನಹಳ್ಳಿ ಫೀಡರ್‌ಗಳ ಎಲ್ಲಾ ನೀರಾವರಿ ಪಂಪ್‌ಸೆಟ್ ಮಾರ್ಗಗಳಿಗೆ ಬೆಳಗ್ಗೆ 6 ರಿಂದ ಮಧ್ಯಾಹ್ನ 12ರ ವರೆಗೆ ವಿದ್ಯುತ್ ಸರಬರಾಜು ಇರುತ್ತದೆ.

## ಚಂಪಾ ನುಡಿ ನಮನ

ಕನ್ನಡದ ಕವಿಯಾಗಿ
ಸಾಹಿತಿ ನಾಟಕಕಾರರಾಗಿ
ಸಂಘಟನಾ ಚತುರರಾಗಿ
ಕಥೆ ಕವನ ಕಾದಂಬರಿ
ನಾಟಕ ಪತ್ರಿಕೆ ಅಂಕಣ
ಬರಹಗಾರರಾಗಿ
ಸದಾ ಮುಂಚೂಣಿಯಲ್ಲಿ ಇರುತ್ತಿದ್ದರು
ಚಂದ್ರಶೇಖರ ಪಾಟೀಲರು!

ಸಾಹಿತ್ಯ ಸೇವೆಗೆ
ಸಂದ ಪ್ರಶಸ್ತಿ ಪುರಸ್ಕಾರಗಳು
ಹತ್ತಾರು
ಬಂಡಾಯ ಸಾಹಿತ್ಯದ ರೂವಾರಿ
ಕನ್ನಡಕ್ಕಾಗಿ
ಕನ್ನಡ ಕನ್ನಡ ಬನ್ನಿ
ನಮ್ಮ ಸಂಗಡ ಎಂದು
ಕರೆಕೊಟ್ಟ ಧೀಮಂತ
ಛಲದಂಕಮಲ್ಲ
ಕರುನಾಡ ಸಿರಿ
ಒಲುಮೆಯ ಗರಿ
ಚಂದ್ರಶೇಖರ ಪಾಟೀಲರು!

ಕನ್ನಡ ಸಾಹಿತ್ಯ ಪರಿಷತ್ತಿನ
ಕನ್ನಡ ಸಾಹಿತ್ಯ ಸಮ್ಮೇಳನದ
ಅಧ್ಯಕ್ಷರಾಗಿ ನಾಡು-ನುಡಿಗೆ
ಸಲ್ಲಿಸಿದ ಸೇವೆ ಅನುಪಮವಾದದ್ದು
ನೇರ ನಡೆ ನುಡಿಯಿಂದ
ಚರ್ಚೆಗೆ ವಿಮರ್ಶೆಗೆ
ಸದಾ ಸುದ್ದಿಯಲ್ಲಿರುತ್ತಿದ್ದರು
ಕಾಣದ ಊರಿಗೆ
ಪಯಣ ಬೆಳೆಸಿದರು
ಚಂದ್ರಶೇಖರ ಪಾಟೀಲರು!

ಶಶಿಯ ಬೆಳದಿಂಗಳಂತೆ
ನಿಮ್ಮ ಮನ
ವಂದಿಸುವೆ ನಾ ನಿಮಗೆ
ನುಡಿ ನಮನ!

**- ಜೆಂಬಿಗಿ ಮೃತ್ಯುಂಜಯ**
ಕನ್ನಡ ಉಪನ್ಯಾಸಕರು, ದಾವಣಗೆರೆ

# 'ಪವರ್ ಆಫ್ ಯೂತ್'ನಿಂದ ಹಣ್ಣು, ಬೆಡ್ ಶೀಟ್ ವಿತರಣೆ



ದಾವಣಗೆರೆ, ಜ.10- ಪವರ್ ಆಫ್ ಯೂತ್ ಬಳಗದ ವತಿಯಿಂದ ಕರ್ನಾಟಕ ರತ್ನ ಪುನೀತ್ ರಾಜಕುಮಾರ್ ಪುಣ್ಯಸ್ಮರಣೆ ಅಂಗವಾಗಿ ಆವರಗೆರೆಯ ವೀರಶೈವ ಪುಣ್ಯಾಶ್ರಮದ ಅಂಧ ಮಕ್ಕಳಿಗೆ ಬೆಳಗಿನ ಉಪಾಹಾರ, ಹಣ್ಣು ಮತ್ತು ಬೆಡ್ ಶೀಟ್ ಗಳನ್ನು ನೀಡಲಾಯಿತು.

ನಂತರ ಅಂಗವಿಕಲರ ಆಶಾಕಿರಣ ಟ್ರಸ್ಟ್ ನಲ್ಲಿ ಪುನೀತ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಮಕ್ಕಳಿಗೆ ಚಾಕೋಲೇಟ್ ವಿತರಿಸಲಾಯಿತು. ಬಳಗದ ಅಧ್ಯಕ್ಷ ಎಲ್. ರುದ್ರನಾಯ್ಕ, ಸದಸ್ಯರಾದ ರುದ್ರನಾಯ್ಕ ಹೆಚ್, ರವಿನಾಯ್ಕ, ಎನ್.ಮಂಜುನಾಥ್, ಅಚ್ಚು, ರವೀಂದ್ರ, ಅಂಜುನಾಯ್ಕ, ಅರುಣಾ, ಶರತ್, ಕುಮಾರ, ವಿಜಿ, ರಾಜು ಕೆರನಳ್ಳಿ, ಕರಿಬಸಪ್ಪ, ಜಿ.ವೆಂಕಟೇಶ, ಅನಿಲ್, ಪ್ರಕಾಶ್, ರಘು ಪೊಲೀಸ್, ದೀಕ್ಷಿತ್, ಸತೀಶ್, ನವೀನ್, ಮಧು, ಗೌತಮಿ ಹಾಗೂ ಮತ್ತಿತರರಿದ್ದರು.

# ಜಿ.ಟಿ. ಕಟ್ಟೆ ಕೆರೆ ಪುನಃಶ್ಚೇತನಕ್ಕೆ ಚಾಲನೆ



ಮಲೇಬೆನ್ನೂರು, ಜ.10- ಕೊಕ್ಕನೂರು ಗ್ರಾ.ಪಂ. ವ್ಯಾಪ್ತಿಯ ಜಿ.ಟಿ. ಕಟ್ಟೆ ಗ್ರಾಮದ ಶ್ರೀ ಆಂಜನೇಯ ಸ್ವಾಮಿಯ ಕೆರೆಯನ್ನು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ 'ನಮ್ಮೂರು-ನಮ್ಮ ಕೆರೆ' ಕಾರ್ಯಕ್ರಮದಡಿ 15 ಲಕ್ಷ ರೂ. ವೆಚ್ಚದಲ್ಲಿ ಪುನಃಶ್ಚೇತನ ಗೊಳಿಸುವ ಕಾಮಗಾರಿಗೆ ಗ್ರಾ.ಪಂ. ಅಧ್ಯಕ್ಷ ನಿಂಗನಗೌಡ, ಯೋಜನೆಯ ಜಿಲ್ಲಾ ನಿರ್ದೇಶಕ ಜಯಂತ್ ಪೂಜಾರಿ ಗುದ್ದಲಿ ಪೂಜೆ ನೆರವೇರಿಸಿ, ಚಾಲನೆ ನೀಡಿದರು. ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ, ಕೃಷಿ ಅಧಿಕಾರಿ ಗಂಗಾಧರ್, ವಲಯ ಮೇಲ್ವಿಚಾರಕರಾದ ಶಾರದ ಮತ್ತು ಇತರರು ಹಾಜರಿದ್ದರು.

# ಸಂಭ್ರಮದಲ್ಲಿ ಚಿಗಟೇರಿ ಬಂಗ್ಲೆ

**(3ನೇ ಪುಟದಿಂದ)** ಗಂಗಮ್ಮ, ಅಕ್ಕ ನಂಜಮ್ಮನವರ ಆಶ್ರಯದಲ್ಲಿ ಬೆಳೆದು ದೊಡ್ಡವರಾದರು.

ಮುರಿಗೆಪ್ಪನವರು ಕೇವಲ ಕೈಗಾರಿಕೋದ್ಯಮಿಗಳಾಗದೆ ಶರಣ ಧರ್ಮ, ಪರಂಪರೆಯಲ್ಲಿ ಅನ್ನ ದಾಸೋಹದಲ್ಲಿ ತಮ್ಮ ಜೀವನದ ಸಾರ್ಥಕತೆ ಪಡೆದುಕೊಂಡರು. 'ಅಥಣಿ ಶಿವಯೋಗಿಗಳು, ಚಿತ್ರದುರ್ಗ ಬೃಹನ್ಮಠದ ಜಯವಿಭವ, ಜಯದೇವ ಮತ್ತು ಮಲ್ಲಿಕಾರ್ಜುನ ಮಹಾಸ್ವಾಮಿಗಳು, ಉಳಿವಿ ಚನ್ನಬಸವಣ್ಣ ಇವರ ಆರಾಧ್ಯ ದೈವವಾಗಿದ್ದರು.

ಮುರಿಗೆಪ್ಪನವರು ರಾಜಕೀಯಕ್ಕೆ ಹೆಚ್ಚಾಗಿ ಬಂದವರಲ್ಲ. ಆದರೆ ಏಕೀಕರಣ ಹೋರಾಟಕ್ಕೆ ಸಾಕಷ್ಟು ಸಹಾನುಭೂತಿ ತೋರಿದರು. ಪ್ರಮುಖ ರಾಜಕೀಯ ಮುಖಂಡರ ಪರಿಚಯ ಅವರಿಗಿತ್ತು. ಅಂದಿನ ಮುಖ್ಯಮಂತ್ರಿಗಳಾದ ಎಸ್. ನಿಜಲಿಂಗಪ್ಪನವರು ಮತ್ತು ಬಿ.ಡಿ. ಜತ್ತಿಯವರೊಡನೆ ಉತ್ತಮ ಸ್ನೇಹ ಹೊಂದಿ ದ್ದರು. ಆದರೆ ರಾಜಕೀಯ ಪ್ರವೇಶ ಮಾತ್ರ ಇರಲಿಲ್ಲ. ಮುರಿಗೆಪ್ಪನವರು ಸಾಮಾಜಿಕ ಸೇವೆಗಳಲ್ಲಿ ಸದಾ ತಮ್ಮನ್ನು ತೊಡಗಿಸಿ ಕೊಳ್ಳುತ್ತಿದ್ದರು. ಸಮಾಜವನ್ನು ಶಿವಸ್ವರೂಪ ವೆಂದು ತಿಳಿದು ಒಂದು ತಿಂಗಳ ಕಾಲ ಸಲ್ಲಿಸಿದ ಮಾನವೀಯ ಸೇವೆ ಅನುಪಮ ವಾದುದು. ಪ್ರತಿದಿನ ಸಾವಿರಗಟ್ಟಲೆ ರೊಟ್ಟಿ ಸುಡಿಸಿಕೊಂಡು, ಸಾಕಾಗುವಷ್ಟು ಪಲ್ಯ ಮತ್ತು ಹಿಂಡಿ ಮಾಡಿಸಿಕೊಂಡು ಲಾರಿಯಲ್ಲಿ ಹೇರಿಸಿಕೊಂಡು ಹಳ್ಳಿ ಹಳ್ಳಿಗೆ ಹೋಗಿ ಹಂಚುವ ವ್ಯವಸ್ಥೆ ಮಾಡಿದ ಕಾರುಣ್ಯ ಹೃದಯ ಮುರಿಗೆಪ್ಪನವರು. ತಮಗೆ ಬಂದು ಕೂಡಿದ ಸಂಪತ್ತು ಶಿವನ ಪ್ರಸಾದ, ಶಿವ ರೂಪವಾದ ಸಮಾಜಕ್ಕೆ ಶಿವನೇ ನೀಡಿದ ಪ್ರಸಾದವನ್ನು ಅರ್ಪಿಸಲು ಸಂಕೋಚವೇಕೆ ಎನ್ನುವುದು ಅವರು ನಂಬಿದ ತತ್ವ, 'ಕಷ್ಟಪಟ್ಟು ದುಡಿ ಇಷ್ಟ ಪಟ್ಟು ಕೊಡು' ಬಹುಶಃ ಬದುಕಿನ ಸಾರ್ಥಕತೆಗೆ ಜೀವಮಾನದಲ್ಲೇ ಇಂತಹ ಒಂದು ಸೇವೆ ಸಾಕೆಂದು ಹೇಳಬಹುದು. ಇದೇ ರೀತಿ CGH ಕೋವಿಡ್ ಸಂದರ್ಭದಲ್ಲಿ ರೋಗಿಗಳು ಗುಣಮುಖರಾಗಲು ಮುರಿಗೆಪ್ಪನವರ ಬೃಹತ್ ಕೊಡುಗೆ ಆಸ್ಪತ್ರೆ ಸೇವೆ ಸಲ್ಲಿಸಿದೆ.

ಮುರಿಗೆಪ್ಪನವರ ವಾಸದ ಮನೆ/ಬಂಗ್ಲೆ ಬಗ್ಗೆ ಹೇಳುವುದಾದರೆ 1921 ರಲ್ಲಿ ನಿರ್ಮಿತವಾದ 'ಚಿಗಟೇರಿ ಬಂಗಲೆ' ಎಂದೇ ಪ್ರಸಿದ್ಧಿ ಹೊಂದಿರುವ ಬಂಗಲೆಯಾಗಿದೆ. ಇದರ ವಿಸ್ತೀರ್ಣ ಸು. 1 ಎಕರೆಯಷ್ಟು ಜಾಗದಲ್ಲಿ ಆಕರ್ಷಕವಾಗಿ, ಸುಣ್ಣದ ಗಾರೆಗಳಿಂದ ನಿರ್ಮಿತವಾಗಿದೆ. ಇಂದಿಗೆ ಶತಮಾನದ ಸಂಭ್ರಮ ಆಚರಿಸಿಕೊಳ್ಳುತ್ತಿದೆ. (1921-2021) ಇಂದಿಗೂ ಈ ಬಂಗಲೆ ಸುಸಜ್ಜಿತವಾಗಿ ಸುಸ್ಥಿತಿಯಲ್ಲಿದೆ. ಈ ಬಂಗ್ಲೆಯಲ್ಲಿ 8 ಕ್ಕೂ ಅಧಿಕ ಬೆಡ್‌ರೂಂಗಳಿವೆ. ಇಟಾಲಿಯನ್ ಟೈಲ್ಸ್ ಬಳಕೆಯಾಗಿದೆ. ಬಂಗಲೆಯ ಒಳ ಮತ್ತು ಹೊರ ನೋಟ ತುಂಬಾ ಆಕರ್ಷಣೀಯವಾಗಿದೆ. ದಾರಿಹೋಕರು ಒಮ್ಮೆ ಈ ಬಂಗ್ಲೆ ನೋಡಿದರೆ ಮತ್ತೆ ನಿಂತು ನೋಡಬೇಕು ಎನ್ನಿಸುತ್ತೆ. ಬಂಗ್ಲೆ ಸುತ್ತಮುತ್ತ ಹಸಿರು ವಾತಾವರಣವಿದ್ದು ಸಣ್ಣದೊಂದು ಕೈ ತೋಟವಿದೆ. ಜೊತೆಗೆ ಉಯ್ಯಾಲೆಯಿದೆ.

ನಿಜಕ್ಕೂ ದಾವಣಗೆರೆ ನಗರ ಪುಣ್ಯ ಭೂಮಿ, ದಾನಿಗಳ ತವರೂರು. ಆದ್ದರಿಂದ ಇಂದು ನಾವೆಲ್ಲರೂ ಶಾಂತಿ ಮತ್ತು ನೆಮ್ಮದಿಯ ಬದುಕನ್ನು ಕಾಣಲು ಇಂತಹ ಮಹಾಪುರುಷರು ಕಾರಣರಾಗು ತ್ತಾರೆ. ಮುರಿಗೆಪ್ಪನವರ ಜೀವನವನ್ನು ಆದರ್ಶವಾ ಗಿಟ್ಟುಕೊಂಡು ಇಂದಿನ ಯುವ ಪೀಳಿಗೆ ಬದುಕಿ ತಮ್ಮ ಜೀವನವನ್ನು ಸಾರ್ಥಕಪಡಿಸಿ ಕೊಳ್ಳಬೇಕು ಎಂಬ ಆಶಯ.

# 31 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಬೆಳ್ಳಿ ನಾಣ್ಯ ವಿತರಣೆ




**ಯುಬಿಡಿಟಿ ಕಾಲೇಜು ಸಹಕಾರಿ ಸಂಘದ ವಾರ್ಷಿಕ ಸಾಮಾನ್ಯ ಸಭೆ**

ದಾವಣಗೆರೆ, ಜ.10- ನಗರದ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜು ಸಹಕಾರಿ ಸಂಘದ ವಾರ್ಷಿಕ ಸಾಮಾನ್ಯ ಸಭೆ ಕಾಲೇಜಿನ ಪ್ರಾಂಶುಪಾಲ ಡಾ.ಮಲ್ಲಿಕಾರ್ಜುನ ಎಸ್. ಹೊಳಿ ಅಧ್ಯಕ್ಷತೆಯಲ್ಲಿ ಕಳೆದ ವಾರ ನಡೆಯಿತು.

ಸಂಘದ ಕಾರ್ಯದರ್ಶಿ ಡಾ. ಎಚ್.ಸಿ.ಮೌನೇಶ್ವರಾಚಾರ್ ವಾರ್ಷಿಕ ವರದಿ ಮಂಡಿಸಿ, ಅನುಮೋದನೆ ಪಡೆದರು. ಸಂಘದ ಅಧ್ಯಕ್ಷ ಡಾ.ಎನ್. ನಾಗೇಶ್, ಸಂಘದ ಮುಂದಿನ ಕಾರ್ಯ ಯೋಜನೆಗಳಾದ ಯುಪಿಐ ಪಾವತಿ ವ್ಯವಸ್ಥೆ ಹಾಗೂ ಸ್ಟಡಿ ಕಿಟ್ ವಿತರಣೆ ಬಗ್ಗೆ ವಿಸ್ತೃತವಾಗಿ ಸಭೆಗೆ ತಿಳಿಸಿದರು.

ಕೊರೊನಾದಿಂದ ಅಸುನೀಗಿದ ಕಾಲೇಜಿನ ಪ್ರಾಧ್ಯಾಪಕ ಡಾ. ಪಾಂಡುರಂಗಪ್ಪ ಅವರ ಆತ್ಮಕ್ಕೆ ಶಾಂತಿ ಕೋರಲಾಯಿತು. ಕಾಲೇಜಿನ ವಿವಿಧ ವಿಭಾಗಗಳಲ್ಲಿ ಪ್ರಥಮ ಸ್ಥಾನ ಗಳಿಸಿದ 31 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರದ ಅಡಿಯಲ್ಲಿ ಬೆಳ್ಳಿ ನಾಣ್ಯ ಮತ್ತು ಪ್ರಮಾಣ ಪತ್ರ ನೀಡಿ ಸನ್ಮಾನಿಸಲಾಯಿತು.

ಶ್ರೀಗೌರಿ ಪ್ರಾರ್ಥಿಸಿದರು. ನಿರ್ದೇಶಕ ಯು.ಸಿ.ನಾಗರಾಜ ಸ್ವಾಗತಿಸಿದರು. ನಿರ್ದೇಶಕರಾದ ಫರೀದಾ ವಂದಿಸಿದರು. ವಿದ್ಯಾರ್ಥಿನಿಯರಾದ ಧನುಜಾ ಮತ್ತು ಅಕ್ಷತಾ ನಿರೂಪಿಸಿದರು.

# ಮುಕ್ತ ವಿವಿಯಿಂದ ಐ.ಬಿ.ಪಿ.ಎಸ್ ರಾಷ್ಟ್ರೀಕೃತ ಬ್ಯಾಂಕ್ ಪರೀಕ್ಷೆಗೆ ತರಬೇತಿ

ದಾವಣಗೆರೆ ಜ.10 - ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಐ.ಬಿ.ಪಿ.ಎಸ್ ರಾಷ್ಟ್ರೀಕೃತ ಬ್ಯಾಂಕ್ ನವರು ಮುಂದಿನ ದಿನಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಅಧಿಕಾರಿಗಳ ಮತ್ತು ಗುಮಾಸ್ತರ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಯನ್ನು ನೀಡಲಾಗುತ್ತದೆ.

ಆಸಕ್ತ ಸ್ಪರ್ಧಾರ್ಥಿಗಳು ಇದೇ ದಿನಾಂಕ 14 ರೊಳಗಾಗಿ ತಮ್ಮ ಹೆಸರನ್ನು ದೂರವಾಣಿ ಸಂಖ್ಯೆ 0821-2515944 ಮೂಲಕ ನೋಂದಾಯಿಸಿಕೊಳ್ಳಬಹುದು ಎಂದು ಕರಾಮುವಿ ಕುಲಸಚಿವರು ತಿಳಿಸಿದ್ದಾರೆ.

# ಗಾಯಕ ಬಸವಲಿಂಗಯ್ಯ ನಿಧನಕ್ಕೆ ಪಂಡಿತಾರಾಧ್ಯ ಶ್ರೀಗಳ ಸಂತಾಪ

ಸಾಣೇಹಳ್ಳಿ, ಜ.10- ಬೆಂಗಳೂರಲ್ಲಿ ನಿಧನರಾದ ಕಲಾವಿದ ಬಸವಲಿಂಗಯ್ಯ ಹಿರೇಮಠ ಅವರಿಗೆ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಂತಾಪ ವ್ಯಕ್ತಪಡಿಸಿದ್ದಾರೆ ನಮ್ಮ ನಡುವಿನ ಅಪರೂಪದ ನಟ, ಜಾನಪದ ಗಾಯಕ. ಅವರದು ಕಂಚಿನ ಕಂಠ. ಹಾಡುತ್ತಿದ್ದರೆ ಇನ್ನೂ ಕೇಳಬೇಕು ಎನ್ನುವ ಕಂಠಸಿರಿ. ಸಣ್ಣಾಟ, ದೊಡ್ಡಾಟ, ಶ್ರೀಕೃಷ್ಣ ಪಾರಿಜಾತ, ಸಂಗ್ಯಾ-ಬಾಳ್ಯಾ ಹೀಗೆ ಲೆಕ್ಕವಿಲ್ಲದಷ್ಟು ನಾಟಕಗಳಿಗೆ ಸಂಗೀತ ಸಂಯೋಜಿಸಿ ದಣಿವಿಲ್ಲದೆ ಹಾಡಿದವರು. ಅವರ ಧರ್ಮಪತ್ನಿ ವಿಶ್ವೇಶ್ವರಿ ಸಹ ಅತ್ಯುತ್ತಮ ನಟಿ ಮತ್ತು ನಿರ್ದೇಶಕಿ. ಅವರಿಬ್ಬರದೂ ಅಪರೂಪದ ಜೋಡಿ. ಸಂಸಾರ ಮತ್ತು ರಂಗ ಸಂಸಾರವನ್ನು ಎಲ್ಲರೂ ಮೆಚ್ಚುವಂತೆ ನಡೆಸಿಕೊಂಡು ಬಂದವರು ಎಂದು ಶ್ರೀಗಳು ಸ್ಮರಿಸಿದ್ದಾರೆ.

# ಚಂಪಾ ನಿಧನಕ್ಕೆ ಜಂಬಿಗಿ ಸಂತಾಪ

ದಾವಣಗೆರೆ, ಜ. 10-ನಮ್ಮನ್ನಗಲಿದ ನಾಡಿನ ಬಂಡಾಯ ಸಾಹಿತಿ, ಕವಿ, ನಾಟಕಕಾರ, ಕನ್ನಡ ಹೋರಾಟಗಾರ, ಡಾ. ಚಂದ್ರಶೇಖರ ಪಾಟೀಲ್ ಅವರ ನಿಧನಕ್ಕೆ ನಗರದ ಕನ್ನಡ ಉಪನ್ಯಾಸಕರೂ ಆದ ಸಾಹಿತಿ ಜಂಬಿಗಿ ಮೃತ್ಯುಂಜಯ ಸಂತಾಪ ಸೂಚಿಸಿದ್ದಾರೆ.


**ಮಹಿಳಾ ಪಿ.ಜಿ.**
ವಿದ್ಯಾರ್ಥಿನಿಯರಿಗೆ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆ ಇರುವ ಮಹಿಳಾ ಪಿ.ಜಿ. ಸೌಲಭ್ಯವಿದೆ.
ಸಂಪರ್ಕಿಸಿ: "ಮೀನಾಕ್ಷಿ ಭವನ" ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನದ ಹತ್ತಿರ, ದಾವಣಗೆರೆ.
90601 72745

**ಮನೆಯ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡುವುದರೊಂದಿಗೆ ಕಾರು ಚಾಲನೆ ಮಾಡಲು ಬೇಕಾಗಿದ್ದಾರೆ.
ಸಂಪರ್ಕಿಸಿ: ಶ್ರೀ ವಿನಾಯಕ ಎಂಟರ್‌ಪ್ರೈಸಸ್ ಸೀತಮ್ಮ ಕಾಂಪ್ಲೆಕ್ಸ್, ಜಯನಗರ ಬಿ ಬ್ಲಾಕ್, ಕಾಳಿದಾಸ ಸರ್ಕಲ್ ಹತ್ತಿರ, ಚರ್ಚ್ ಎದುರು, ದಾವಣಗೆರೆ
94482 33666, 90665 62529

**ಮನೆ ಮಾರಾಟಕ್ಕೆ (36 ಲಕ್ಷ)**
ಕರ್ನಾಟಕ ಗೃಹ ಮಂಡಳಿ 30×40 ಉತ್ತರ ಮನೆ ಕೇವಲ 36 ಲಕ್ಷಕ್ಕೆ
ಕಿರಣ್ ಬೂಸ್ನೂರ್ (ಏಜೆಂಟ್)
ಮೊ. 97315 63409
(20×30 ಮನೆ ಜೆ.ಹೆಚ್. ಪಟೇಲ್‌ನಲ್ಲಿ)

**ಅಡುಗೆ ಭಟ್ಟರು ಬೇಕಾಗಿದ್ದಾರೆ**
ಬ್ಯಾಡಗಿಯಲ್ಲಿರುವ ಹೋಟೆಲ್‌ಗೆ ಅಡುಗೆ ಭಟ್ಟರು ಮತ್ತು ಸಹಾಯಕರು ಪುರುಷರು ಅಥವಾ ಮಹಿಳೆಯರು ಬೇಕಾಗಿದ್ದಾರೆ. (ವಸತಿ ಮತ್ತು ಊಟದ ವ್ಯವಸ್ಥೆ ಇರುತ್ತದೆ)
93437 45992

**ಸೈಟ್ ಮಾರಾಟಕ್ಕೆ (37 ಲಕ್ಷಕ್ಕೆ)**
ಜೆ.ಹೆಚ್ ಪಟೇಲ್ ಬಡಾವಣೆ ಪಕ್ಕ 30x44.5 ಉತ್ತರ ಮನೆ ಕಟ್ಟಲು ತುಂಬಾ ಚನ್ನಾಗಿದೆ.
ಕಿರಣ್ ಬೂಸ್ನೂರ್ (ಏಜೆಂಟ್)
97315 63409, 98440 63409

**ಬೇಕಾಗಿದ್ದಾರೆ**
ಸೋಲಾರ್ ಆಫೀಸಿಗೆ ಅನುಭವ ಇರುವ ಟೆಲಿಕಾಲರ್ ಮತ್ತು ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ.
99646 13790
63642 27321

**SANJEEVINI SHAKTI PURE HERBAL OIL**
Joint Pain Relief
Stockist : Shri Nanjundeshwara Mart, Narasaraja Road, Davangere.
80505 32902

**ಶ್ರೀ ನಂದಿ ಟೆಕ್ನಾಲಜಿ**
ವಾಟರ್ ಲೆವೆಲ್ ಕಂಟ್ರೋಲರ್, 2 ವರ್ಷ ವಾರಂಟಿ, ಸಿಂಟೆಕ್ಸ್‌ನಲ್ಲಿ ನೀರು ಖಾಲಿಯಾದ ತಕ್ಷಣ ಮೋಟಾರ್ ತಾನಾಗಿಯೇ ಆನ್ ಆಗುತ್ತದೆ. ತುಂಬಿದ ತಕ್ಷಣ ನಿಲ್ಲುತ್ತದೆ. ಪಂಪನ್ನು ಆರ್ಥಿಕವಾಗಿ ಬಳಕೆ ಮಾಡಿ, ವಿದ್ಯುತ್ ಉಳಿತಾಯ ಮಾಡುತ್ತದೆ.
98447 71956, 99162 49394

**ಬೇಕಾಗಿದ್ದಾರೆ**
ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್ ಮನೆಯಲ್ಲಿ ಬೆಳಿಗ್ಗೆ 6.30 ರಿಂದ 8.30ರವರೆಗೆ ಅಡಿಗೆ ಮಾಡಲು ಬೇಕಾಗಿದ್ದಾರೆ.
96638 61707

**ಮಾರಾಟ/ಭೋಗ್ಯಕ್ಕೆ**
ಪಶ್ಚಿಮಕ್ಕೆ ರಸ್ತೆ ಇರುವ 30x40 ಅಡಿ ಅಳತೆಯುಳ್ಳ 2 ಅಂತಸ್ತಿನ ಕಟ್ಟಡವು ಹೈಟೆಕ್ ಆಸ್ಪತ್ರೆ ರಸ್ತೆ, ಜಯನಗರದಲ್ಲಿದೆ. ಬೋರ್, ಮುನ್ಸಿಪಲ್ ವಾಟರ್, ಕಾರ್ ಪಾರ್ಕಿಂಗ್ ವ್ಯವಸ್ಥೆ ಇದೆ. ಸಂಪರ್ಕಿಸಿ :
86187 39278

**ಅಡುಗೆ ಕೆಲಸವರು ಬೇಕಾಗಿದ್ದಾರೆ**
SS ಲೇಔಟ್ ಬಿ ಬ್ಲಾಕ್, 3ನೇ ಮುಖ್ಯ ರಸ್ತೆಯಲ್ಲಿರುವ ಮನೆಗೆ, ಮನೆ ಕೆಲಸಕ್ಕೆ ಮತ್ತು ಅಡುಗೆ ಮಾಡುವುದರಲ್ಲಿ ನುರಿತ ಮಹಿಳೆ ಬೇಕಾಗಿದ್ದಾರೆ.
99807 05864

**WANTED FACULTIES**
# CATIA, ANSYS, AUTO-CAD, REVIT, 3DSMAX. #
Teachers for SSLC/ Diploma & B.E Maths
Contact
89712 79127

**ಸೈಟ್ ಮಾರಾಟಕ್ಕಿದೆ**
ದಾವಣಗೆರೆ ಸಿಟಿ ಕೊಂಡಜ್ಜಿ ರಸ್ತೆ ಬಲ ಭಾಗ ಅಶೋಕ ನಗರದಲ್ಲಿ ಬರತಕ್ಕ ಉತ್ತರ ದಿಕ್ಕಿಗೆ ಮುಖವಾಗಿರುವ ಸೈಟ್ ನಂ. 69 ಅಳತೆ : 30x42 ಅಡಿವುಳ್ಳ ರೆವಿನ್ಯೂ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ
ಮೊ: 89703 96509

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್ ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 94837 64859

**ಕುರಿಗಳು ಮಾರಾಟಕ್ಕಿವೆ**
ಶ್ರೀ -ಮಾರುತಿ ಕುರಿ ಸಾಕಾಣಿಕೆ ಕೇಂದ್ರ
ನಮ್ಮಲ್ಲಿ ಉತ್ತಮವಾಗಿ ಸಾಕಿದ ಆರೋಗ್ಯಕರ ನಾಟಿ ಟಗರುಗಳು ಸಿಗುತ್ತವೆ. ದಾವಣಗೆರೆಯಿಂದ ಕೇವಲ 4 ಕಿ.ಮೀ ಸಂಪರ್ಕಿಸಿ
70196 02944
94807 46013

**TEACHERS WANTED**
Teachers wanted for high school
Subject : Social
(Qualification : B.Ed., Ladies only)
95358 85997

**ತಕ್ಷಣ ಕೆಲಸಗಾರರು ಬೇಕಾಗಿದ್ದಾರೆ**
ಸಂಬಳ ರೂ. 7,000/-PM
ಸಮಯ : ಬೆಳಿಗ್ಗೆ 9 ರಿಂದ ಸಂಜೆ 9ರವರೆಗೆ
ಸಂಪರ್ಕಿಸಿ : ರಾಜು ಜನರಲ್ ಸ್ಟೋರ್ಸ್, ಚರ್ಚ್ ರೋಡ್, 8ನೇ ಮೇನ್, ದಾವಣಗೆರೆ.
85535 50436
ಸಂದೀಪ್

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
Near Coffee day, Nutana College Road, Vidyanagara, 2nd Main, Davangere
77603 16576
90080 55813

**JOBS**
Sales Manager/Executives
Any Degree (English, Computer Knowledge)
Office Job/Marketing/ Field Work, Male/Female
Freshers/Experienced
98444 92888

**ಮನೆ ಕಟ್ಟುವವರಿಗೆ ಸಿಹಿ ಸುದ್ಧಿ**
ಸಂಕ್ರಾಂತಿವರೆಗೆ ಬಿಲ್ಡಿಂಗ್ ಪ್ಲಾನ್ಸ್ ಉಚಿತವಾಗಿ ಕೊಡಲಾಗುವುದು. (T&C)
ಕಲ್ಪತರು ಕನ್‌ಸ್ಟ್ರಕ್ಷನ್, ದಾವಣಗೆರೆ.
ಇಂಜಿನಿಯರ್ ಮತ್ತು ಕಾಂಟ್ರ್ಯಾಕ್ಟರ್ಸ್
ಮೊ. : 98455 83340

**ಬೇಕಾಗಿದ್ದಾರೆ**
ಮೆಡ್‌ಕ್ಯೂರ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ: ಶೋಭಾ ಟಾಕೀಸ್ ಹತ್ತಿರ, ಹರಿಹರ
ಮೊ: 78999 91860

**TEACHERS WANTED**
We look for trained and untrained teachers with fluency in English for the following subject. English, Maths, Science, Social, Hindi, Kannada, Computer Science
Sri Gurukula CBSE Residential School
Lokikere Road, Thuruchagatta Village, Davangere.
7338604512, 73386 04513

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಡಾಗ್ ಬೋರ್ಡಿಂಗ್**
ನೀವು ವಿದೇಶಕ್ಕೆ ಹೋಗಲಿದ್ದೀರಾ, ಆರೋಗ್ಯ ಸರಿ ಇಲ್ವಾ ಮನೆಯಲ್ಲಿ ಮಕ್ಕಳು ಇರುವುದರಿಂದ ನಿಮ್ಮ ಪ್ರೀತಿಯ ನಾಯಿಯನ್ನು ನೋಡಿಕೊಳ್ಳಲು ಆಗುತ್ತಿಲ್ಲವೇ, ಹಾಗಿದ್ದರೆ ನಿಮ್ಮ ಪ್ರೀತಿಯ ನಾಯಿಯನ್ನು ನಮ್ಮ ಬಳಿ ಬಿಡಿ. ನಾವು ನಿಮ್ಮ ಪ್ರೀತಿಯ ನಾಯಿ ಆಹಾರ, ಆರೋಗ್ಯ ಮತ್ತು ವಸತಿ ಸಂಪೂರ್ಣ ನಮ್ಮ ಜವಾಬ್ದಾರಿ.
ಆವರಗೆರೆ ಹತ್ತಿರ, SP ಲೇಔಟ್ ದಾವಣಗೆರೆ.
98444 92134

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 81339 33804

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸಂಬಳ 8500/- ಊಟ, ರೂಂ ಉಚಿತ.
97400 98047, 97400 98064

**ಶ್ರೀ ಧರ್ಮಸ್ಥಳ ಮಂಜುನಾಥಸ್ವಾಮಿ ದೈವಶಕ್ತಿ ಜ್ಯೋತಿಷರು**
ಪಂ. ಮಂಜುನಾಥ ಭಟ್, ನಂ.1 ವಶೀಕರಣ ಸ್ಪೆಷಲಿಸ್ಟ್ ಸಮಸ್ಯೆ, ವಿದ್ಯೆ, ಉದ್ಯೋಗ, ಆರೋಗ್ಯ ಹಣಕಾಸು, ಸಾಲಬಾಧೆ, ಮಾಟ-ಮಂತ್ರ, ವಿ ಸೂ: ಸ್ತ್ರೀ- ಪುರುಷ ವಶೀಕರಣಕ್ಕೆ ಕೇವಲ 3ದಿನಗಳಲ್ಲಿ ಪರಿಹಾರ ಶತಸಿದ್ಧ, ನಿಮ್ಮ ಯಾವುದೇ ಸಮಸ್ಯೆಯಿದ್ದರೂ ಫೋನಿನ ಮೂಲಕ ಸಂಪರ್ಕಿಸಿ ಸಮಸ್ಯೆ ಪರಿಹರಿಸಿಕೊಳ್ಳಿ
94497 96933


# ನಗರದಲ್ಲಿ ಇಂದು 'ಹೃದಯ-ರಕ್ತನಾಳ ಆರೋಗ್ಯ' ಉಪನ್ಯಾಸ

ಜಿಲ್ಲಾ ವಕೀಲರ ಸಂಘದಿಂದ ಇಂದು ಮಧ್ಯಾಹ್ನ 1 ಗಂಟೆಗೆ ಜಿಲ್ಲಾ ವಕೀಲರ ಸಾಂಸ್ಕೃತಿಕ ಭವನದಲ್ಲಿ 'ಹೃದಯ- ರಕ್ತನಾಳ ಆರೋಗ್ಯ' ಉಪನ್ಯಾಸ ನಡೆಯಲಿದೆ. ಡಾ. ಆರ್. ಗಿರೀಶ್ ಉಪನ್ಯಾಸ ನೀಡಲಿದ್ದಾರೆ ಎಂದು ಸಂಘದ ಅಧ್ಯಕ್ಷ ಡಿ.ಪಿ. ಬಸವರಾಜ್, ಕಾರ್ಯದರ್ಶಿ ಲೋಕಿಕೆರೆ ಹೆಚ್. ಪ್ರದೀಪ್ ತಿಳಿಸಿದ್ದಾರೆ.


**ಶ್ರೀ ಕಾಮಾಕ್ಷಿ ಸ್ವರ್ಣ ಉಳಿತಾಯ ಯೋಜನೆ**
4ನೇ ಲಕ್ಕಿ ಡ್ರಾ ನಂಬರ್
199
ಪ್ರವೀಣ್ ಶಾಮನೂರು
ಅತ್ಯುತ್ತಮ ಆಭರಣಕ್ಕಾಗಿ ಇಂದೇ ಭೇಟಿ ಕೊಡಿ:
ರಾಯ್ಕರ್ ಜ್ಯುವೆಲರಿ ವರ್ಕ್ಸ್ ಅಂಡ್ ಜೆಮ್ಸ್
ಶ್ರೇಷ್ಠ ಜಾತಿಯ ಅದೃಷ್ಟ ಹರಳುಗಳ, ರುದ್ರಾಕ್ಷಿಗಳ ಆಗರ
8ನೇ ಮೇನ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. ಫೋನ್ : 08192-252589

**Industrial ಸೈಟ್‌ಗಳು ಮಾರಾಟಕ್ಕಿವೆ**
1) 40x68 ಅಡಿ ಅಳತೆಯ ಜೋಡಿ ಸೈಟುಗಳು ಸೋನಾಲಿಕಾ ಟ್ರ್ಯಾಕ್ಟರ್ ಶೋ ರೂಮ್ ಹಿಂಭಾಗ, ಪಿ.ಬಿ.ರಸ್ತೆ ದಾವಣಗೆರೆ. 2) 25x88 ಅಥವಾ 50x88 ಅಡಿ ಅಳತೆಯ ಸೈಟ್ ಸಬ್ ರಿಜಿಸ್ಟ್ರಾರ್ ಕಛೇರಿ ಎದುರಿನ ಒಳ ರಸ್ತೆ, ದಾವಣಗೆರೆ. ಸಂಪರ್ಕಿಸಿ :
ಮೋಹನ್ ರಿಯಲ್ ಎಸ್ಟೇಟ್ ಏಜೆನ್ಸೀಸ್
ಮೊ : 97424 34049


# ನಗರದಲ್ಲಿಂದು 'ಲಾಕ್‌ಡೌನ್-3' ಕಿರು ಚಿತ್ರಕ್ಕೆ ಕಲಾವಿದರ ಆಯ್ಕೆ

ವೈಷ್ಣವಿ ಎಂ.ಫಿಲ್ಮ್ ವತಿಯಿಂದ ಇಂದು ಬೆಳಿಗ್ಗೆ 7.30 ರಿಂದ ಸಂಜೆ 7.30 ರವರೆಗೆ ವಿದ್ಯಾನಗರದ ಶ್ರೀ ಸಾಯಿ ಭವನದಲ್ಲಿ 'ಲಾಕ್‌ಡೌನ್-3 ' ಕಿರು ಚಿತ್ರಕ್ಕೆ ಕಲಾವಿದರನ್ನು ಆಯ್ಕೆ ಮಾಡುವ ಪ್ರಕ್ರಿಯೆ ನಡೆಯಲಿದೆ.

ಕಿರುಚಿತ್ರಕ್ಕೆ ಉಚಿತವಾಗಿ ತರಬೇತಿ ನೀಡಿ ಪಾತ್ರ ಹಂಚಿಕೆ ಮಾಡಲಾಗುವುದು. ಡ್ರಾಮಾ ಜೂನಿಯರ್ಸ್, ಮಜಾ ಭಾರತ ಮತ್ತಿತರೆ ಟಿವಿ ರಿಯಾಲಿಟಿ ಶೋಗಳಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ನಮ್ಮ ಈ ವೇದಿಕೆ ಮೆಟ್ಟಿಲಾಗಬಹುದು. ಯಾವುದೇ ವಯೋಮಿತಿ ಇರುವುದಿಲ್ಲ. ಕಿರುಚಿತ್ರ ನಿರ್ಮಿಸಿದ ನಂತರ ದಾವಣಗೆರೆ ಮತ್ತು ಹರಿಹರ ನಗರಗಳಲ್ಲಿ ಪ್ರದರ್ಶನ ಮಾಡಲಾಗುವುದು ಎಂದು ರಂಗ ನಿರ್ದೇಶಕ ಮಂಜುನಾಥ ಹೊಳೆಸಿರಿಗೆರೆ (94830-16034) ತಿಳಿಸಿದ್ದಾರೆ.

# ರಥ ಜೋಡಣೆ ಸಾಮಗ್ರಿ ಹೊತ್ತ ವಾಹನಗಳಿಗೆ ಪೂಜೆ



**ಹರಪನಹಳ್ಳಿ**

ಹರಪನಹಳ್ಳಿ, ಜ.10- ವಾಲ್ಮೀಕಿ ಗುರುಪೀಠಕ್ಕೆ ಸಚಿವ ಆನಂದಸಿಂಗ್ ದೇಣಿಗೆ ನೀಡಿದ ರಥ ಜೋಡಣೆಯ ಸಕಲ ಸಾಮಗ್ರಿಗಳನ್ನು ಹೊತ್ತು ಹರಿಹರ ವಾಲ್ಮೀಕಿ ಗುರು ಪೀಠಕ್ಕೆ ಹೊರಟಿದ್ದ ವಾಹನಗಳಿಗೆ ಪಟ್ಟಣದಲ್ಲಿ ತಾಲ್ಲೂಕಿನ ವಾಲ್ಮೀಕಿ ಸಮಾಜದ ವತಿಯಿಂದ ಸೋಮವಾರ ಪೂಜೆ ಸಲ್ಲಿಸಿ ಬೀಳ್ಕೊಡಲಾಯಿತು. ಹಂಪಿ ವಿರುಪಾಕ್ಷೇಶ್ವರ ದೇವಸ್ಥಾನದಿಂದ ಆಗಮಿಸಿದ ವಾಹನಗಳಿಗೆ ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ವಾಲ್ಮೀಕಿ ಸಮಾಜ ಬಾಂಧವರು ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಟ್ರಸ್ಟಿಗಳಾದ ಜಂಬಯ್ಯನಾಯಕ, ವಾಲ್ಮೀಕಿ ನಾಯಕ ಸಮಾಜದ ತಾಲ್ಲೂಕು ಅಧ್ಯಕ್ಷ ಕೋರಿಶೆಟ್ಟಿ ಉಚ್ಚೆಂಗೆಪ್ಪ, ವಾಲ್ಮೀಕಿ ಜಾತ್ರಾ ಸಮಿತಿ ಅಧ್ಯಕ್ಷ ಆಲದಹಳ್ಳಿ ಷಣ್ಮುಖಪ್ಪ, ಪ್ರಧಾನ ಕಾರ್ಯದರ್ಶಿ ಜಿ. ನಾಗರಾಜ, ಉಪಾಧ್ಯಕ್ಷ ದಾದಾಪುರ ಶಿವಾನಂದ, ನಿವೃತ್ತ ಮುಖ್ಯ ಶಿಕ್ಷಕ ಆನಂದಪ್ಪ, ದ್ಯಾಪನಾಯಕನಹಳ್ಳಿ ಜಿ.ಕೆ. ಬಸವರಾಜ, ಮಹಿಳಾ ಘಟಕದ ಅಧ್ಯಕ್ಷೆ ಕಂಚಿಕೇರಿ ಜಯಲಕ್ಷ್ಮಿ, ಗೌರವ ಅಧ್ಯಕ್ಷರಾದ ಪದ್ಮಾವತಿ, ಪದಾಧಿಕಾರಿಗಳಾದ ಮಂಜುಳಾ, ಸುನಿತಾ, ಪವಿತ್ರ, ಏಕಲವ್ಯ ಸಂಘರ್ಷ ಸಮಿತಿಯ ಅಧ್ಯಕ್ಷ ರಾಯದುರ್ಗದ ಪ್ರಕಾಶ, ಕಾರ್ಯದರ್ಶಿ ಶಿವರಾಜ, ಮುಖಂಡರಾದ ಕಣಿವಿಹಳ್ಳಿ ರಾಮಪ್ಪ, ಚಂದ್ರಪ್ಪ ತಳವಾರ, ಸುರೇಶ ಮಂಡಕ್ಕಿ. ಕಣಿವಿಹಳ್ಳಿ ಮಾರುತಿ, ಬಸವರಾಜ ಸೇರಿದಂತೆ ಇತರರು ಹಾಜರಿದ್ದರು.

# ಅಭಿವೃದ್ಧಿ ಕಾಮಗಾರಿಗಳಿಗೆ ಪೂಜೆ



ದಾವಣಗೆರೆ, ಜ.10- ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಯಡಿಯಲ್ಲಿ ಮಹಾನಗರ ಪಾಲಿಕೆ ವ್ಯಾಪ್ತಿಯ 6ನೇ ವಾರ್ಡ್ ವಿಜಯನಗರ ಬಡಾವಣೆಯಲ್ಲಿ ಶನಿವಾರ ಸಿಸಿ ರಸ್ತೆ ಮತ್ತು ಒಳಚರಂಡಿ ನಿರ್ಮಾಣಕ್ಕೆ ಸಂಸದ ಜಿ.ಎಂ.ಸಿದ್ದೇಶ್ವರ ಗುದ್ದಲಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಯಡಿಯಲ್ಲಿ ಅಂದಾಜು 1.75 ಕೋಟಿ ರೂ. ಮೊತ್ತದಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾರ್ಯ ನಡೆಯಲಿದ್ದು, ಕಾಮಗಾರಿಗಳ ಗುಣಮಟ್ಟ ಕಾಪಾಡಿಕೊಳ್ಳುವಂತೆ ಗುತ್ತಿಗೆದಾರರಿಗೆ ಸೂಚಿಸಿದರು.

ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ಉಪ ಮಹಾಪೌರರಾದ ಶ್ರೀಮತಿ ಶಿಲ್ಪಾ ಜಯಪ್ರಕಾಶ್, ನಿಕಟಪೂರ್ವ ಬಿಜೆಪಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಎಲ್.ಡಿ.ಗೋಣೆಪ್ಪ, ಒಬಿಸಿ ಅಧ್ಯಕ್ಷ ನಿಂಗೋಜಿ ರಾವ್, ಆಯುಕ್ತ ವಿಶ್ವನಾಥ್ ಮುದಜ್ಜಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಅಧರ - ಉದರ ಎರಡಕ್ಕೂ ಸಿಹಿ ಇರಲಿ

## ಜಿಎಂಐಟಿಯಲ್ಲಿ ಆರೋಗ್ಯಕ್ಕೆ ರುಚಿಕರವಾದ ಉತ್ಪನ್ನಗಳ ಪ್ರದರ್ಶನ



ದಾವಣಗೆರೆ, ಜ. 10 - ಅಧರಕ್ಕೆ ಸಿಹಿ, ಉದರಕ್ಕೆ ಕಹಿ ಎಂಬ ಮಾತಿದೆ. ಅಂದರೆ ರುಚಿಗೆ ಸಿಹಿಯಾಗಿದ್ದರೂ ಹೊಟ್ಟೆಗೆ ಅಪಾಯಕಾರಿ ಎಂಬುದು ಈ ಹಳೆಯ ಮಾತಿನ ಅರ್ಥ. ಆದರೆ, ರುಚಿಯೊಂದಿಗೆ ಆರೋಗ್ಯವೂ ಇದ್ದರೆ ಚಂದ ಎಂಬುದು ಜಿಎಂಐಟಿಯ ಬಯೋಟೆಕ್ ವಿದ್ಯಾರ್ಥಿಗಳ ನಿಲುವಾಗಿದೆ.

ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಉತ್ಪನ್ನ ಮೇಳದಲ್ಲಿ ವಿದ್ಯಾರ್ಥಿಗಳು ಅಡಿಕೆ ಯಿಂದ ತಯಾರಿಸಲಾದ ಉಪ್ಪಿನಕಾಯಿ, ಊದುಬತ್ತಿ, ದೊಡ್ಡಪತ್ರೆಯ ಕೆಮ್ಮು ನಿವಾರಕ ಚಾಕೊಲೇಟ್, ರಾಗಿಯ ಮಿಲ್ಕ್ ಶೇಕ್ ಸೇರಿದಂತೆ 43 ಉತ್ಪನ್ನಗಳನ್ನು ಪ್ರದರ್ಶಿಸಿದರು. ರುಚಿಯ ಜೊತೆಗೆ ಆರೋಗ್ಯವನ್ನೂ ಕಾಪಾಡುವ ಪ್ರಮುಖ ಉದ್ದೇಶ ಉತ್ಪನ್ನಗಳಲ್ಲಿ ಕಂಡು ಬಂತು.

ಒಂದು ದಿನದ ಪ್ರದರ್ಶನದಲ್ಲಿ ಆರೋಗ್ಯಕ್ಕೆ ಹಿತವಾದ, ಪರಿಸರ ಸ್ನೇಹಿ, ರೋಗ ನಿರೋಧಕ ಹಾಗೂ ಶಕ್ತಿ ವರ್ಧಕ ಎಂಬ ನಾಲ್ಕು ವಿಭಾಗಗಳಲ್ಲಿ ಉತ್ಪನ್ನಗಳನ್ನು ಪ್ರದರ್ಶಿಸಲಾಗಿತ್ತು.

ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಕಾಲೇಜಿನ ಅಧ್ಯಕ್ಷ ಜಿ.ಎಂ. ಲಿಂಗರಾಜು ಅವರು, ವಿದ್ಯಾರ್ಥಿಗಳ ಆವಿಷ್ಕಾರಗಳನ್ನು ಉತ್ಪನ್ನಗಳಾಗಿ ಮಾರುಕಟ್ಟೆಗೆ ತರಬೇಕಿದೆ. ಇದಕ್ಕಾಗಿ ಬೆಂಗಳೂರಿನ ನವೋದ್ಯಮಗಳನ್ನು ಸಂಪರ್ಕಿಸಲಾಗಿದೆ ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಡಾ. ವೈ. ವಿಜಯ ಕುಮಾರ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಸಂಶೋಧನಾ ಮನೋಭಾವಕ್ಕೆ ಉತ್ತೇಜನ ನೀಡಲಾಗುತ್ತಿದೆ. ಈ ಉತ್ಪನ್ನಗಳಲ್ಲಿ ಕನಿಷ್ಠ ಹತ್ತಾದರೂ ಮಾರುಕಟ್ಟೆಗೆ ಬರುವಂತೆ ಮಾಡಲು ಪ್ರಯತ್ನ ನಡೆಸಲಾಗುವುದು ಎಂದು ತಿಳಿಸಿದರು.

ಮೇಳದಲ್ಲಿ ಏಳನೇ ಸೆಮಿಸ್ಟರ್‌ನ ಎಂ.ಕೆ. ಮಧು ಅವರು ದೊಡ್ಡಪತ್ರೆ ಬಳಸಿ ಕೆಮ್ಮು ನಿವಾರಕ ಚಾಕೊಲೇಟ್ ರೂಪಿಸಿದ್ದಾರೆ. ಕೆಮ್ಮು - ಶೀತ ನಿವಾರಣೆಯ ಜೊತೆಗೆ ಜೀರ್ಣಶಕ್ತಿ ಸುಧಾರಣೆಗೆ ಇದು ನೆರವಾಗುವ ಜೊತೆಗೆ ಬಾಯಿಗೆ ಪರಿಮಳ ನೀಡುತ್ತದೆ ಎಂದುವರು ಹೇಳಿದ್ದಾರೆ. ಈ ಯೋಜನೆಯಲ್ಲಿ ಕೆ.ವಿ. ಯಶಸ್ವಿನಿ, ಬಿ. ಭೂಮಿಕ, ಪಿಎಂ. ಹೊನ್ನು ಹಾಗೂ ಕೆ.ಎಸ್. ವಿಜಯ್ ಭಾಗಿಯಾಗಿದ್ದಾರೆ.

ಮಂಜುನಾಥ್ ಸೊಣ್ಣದ್, ಎನ್.ಆರ್. ಚಿನ್ಮಯಿ ಹಾಗೂ ಎಂ. ಜೀವಿತ ಅವರ ತಂಡ ಸೊಯಾಬೀನ್ ಮೂಲಕ ಮೊಸರಿನ ಪುಡಿ ರೂಪಿಸಿದೆ.

ಭಾವನಾ ಹಿರೇಮಠ್ ಅವರ ತಂಡ ಗುಲಾಬಿ ದಳ ಬಳಸಿ ನೈಸರ್ಗಿಕ ಲಿಪ್‌ಸ್ಟಿಕ್ ತಯಾರಿಸಿದೆ. ಇದು ತುಟಿ ಒಡೆಯುವ ಸಮಸ್ಯೆಯನ್ನೂ ನಿವಾರಿಸುತ್ತದೆ ಎಂದು ಲಿಪ್‌ಸ್ಟಿಕ್ ರೂಪಿಸಿದ ತಂಡದಲ್ಲಿರುವ ಗೌತಮಿ ಹಿರೇಮಠ್, ಎಂ. ವಂದನ, ಎಸ್.ಆರ್. ಮುದ್ದೇಗೌಡ, ಡಿ.ಆರ್. ದೀಕ್ಷಿತ್ ಹೇಳಿದ್ದಾರೆ.

ಲಿಪ್‌ಸ್ಟಿಕ್ ನಂತರ ಕೂದಲಿನ ಬಣ್ಣ ಬೇಡವೇ? ಖಂಡಿತ, ಅದನ್ನು ರೂಪಿಸಿರುವುದು ಎಂ. ಗೀತ, ಸಿ.ವಿ. ಗೌರಮ್ಮ ಹಾಗೂ ಸುಜಾತರ ತಂಡ. ಶುಂಠಿ, ಭೃಂಗರಾಜ ಪುಡಿ, ಮೆಹಂದಿ ಇತ್ಯಾದಿ ನೈಸರ್ಗಿಕ ವಸ್ತುಗಳನ್ನು ಬಳಸಿ ರೂಪಿಸಿರುವ ಹೇರ್‌ಡೈ, ಬಣ್ಣವಷ್ಟೇ ಅಲ್ಲದೇ ಕೂದಲನ್ನು ದಪ್ಪ ಹಾಗೂ ಹೊಟ್ಟು ತಡೆಯುವ ಕೆಲಸ ಮಾಡುತ್ತದೆ ಎಂದು ವಿದ್ಯಾರ್ಥಿಗಳು ಹೇಳಿದ್ದಾರೆ.

ಪರಿಸರದಲ್ಲಿ ಸುಲಭವಾಗಿ ಲಭ್ಯವಿರುವ ವಸ್ತುಗಳನ್ನು ಬಳಸಿಕೊಂಡು ರುಚಿಯ ಜೊತೆಗೆ ಜನರ ಆರೋಗ್ಯಕ್ಕೆ ಹಿತ ನೀಡುವ ಪದಾರ್ಥಗಳನ್ನು ರೂಪಿಸಲು ಇಂಜಿನಿಯರಿಂಗ್ ವಿದ್ಯಾರ್ಥಿಗಳು ಪರಿಶ್ರಮ ಹಾಕಿದ್ದಾರೆ. ಮುಂದಿನ ದಿನಗಳಲ್ಲಿ ಈ ಉತ್ಪನ್ನಗಳು ಮಾರುಕಟ್ಟೆಗೆ ಬಂದು ಜನರಿಗೆ ತಲುಪಿದರೆ ಅವರ ಶ್ರಮ ಸಾರ್ಥವಾಗುವುದರಲ್ಲಿ ಸಂಶಯವಿಲ್ಲ.

### ಸಸ್ಯಾಧಾರಿತ ಮಾಂಸ!

ನೀವು ಸಸ್ಯಹಾರಿಯೇ ಅಥವಾ ಮಾಂಸಾಹಾರಿಯೇ ಎಂಬ ಪ್ರಶ್ನೆಗೆ ಶಾಶ್ವತ ಪೂರ್ಣ ವಿರಾಮ ನೀಡಲು ಜೈವಿಕ ತಂತ್ರಜ್ಞಾನದ ವಿದ್ಯಾರ್ಥಿಗಳು ಮುಂದಾಗಿರುವಂತಿದೆ. ಏಕೆಂದರೆ ವಿದ್ಯಾರ್ಥಿಗಳು ಕಾಳುಗಳನ್ನು ಬಳಸಿ ಕೃತಕ ಮಾಂಸವನ್ನು ರೂಪಿಸಿದ್ದಾರೆ! ಶುದ್ಧ ಸಸ್ಯಹಾರಿಗಳಾದ ಜಿ. ಚಂದನ, ಬಿ.ಜಿ. ಗಗನಶ್ರೀ ಮುಂತಾದವರು ಸೇರಿಕೊಂಡು ಹಲವಾರು ಕಾಳುಗಳನ್ನು ಬಳಸಿ ಸಸ್ಯಾಧಾರಿತ ಮಾಂಸ ರೂಪಿಸಿದ್ದಾರೆ. ಇದಕ್ಕೆ ಬೀಟ್‌ರೂಟ್‌ನಿಂದ ಪಡೆದ ಬಣ್ಣವನ್ನೂ ಬೆರೆಸಿದ್ದಾರೆ. ಅಂತಿಮವಾಗಿ ಉತ್ಪನ್ನ ಥೇಟ್ ಮಾಂಸದಂತೆಯೇ ಇದೆ. ಮಾಂಸಾಹಾರಿ ಸ್ನೇಹಿತರು ಈ ಉತ್ಪನ್ನ ಬಳಸಿದ್ದಾರೆ. ಮಾಂಸದ ರುಚಿಗೆ ಅತ್ಯಂತ ಸಮೀಪವಾಗಿದೆ ಎಂಬ ತೀರ್ಪು ನೀಡಿದ್ದಾರೆ ಎಂದು ಚಂದನ ಹೇಳಿದ್ದಾರೆ. ಈ ಸಸ್ಯಾಧಾರಿತ ಮಾಂಸದಲ್ಲಿ ಕೊಬ್ಬು ಕಡಿಮೆ ಹಾಗೂ ಫೈಬರ್ ಹೆಚ್ಚು ಮತ್ತು ಎಲ್ಲರಿಗೂ ಆರೋಗ್ಯಕರ ಎಂದವರು ತಿಳಿಸಿದ್ದಾರೆ. ಈ ಉತ್ಪನ್ನ ರೂಪಿಸಿದ ತಂಡದಲ್ಲಿ ಜಿ.ಟಿ. ಪೂಜಾ, ಕೆ.ಪಿ. ಪ್ರಣವಿ ಹಾಗೂ ವಿ. ಸಂಜನ ಅವರಿದ್ದಾರೆ.

### ಅಡಿಕೆಯ ಉಪ್ಪಿನಕಾಯಿ, ಊದುಬತ್ತಿ

ಪಿ.ವಿ. ಐಶ್ವರ್ಯ ಹಾಗೂ ಸಿ.ಬಿ. ದೀಪ್ತಿ ಅವರು ಅಡಿಕೆ ಉಪ್ಪಿನಕಾಯಿ ಮಾಡಿದ್ದಾರೆ. ಸಾಮಾನ್ಯ ಉಪ್ಪಿನಕಾಯಿ ರೀತಿಯಲ್ಲೇ 2-3 ತಿಂಗಳಲ್ಲಿ ಅಡುಕೆ ಉಪ್ಪಿನಕಾಯಿ ಕಳಿಯುತ್ತದೆ ಎಂದವರು ಹೇಳಿದ್ದಾರೆ. ಅಡಿಕೆಯ ನಾರಿನ ತ್ಯಾಜ್ಯದಿಂದ ಊದುಬತ್ತಿ ತಯಾರಿಸಿರುವುದು ಐಶ್ವರ್ಯ ಸಾಕ್ರೆ, ಪಿ. ಅಂಜಲಿ, ಕೆ. ಭೂಮಿಕ ಹಾಗೂ ಸಿ.ಬಿ. ದೀಪ್ತಿ. ಸುವಾಸನೆಗೆ ಕೊರತೆಯಿಲ್ಲ, ಖರ್ಚೂ ಕಡಿಮೆ ಎಂಬುದು ಅವರ ಅನಿಸಿಕೆ.

### ರಾಗಿಯ ಚಾಕೊಲೇಟ್ ಚಂದ

ಎಂ.ಗೀತ, ಸಿ.ವಿ. ಗೌರಮ್ಮ ಹಾಗೂ ಸುಜಾತ ಸೇರಿಕೊಂಡು ರಾಗಿಯ ಚಾಕೊಲೇಟ್ ಮಿಲ್ಕ್‌ಷೇಕ್ ಹಾಗೂ ರಾಗಿಯ ಚಾಕೊಲೇಟ್ ರೂಪಿಸಿದ್ದಾರೆ. ಹಾಲು ಹಾಗೂ ರಾಗಿ ಬೆರೆಸಿ ರೂಪಿಸಿರುವ ರಾಗಿಯ ಚಾಕೊಲೇಟ್ ಮಿಲ್ಕ್‌ಷೇಕ್ ಆರೋಗ್ಯಕ್ಕೆ ಸೂಪರ್‌ಹಿಟ್ ಎಂಬುದು ಅವರ ಅನಿಸಿಕೆ. ಸಕ್ಕರೆಯ ಬದಲು ಜೇನು ತುಪ್ಪ ಬೆರೆಸಿ ರೂಪಿಸಿರುವ ರಾಗಿಯ ಚಾಕೊಲೇಟ್ ಮಕ್ಕಳಿಗೆ ಒಳ್ಳೆಯದು ಎಂದವರು ಹೇಳಿದ್ದಾರೆ.

# ನಗರದ ವಿವಿಧೆಡೆಯಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸರಸ್ವತಿ ಬಡಾವಣೆ ಎ, ಬಿ, ಸಿ ಬ್ಲಾಕ್, ಜೀವನ್ ಭೀಮಾನಗರ, ಚಿಕ್ಕಮಣಿ ದೇವರಾಜ್ ಅರಸ್ ಬಡಾವಣೆ, ಜಯನಗರ ಎ & ಬಿ ಬ್ಲಾಕ್, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಸಾಯಿಬಾಬಾ ದೇವಸ್ಥಾನದ ಸುತ್ತಮುತ್ತ, ಲಕ್ಷ್ಮಿ ಬಡಾವಣೆ ಹಾಗೂ ಸುತ್ತಮತ್ತಲಿನ ಪ್ರದೇಶಗಳು.

ದೂರದರ್ಶನ ಕೇಂದ್ರ, ಮಹಾನಗರ ಪಾಲಿಕೆ ನೀರು ಸರಬರಾಜು ಘಟಕಗಳು, ಸರ್ಕ್ಯೂಟ್ ಹೌಸ್, ಭೂಸೇನಾ ನಿಗಮ, ಜಿಲ್ಲಾ ಪಂಚಾಯತ್ ಕಛೇರಿ. ಇಂಡಸ್ಟ್ರಿಯಲ್ ಏರಿಯಾ ಲೋಕಿಕೆರೆ ರಸ್ತೆ, ಸುಬ್ರಹ್ಮಣ್ಯನಗರ, ಎಸ್.ಎ .ರವೀಂದ್ರನಾಥ ಬಡಾವಣೆ ಮತ್ತು ಸುತ್ತ ಮುತ್ತ ಪ್ರದೇಶಗಳು.

ಶಿವಕುಮಾರಸ್ವಾಮಿ ಬಡಾವಣೆ 1 ಮತ್ತು 2ನೇ ಹಂತ, ಹದಡಿ ರಸ್ತೆ, ಸೇಂಟ್ ಜಾನ್ ಸ್ಕೂಲ್, ಐ.ಟಿ.ಐ. ಕಾಲೇಜು, ರಿಂಗ್‌ರಸ್ತೆ, ಶ್ರೀನಿವಾಸ ನಗರ, ತರಳಬಾಳು ಬಡಾವಣೆ ಮತ್ತು ಸುತ್ತ ಮುತ್ತ ಪ್ರದೇಶಗಳು.

ಯುಬಿಡಿಟಿ ಲೇಡಿಸ್ ಹಾಸ್ಟೆಲ್, ಜಮುನಾ ವಾಣಿಜ್ಯ ಮಳಿಗೆ, ಸವಿತಾ ಹೋಟೆಲ್, ವಿದ್ಯಾನಗರ, ತರಳಬಾಳು ಬಡಾವಣೆ ಗಾಂಧಿ ಮೂರ್ತಿ ವೃತ್ತದಿಂದ ಈಶ್ವರ ಪಾರ್ವತಿ ದೇವಸ್ಥಾನ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. ಎಸ್.ಓ.ಜಿ ಕಾಲೋನಿ ಎ, ಬಿ, ಸಿ ಬ್ಲಾಕ್, ಬುದ್ದ, ಬಸವ ಭೀಮ ನಗರ, ಕರ್ನಾಟಕ ಬೀಜ ನಿಗಮ ಹಾಗೂ ಸುತ್ತಮತ್ತಲಿನ ಪ್ರದೇಶಗಳು. ಸ್ವಾಮಿ ವಿವೇಕಾನಂದ ಬಡಾವಣೆ, ಎಲ್.ಐ.ಸಿ ಕಾಲೋನಿ, ಆಂಜನೇಯ ಬಡಾವಣೆ, ವಿನಾಯಕ ಬಡಾವಣೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

# ಹೋರಿ ಬೆದರಿಸುವ ಸ್ಪರ್ಧೆಗೆ ಚಾಲನೆ: ಕ್ಷಮೆ ಯಾಚಿಸಿದ ಶಾಸಕ ಎಂಪಿಆರ್



ಹೊನ್ನಾಳಿ, ಜ.10 - ತಾಲ್ಲೂಕಿನ ಬಲಮುರಿ ಗ್ರಾಮದಲ್ಲಿ ಇಂದು ಆಯೋಜಿಸಿದ್ದ ಹೋರಿ ಬೆದರಿಸುವ ಸ್ಪರ್ಧೆಯಲ್ಲಿ ಯುವಕರ ಅಪೇಕ್ಷೆಯ ಮೇರೆಗೆ ಪಾಲ್ಗೊಂಡಿದ್ದೇನೆ. ಕೊರೊನಾ ಸೋಂಕು ತಡೆಗಟ್ಟುವ ಹಿನ್ನೆಲೆಯಲ್ಲಿ ಸರ್ಕಾರ ರೂಪಿಸಿರುವ ನಿಯಮಾವಳಿಗಳನ್ನು ಉಲ್ಲಂಘಿಸಿರುವುದಕ್ಕೆ ತಾವು ರಾಜ್ಯದ ಜನರ, ಮುಖ್ಯಮಂತ್ರಿಗಳ ಕ್ಷಮೆ ಯಾಚಿಸುತ್ತೇನೆ ಎಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಕೊರೊನಾ ಮೊದಲನೇ ಹಾಗೂ ಎರಡನೇ ಅಲೆ ವೇಳೆ ಮಾಧ್ಯಮದವರು, ಸಾರ್ವಜನಿಕರು, ಬಿಜೆಪಿ ಪಕ್ಷ ಮೆಚ್ಚುವಂತೆ ನಾನು ಕೆಲಸ ಮಾಡಿದ್ದೇನೆ. ಆದರೆ, ಇದೀಗ ಬಲಮುರಿ ಗ್ರಾಮದಲ್ಲಿ ನಡೆದ ಹೋರಿ ಹಬ್ಬದಲ್ಲಿ ಪಾಲ್ಗೊಂಡಿದ್ದು ನನಗೆ ಮುಜುಗರವನ್ನುಂಟುಮಾಡಿದೆ. ಈವರೆಗೆ ಮಾಡಿದ ಒಳ್ಳೆಯ ಕೆಲಸಗಳು ಬಲಮುರಿ ಗ್ರಾಮದ ಘಟನೆಯಿಂದ ಹೊಳೆಯಲ್ಲಿ ಹುಣಸೇಹಣ್ಣು ತೊಳೆದಂತಾಗಿದೆ ಎಂದು ಪ್ರತಿಕ್ರಿಯಿಸಿದರು.

ನಾನು ಕೂಡ ಸರ್ಕಾರದ ಭಾಗವಾಗಿದ್ದೇನೆ. ಕೊರೊನಾ ನಿಯಮಗಳನ್ನು ಪಾಲಿಸಿ ಎಂದು ಹೇಳಬೇಕಾದ ನಾನೇ ಇದೀಗ ಕೊರೊನಾ ನಿಯಮಗಳನ್ನು ಗಾಳಿಗೆ ತೂರಿದ್ದು, ನನ್ನಿಂದ ತಪ್ಪಾಗಿದೆ. ಮೇಕೆದಾಟು ಯೋಜನೆಗಾಗಿ ಕಾಂಗ್ರೆಸ್ ನಡೆಸುತ್ತಿರುವ ಪಾದಯಾತ್ರೆಯ ಬಗ್ಗೆ ನಾನೇ ಟೀಕೆ ಮಾಡಿ, ಇದೀಗ ನಾನೇ ಕೊರೊನಾ ನಿಯಮಗಳನ್ನು ಉಲ್ಲಂಘನೆ ಮಾಡಿರುವುದು ನನಗೆ ನೈತಿಕತೆ ಇಲ್ಲದಂತಾಗಿದೆ ಎಂದರು.

# ಜಿಲ್ಲೆಯಲ್ಲಿ 22 ಪಾಸಿಟಿವ್

ದಾವಣಗೆರೆ, ಜ.10- ಜಿಲ್ಲೆಯಲ್ಲಿ ಸೋಮ ವಾರ 22 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟ ಬಗ್ಗೆ ವರದಿಯಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 94ಕ್ಕೆ ಏರಿಕೆಯಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 15, ಹರಿಹರ 1, ಜಗಳೂರು 5 ಹಾಗೂ ಹೊರ ಜಿಲ್ಲೆಯ ಒಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ.

# ಹರಿಹರದಲ್ಲಿ ಇಂದು ರಾಜ್ಯಮಟ್ಟದ ಹೊನಲು ಬೆಳಕಿನ ಕುಸ್ತಿ ಪಂದ್ಯಾವಳಿ



ಹರಿಹರ, ಜ.10- ಶ್ರೀ ಹರಿಹರ ಕುಸ್ತಿ ಜೀರ್ಣೋದ್ಧಾರ ಸಮಿತಿ ಮತ್ತು ಕರ್ನಾಟಕ ರಾಜ್ಯ ಕುಸ್ತಿ ಸಂಘದ ಸಂಯುಕ್ತಾಶ್ರಯದಲ್ಲಿ ನಡೆಯುತ್ತಿರುವ ರಾಜ್ಯಮಟ್ಟದ ಹೊನಲು ಬೆಳಕಿನ ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸಿ, ಗೆಲುವು ಸಾಧಿಸಿದವರಿಗೆ ಉದ್ಯೋಗ ಹಾಗೂ ಶಿಕ್ಷಣದಲ್ಲಿ ಅವಕಾಶಗಳು ಸಿಗಲಿವೆ ಎಂದು ಸಮಿತಿಯ ಗೌರವಾಧ್ಯಕ್ಷ ಹಾಗೂ ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್ ತಿಳಿಸಿದ್ದಾರೆ.

ನಗರದ ಗಾಂಧಿ ಮೈದಾನದಲ್ಲಿ ಕನಕದಾಸರ 534ನೇ ಜಯಂತ್ಯೋತ್ಸವದ ಅಂಗವಾಗಿ ನಾಳೆ ದಿನಾಂಕ 11 ಮತ್ತು 12 ರಂದ ನಡೆಯಲ್ಲಿರುವ ರಾಜ್ಯಮಟ್ಟದ ಹೊನಲು ಬೆಳಕಿನ ಕುಸ್ತಿ ಪಂದ್ಯಾವಳಿ ಕುರಿತು ಇಂದು ಸಂಜೆ ಕರೆದಿದ್ದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಈ ಹೊನಲು ಬೆಳಕಿನ ಕುಸ್ತಿ ಸತತವಾಗಿ ಐದು ವರ್ಷಗಳ ಕಾಲ ಮುಂದುವರೆಸಲಾಗುವುದು ಎಂದು ಮಾಹಿತಿ ನೀಡಿದರು.

ಈಗಾಗಲೇ ರಾಜ್ಯದ ವಿವಿಧ ಜಿಲ್ಲೆಗಳಿಂದ ಹಾಗೂ ಇತರೆ ರಾಜ್ಯಗಳಿಂದ 360ಕ್ಕೂ ಅಧಿಕ ಕುಸ್ತಿ ಪಟುಗಳು ಆಗಮಿಸಿದ್ದಾರೆ. ಈ ಪಂದ್ಯಾವಳಿಗಳಿಂದ ಯುವಕ - ಯುವತಿಯರ ಭವಿಷ್ಯ ರೂಪುಗೊಳ್ಳತ್ತದೆ ಎಂದು ಹೇಳಿದರು.

ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ಪೀಠಾಧ್ಯಕ್ಷರಾದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮಂಗಳವಾರ ಬೆಳಿಗ್ಗೆ 8 ಗಂಟೆಗೆ ಶ್ರೀ ಹರಿಹರೇಶ್ವರ ದೇವಸ್ಥಾನದಿಂದ ಕ್ರೀಡಾ ಜ್ಯೋತಿಯನ್ನು ಮುಖ್ಯ ರಸ್ತೆಯ ಮೂಲಕ ಮೆರವಣಿಗೆ ಮಾಡುತ್ತಾ ಗಾಂಧಿ ಮೈದಾನಕ್ಕೆ ತಂದು 9 ಗಂಟೆಗೆ ಕುಸ್ತಿ ಪಂದ್ಯಾವಳಿಗೆ ಚಾಲನೆ ನೀಡಲಾಗುವುದೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಸುರೇಶ್ ಚಂದಾಪುರ್, ಚೂರಿ ಜಗದೀಶ್, ಸ್ಟಾರ್ ಈರಣ್ಣ, ವೈ.ಶಿವಾನಂದ, ರೇವಣಪ್ಪ ದ್ಯಾವನಾಯ್ಕರ್, ಮಾರುತಿ ಪೂಜಾರ್, ವಿಜಯ್ ರಟ್ಟಿಹಳ್ಳಿ, ಅಣ್ಣಪ್ಪ ಶಾವಿ, ಕೆ.ಜಿ.ಸಿದ್ದೇಶ್, ಮಹೇಶ್ ಪೂಜಾರ್ ಮತ್ತು ಮುಖಂಡರಾದ ಜಿಗಳಿ ಆನಂದಪ್ಪ, ಮಲೇಬೆನ್ನೂರಿನ ಕೆ.ಜಿ.ರಂಗನಾಥ್ ಹಾಜರಿದ್ದರು.

# ಇಂದು ಬೂಸ್ಟರ್ ಡೋಸ್ ಲಸಿಕೆ

ಕೋವಿಶೀಲ್ಡ್ ಬೂಸ್ಟರ್ ಡೋಸ್ ಲಸಿಕೆ ಹಾಕುವ ಕಾರ್ಯಕ್ರಮವು ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿನ ಸ್ವಿಮ್ಮಿಂಗ್ ಪೂಲ್ ಆವರಣದಲ್ಲಿ ಇಂದು ಬೆಳಿಗ್ಗೆ 10 ರಿಂದ ನಡೆಯಲಿದೆ.

ಎಸ್ಸೆಸ್ ಹಾಗೂ ಎಸ್ಸೆಸ್ಸೆಂ ಅವರುಗಳ ಸಹಯೋಗದೊಂ ದಿಗೆ ಈ ಶಿಬಿರ ಏರ್ಪಾಡಾಗಿದೆ ಎಂದು ಪಾಲಿಕೆಯ 31ನೇ ವಾರ್ಡಿನ ಸದಸ್ಯ ಮಂಜುನಾಥ ಗಡಿಗುಡಾಳ್ ತಿಳಿಸಿದ್ದಾರೆ. 60 ವರ್ಷ ಮೇಲ್ಪಟ್ಟವರಿಗೆ ಅಥವಾ ಈಗಾಗಲೇ 2ನೇ ಡೋಸ್ ಲಸಿಕೆಯನ್ನು ಪಡೆದು 9 ತಿಂಗಳು ಕಳೆದಿರುವವರಿಗೆ ಈ ಲಸಿಕೆ ನೀಡಲಾಗುತ್ತದೆ ಎಂದು ಹೇಳಿದ್ದಾರೆ.

# ವಿದ್ಯುತ್ ವ್ಯತ್ಯಯ

ಎಸ್.ಓ.ಜಿ ಕಾಲೋನಿ ಎ, ಬಿ ಮತ್ತು ಸಿ ಬ್ಲಾಕ್, ಬುದ್ಧ, ಬಸವ, ಭೀಮ ನಗರ, ಕರ್ನಾಟಕ ಬೀಜ ನಿಗಮ, ರಾಮನಗರ, ಇಂಡಸ್ಟ್ರೀಯಲ್ ಏರಿಯಾ ಮತ್ತು ಸುತ್ತ ಮುತ್ತಲ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಾಯಂಕಾಲ 4 ಗಂಟೆಯವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

# ಕನ್ನಡ ಪರ ಹೋರಾಟ, ಜನಪರ ದಿಟ್ಟ ನಿಲುವಿನ ಚಂಪಾ



## ಜಿಲ್ಲಾ ಕಸಾಪದಿಂದ ಅಗಲಿದ ಹಿರಿಯ ಸಾಹಿತಿಗೆ ಶ್ರದ್ಧಾಂಜಲಿ

ದಾವಣಗೆರೆ, ಜ. 10 - ಅಗಲಿದ ಹಿರಿಯ ಸಾಹಿತಿ ಚಂದ್ರಶೇಖರ ಪಾಟೀಲ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಹಾಗೂ ತಾಲ್ಲೂಕು ಘಟಕಗಳ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಗರದ ಕುವೆಂಪು ಕನ್ನಡ ಭವನದಲ್ಲಿ ಇಂದು ಸಂಜೆ ಆಯೋಜಿಸಲಾಗಿದ್ದ ಸಂತಾಪ ಸಭೆಯಲ್ಲಿ ಚಂಪಾರ ಸಾಹಿತ್ಯ ಸೇವೆ, ಕನ್ನಡ ಪರ ಹಾಗೂ ಜನಪರ ದಿಟ್ಟ ನಿಲುವಿನ ಹೋರಾಟಕ್ಕಾಗಿ ನುಡಿ ನಮನ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಜಾನಪದ ತಜ್ಞ ಡಾ. ಎಂ.ಜಿ. ಈಶ್ವರಪ್ಪ, ಚಂಪಾ ವೃತ್ತಿಯಲ್ಲಿ ಅಧ್ಯಾಪಕರಾಗಿದ್ದರೂ ನಾಡು - ನುಡಿ ಚಳುವಳಿಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಜೈಲಿಗೆ ಸೇರುವ ಪರಿಸ್ಥಿತಿ ಬಂದರೂ ಹಿಂಜರಿಯುತ್ತಿರಲಿಲ್ಲ ಎಂದರು.

ಸಾಹಿತಿ ಮಲ್ಲಿಕಾರ್ಜುನ ಕಲಮರಹಳ್ಳಿ ಮಾತನಾಡಿ, ಚಂಪಾ ಅವರು ಕನ್ನಡ ಸಾಕ್ಷಿ ಪ್ರಜ್ಞೆಗೆ ಮತ್ತೊಂದು ಹೆಸರಾಗಿದ್ದರು. ಸಾಹಿತ್ಯ ಕೃಷಿ ಜೊತೆ ಕನ್ನಡ ಹೋರಾಟದ ಮುಂಚೂಣಿಯಲ್ಲಿದ್ದರು. ಅವರು ಪ್ರಕಟಿಸುತ್ತಿದ್ದ ಸಂಕ್ರಮಣ ಸಂಚಿಕೆಗಳ ಸಾಹಿತ್ಯ ಅಧ್ಯಾಪಕರು ಓದಲೇಬೇಕಾದ ಪ್ರಕಟಣೆಗಳಾಗಿದ್ದವು ಎಂದರು.

ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ. ಮಂಜುನಾಥ ಕುರ್ಕಿ ಮಾತನಾಡಿ, ಚಂಪಾ ಅವರು ವೈಚಾರಿಕ ಪ್ರಜ್ಞೆ ಹಾಗೂ ಸಮಗ್ರ ದೃಷ್ಟಿಕೋನ ಹೊಂದಿದ್ದರು. ಮಾತುಗಳು ಮೊನಚಾದರೂ, ನೊಂದವರ ಪರ ಎಚ್ಚರಿಕೆಯ ದನಿಯಾಗಿದ್ದರು. ನಾಡು - ನುಡಿಗಳ ಸಂರಕ್ಷಣೆ ಹಾಗೂ ಸಂವರ್ಧನೆಗೆ ಸದಾ ಬದ್ಧವಾಗಿದ್ದರು ಎಂದರು.

ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ ಮಾತನಾಡಿ, 70ರ ದಶಕದಿಂದಲೂ ಚಂಪಾ ದಾವಣಗೆರೆ ಹಾಗೂ ಹರಿಹರಗಳ ನಂಟು ಹೊಂದಿದ್ದರು. ಪ್ರತಿಮಾ ಸಭಾ ಹಾಗೂ ಚಿಂತಕರಾಗಿದ್ದ ಪ್ರೊ. ಎಸ್.ಹೆಚ್. ಪಟೇಲರ ಒಡನಾಟ ಹೊಂದಿದ್ದರು. ಅವರು ಅಸಂಗತ ನಾಟಕಗಳ ಮೂಲಕವೇ ಸಂಗತವನ್ನು ಹೇಳುತ್ತಿದ್ದರು ಎಂದು ತಿಳಿಸಿದರು.

ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ಮಾತನಾಡಿ, ಎಲ್ಲ ಜಾತಿಗಳಲ್ಲಿರುವ ಪುರೋಹಿತಶಾಹಿಗಳನ್ನು ಚಂಪಾ ಟೀಕಿಸುತ್ತಿದ್ದರು. ಚಂಪಾ ಅವರ ಬದುಕು - ಬರಹ ಒಂದೇ ಆಗಿತ್ತು. ಅವರ ಮಾತುಗಳಲ್ಲಿ ವ್ಯಂಗ್ಯ - ಮೊನಚು ಇದ್ದರೂ, ಅದು ನೋಯಿಸುವ ಉದ್ದೇಶದ್ದಲ್ಲ ಎಂದರು.

ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, ಚಂಪಾ ಅವರು ಸಮಾಜ ಪರಿವರ್ತನೆಯ ಆಶಯದಿಂದ ಮೊನಚು - ಹರಿತ ಮಾತುಗಳನ್ನಾಡುತ್ತಿದ್ದರು. ಸಂಪ್ರದಾಯ ಹಾಗೂ ಮೂಢನಂಬಿಕೆಗಳನ್ನು ಧಿಕ್ಕರಿಸಿದ್ದರು. ತಮ್ಮ ಬರಹಗಳಿಂದ ನಾಡನ್ನು ತಿದ್ದುವ ಕೆಲಸ ಮಾಡಿದರು ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಕಸಾಪ ಅಧ್ಯಕ್ಷರಾದ ಎ.ಜಿ. ಸುಮತಿ ಜಯಪ್ಪ, ಬಿ.ಎ. ಮುರಿಗೆಯ್ಯ ಕುರ್ಕಿ, ಎಂ. ಷಡಕ್ಷರಪ್ಪ, ತಾರೇಶ್ ಅಣಬೇರು, ಎ. ಕೊಟ್ರಪ್ಪ ಕಿತ್ತೂರು, ದಾಗಿನಕಟ್ಟೆ ಪರಮೇಶ್ವರಪ್ಪ, ಸಿ.ಕೆ. ರುದ್ರಾಕ್ಷಿ ಬಾಯಿ ಮತ್ತಿತರರು ಉಪಸ್ಥಿತರಿದ್ದರು.

# ಪೈಪೋಟಿಯ ನಡುವೆಯೂ ಪ್ರಗತಿಯನ್ನು ಕಾಯ್ದುಕೊಂಡ ಮುರುಘರಾಜೇಂದ್ರ ಬ್ಯಾಂಕ್



ಬ್ಯಾಂಕಿನ 47ನೇ ವಾರ್ಷಿಕ ಮಹಾಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷ ಎಂ. ಜಯಕುಮಾರ್ ಸಂತಸ

ದಾವಣಗೆರೆ,ಜ.10- ಕೊರೊನಾ ಅಲೆ, ಭಾರತೀಯ ರಿಸರ್ವ್ ಬ್ಯಾಂಕಿನ ಕಟ್ಟು ನಿಟ್ಟಿನ ನಿಬಂಧನೆಗಳು, ಇತರೆ ಬ್ಯಾಂಕುಗಳ ಪೈಪೋಟಿಗಳ ನಡುವೆಯೂ ನಗರದ ಶ್ರೀ ಮುರುಘರಾಜೇಂದ್ರ ಕೋ-ಆಪರೇಟಿವ್ ಬ್ಯಾಂಕ್ ಪ್ರಗತಿಯನ್ನು ಕಾಯ್ದುಕೊಂಡು ಹೋಗುವಲ್ಲಿ ಯಶಸ್ವಿಯಾಗಿದೆ ಎಂದು ಬ್ಯಾಂಕಿನ ಆಡಳಿತ ಮಂಡಳಿ ಅಧ್ಯಕ್ಷ ಎಂ. ಜಯಕುಮಾರ್ ಸಂತಸ ವ್ಯಕ್ತಪಡಿಸಿದರು.

ವಿಡಿಯೋ ಕಾನ್ಫರೆನ್ಸ್ ಮೂಲಕ ಕಳೆದ ವಾರ ನಡೆದ ಶ್ರೀ ಮುರುಘರಾಜೇಂದ್ರ ಕೋ-ಆಪರೇಟಿವ್ ಬ್ಯಾಂಕಿನ 2020-21ನೇ ಸಾಲಿನ 47ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಗತಿಯ ಸಂಕೇತವಾಗಿ ಈ ಬ್ಯಾಂಕ್ 'ಎ' ವರ್ಗದಲ್ಲಿ ಮುನ್ನಡೆದಿದ್ದು, ಇದು ಗ್ರಾಹಕರು ಮತ್ತು ಷೇರುದಾರರು ಹಾಗೂ ಠೇವಣಿದಾರರು ಬ್ಯಾಂಕಿನ ಮೇಲೆ ಇಟ್ಟಿರುವ ನಂಬಿಕೆ - ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ ಎಂದು ಅವರು ಹೇಳಿದರು.

2021, ಮಾರ್ಚ್ ಅಂತ್ಯಕ್ಕೆ 1.27 ಕೋಟಿ ರೂ. ಷೇರು ಬಂಡವಾಳ, 1.32 ಕೋಟಿ ರೂ. ಕಾಯ್ದಿಟ್ಟ ನಿಧಿ, 60 ಲಕ್ಷ ರೂ. ಇತರೆ ನಿಧಿಗಳಾಗಿದ್ದು, 29 ಕೋಟಿ ರೂ. ಠೇವಣಿ ಹೊಂದಿದೆ. 32 ಕೋಟಿ ರೂ. ದುಡಿಯುವ ಬಂಡವಾಳವಾಗಿದ್ದು, ಸದಸ್ಯರಿಗೆ ಅವರ ಅಗತ್ಯತೆಗಳಿಗನುಗುಣವಾಗಿ 16 ಕೋಟಿ ರೂ. ಸಾಲ ಸೌಲಭ್ಯಗಳನ್ನು ಒದಗಿಸಲಾಗಿದೆ ಎಂದು ಅವರು ತಿಳಿಸಿದರು.

16 ಲಕ್ಷ ರೂ. ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ. 8 ರಂತೆ ಭಾಜ್ಯಾಂಶ ನೀಡಲು ಬ್ಯಾಂಕಿನ ಆಡಳಿತ ಮಂಡಳಿ ತೀರ್ಮಾನ ಕೈಗೊಂಡಿದೆ ಎಂದು ಷೇರುದಾರರ ಚಪ್ಪಾಳೆಗಳ ಮಧ್ಯೆ ಜಯಕುಮಾರ್ ಘೋಷಿಸುವುದರ ಮೂಲಕ ಬ್ಯಾಂಕಿನ ಸಂಕ್ಷಿಪ್ತ ಪ್ರಗತಿಯ ಪಕ್ಷಿನೋಟವನ್ನು ಸಭೆಯ ಮುಂದೆ ಬಿಡಿಸಿಟ್ಟರು.

ಗ್ರಾಹಕರಿಗೆ ಶೀಘ್ರ ಸೇವೆ ಸಲ್ಲಿಸುವ ನಿಟ್ಟಿನಲ್ಲಿ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಷೇರುದಾರರ ಹಿತವನ್ನು ಕಾಪಾಡುವ ದಿಸೆಯಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಠೇವಣಿದಾರರ ನಂಬಿಕೆ ಮತ್ತು ವಿಶ್ವಾಸವನ್ನು ಗಳಿಸುವ ಸಂಬಂಧ ಮುಂಜಾಗ್ರತೆ ವಹಿಸಲಾಗಿದೆ. ಸಿಬ್ಬಂದಿ ವರ್ಗದವರಿಗೂ ಅಗತ್ಯ ಸೌಲಭ್ಯಗಳನ್ನು ನೀಡಲಾಗಿದೆ. ಜೊತೆಗೆ, ಅತ್ಯಾಧುನಿಕ ಸೌಲಭ್ಯಗಳನ್ನೊಳಗೊಂಡಂತೆ ನಗರದ ಮಧ್ಯ ಭಾಗದಲ್ಲಿ ಸ್ವಂತ ಕಟ್ಟಡದಲ್ಲಿ ಬ್ಯಾಂಕ್ ಕಾರ್ಯ ನಿರ್ವಹಿಸುತ್ತಿದೆ ಎಂದು ಅವರು ವಿವರಿಸಿದರು.

ಬ್ಯಾಂಕಿನ ಸೇವೆಯನ್ನು ಜನರ ಹತ್ತಿರಕ್ಕೆ ಕೊಂಡೊಯ್ಯುವ ಸದುದ್ದೇಶದಿಂದ ನಗರದ ವಿವಿಧ ಬಡಾವಣೆಗಳಲ್ಲಿ ಶಾಖೆಗಳನ್ನು ತೆರೆಯುವ ಬಗ್ಗೆ ಆಡಳಿತ ಮಂಡಳಿ ಚಿಂತನೆ ನಡೆಸಿದ್ದು, ಈ ಸಂಬಂಧ ಈಗಾಗಲೇ ಪ್ರಾಥಮಿಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳಿದ ಅವರು, ಗ್ರಾಹಕರು, ಠೇವಣಿದಾರರು ಮತ್ತು ಸದಸ್ಯರಿಗೆ ಮತ್ತಷ್ಟು ಸೌಲಭ್ಯ ಹಾಗೂ ಶೀಘ್ರ ಸೇವೆ ಸಲ್ಲಿಸುವ ಉದ್ದೇಶದಿಂದ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲಾಗುವುದು ಎಂದು ತಿಳಿಸಿದರು.

ಬ್ಯಾಂಕಿನ ಉಪಾಧ್ಯಕ್ಷ ಎಸ್. ಓಂಕಾರಪ್ಪ ಮಾತನಾಡಿ, ಈ ಬ್ಯಾಂಕಿನ ಪ್ರಗತಿಗೆ ಗ್ರಾಹಕರು ಮತ್ತು ಠೇವಣಿದಾರರ ನಂಬಿಕೆ - ವಿಶ್ವಾಸ, ಷೇರುದಾರರ ಮತ್ತು ಹಿತೈಷಿಗಳ ಸಹಕಾರ - ಪ್ರೋತ್ಸಾಹ, ಸಿಬ್ಬಂದಿ ವರ್ಗದವರ ಶ್ರಮ, ಆಡಳಿತ ಮಂಡಳಿ ಸದಸ್ಯರ ಇಚ್ಛಾಶಕ್ತಿ ಕಾರಣ ಎಂದು ಪ್ರತಿಯೊಬ್ಬರನ್ನೂ ಸ್ಮರಿಸಿ ಕೃತಜ್ಞತೆ ಸಲ್ಲಿಸಿದರು.

ಕಳೆದ ಸಾಲಿನ ಮಹಾಸಭೆಯ ನಡುವಳಿಕೆಗಳನ್ನು ನಿರ್ದೇಶಕ ಎನ್. ನೀಲಗಿರಿಯಪ್ಪ ಓದಿದರೆ, ಆಡಳಿತ ಮಂಡಳಿ ರೂಪಿಸಿದ ಕಾರ್ಯ ಚಟುವಟಿಕೆಗಳನ್ನು ನಿರ್ದೇಶಕ ಎಂ.ಎಸ್. ಶಿವಯೋಗಿ ಅನುಮೋದಿಸಿದರು. ಮುಂಗಡ ಪತ್ರ ಮಂಜೂರು ಮಾಡುವ ವಿಷಯವನ್ನು ನಿರ್ದೇಶಕ ಮಹೇಶ್ ಜಿ. ಶೆಂಡಗಿ ಪ್ರಸ್ತಾಪಿಸಿದರು. ಬ್ಯಾಂಕಿನ ಉಪ ನಿಯಮಗಳ ತಿದ್ದುಪಡಿಗೆ ಒಪ್ಪಿಗೆ ನೀಡುವ ವಿಚಾರವನ್ನು ನಿರ್ದೇಶಕ ಹೆಚ್.ವಿ. ಮಂಜುನಾಥ ಸ್ವಾಮಿ ಸಭೆಯ ಗಮನಕ್ಕೆ ತಂದರು.

ಹೊರಗಿನಿಂದ ತರಬಹುದಾದ ಸಾಲದ ಮಿತಿಯನ್ನು ನಿಗದಿಪಡಿಸುವ ಮಾಹಿತಿಯನ್ನು ನಿರ್ದೇಶಕ ಕೆ.ಆರ್. ಪರಮೇಶ್ವರಪ್ಪ ನೀಡಿದರು. ಸನ್ನದು ಲೆಕ್ಕ ಪರಿಶೋಧಕರ ನೇಮಕ ಮಾಡಿಕೊಳ್ಳುವ ಬಗ್ಗೆ ಶ್ರೀಮತಿ ಜ್ಯೋತಿ ಆರ್. ಜಂಬಗಿ ಅವರು ಸಭೆಗೆ ತಿಳಿಸಿದರು. ಸದಸ್ಯರ ಮಾಹಿತಿಯನ್ನು ನಿರ್ದೇಶಕ ಕಣಕುಪ್ಪಿ ಮುರುಗೇಶಪ್ಪ ವಿವರಿಸಿದರು.

ನಿರ್ದೇಶಕರು ಮತ್ತು ಅವರ ಸಂಬಂಧಿಕರು ಸಾಲ ಮಾಡಿದ್ದರೆ ಅದನ್ನು ಪರಿಶೀಲಿಸುವ ವಿಚಾರವನ್ನು ನಿರ್ದೇಶಕರಾದ ಶ್ರೀಮತಿ ಬಿ.ವಿ. ಮಂಗಳಾ ಬೂಸ್ನೂರು ಮಂಡಿಸಿದರು. ಸಿಬ್ಬಂದಿ ವರ್ಗದವರ ವೇತನದ ವಿವರವನ್ನು ನಿರ್ದೇಶಕ ಕೆ.ಜಿ.ಚನ್ನಬಸಪ್ಪ ಸಭೆಗೆ ನೀಡಿದರು.

ನಿರ್ದೇಶಕರೂ ಆಗಿರುವ ಶಾಸಕ ಎಸ್. ಎ. ರಾಮಚಂದ್ರ, ನಿರ್ದೇಶಕರುಗಳಾದ ಸ್ವಾಗಿ ಆರ್. ಶಿವಯೋಗಿ, ಕೆ.ಎಸ್. ಸತೀಶ್, ವಿಶೇಷ ಆಹ್ವಾನಿತರಾದ ಸಿ. ಮಂಜುನಾಥ್ ಮತ್ತು ಇತರರು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಎಸ್.ಎಂ. ತೋಟದ ಅವರ ಪ್ರಾರ್ಥನೆಯ ನಂತರ ವ್ಯವಸ್ಥಾಪಕ ಎಸ್.ಪಿ. ವೀರಭದ್ರಪ್ಪ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

# ಕೊರೊನಾ ಸೋಂಕುಗಳ ನಿರ್ಲಕ್ಷ್ಯ ಬೇಡ

## ಜಗಳೂರು: ಮುನ್ನೆಚ್ಚರಿಕೆ ಲಸಿಕಾ ಅಭಿಯಾನಕ್ಕೆ ಎಸ್‌ವಿಆರ್ ಚಾಲನೆ



ಜಗಳೂರು,ಜ.10- ಸಾರ್ವಜನಿಕರು ಕೊರೊನಾ ಮತ್ತು ಓಮಿಕ್ರಾನ್ ಸೋಂಕುಗಳ ಬಗ್ಗೆ ನಿರ್ಲಕ್ಷ್ಯ ವಹಿಸದೇ ಲಸಿಕೆ ಪಡೆದು ಜಾಗೃತರಾಗಿರಿ ಎಂದು ಶಾಸಕ ಎಸ್.ವಿ. ರಾಮಚಂದ್ರ ಹೇಳಿದರು. ಪಟ್ಟಣದ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಪಟ್ಟಣ ಪಂಚಾಯಿತಿ, ತಾಲ್ಲೂಕು ಆರೋಗ್ಯ ಇಲಾಖೆ, ಸಾರ್ವಜನಿಕ ಆಸ್ಪತ್ರೆ ಇವರುಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಪೌರ ಕಾರ್ಮಿಕರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಮುನ್ನೆಚ್ಚರಿಕೆ (ಬೂಸ್ಟರ್ ಡೋಸ್) ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರ ಜನಪರ ಕಾಳಜಿಯಿಂದ 15 ರಿಂದ 18 ವರ್ಷದವರೆಗಿನ ಮಕ್ಕಳಿಗೆ ಹಾಗೂ ವಯೋವೃದ್ದರಿಗೆ ಕೋವಿಡ್ ಲಸಿಕೆಯನ್ನು ಹಂತ ಹಂತವಾಗಿ ಹಾಕಿಸಲು ಮುಂದಾಗಿದ್ದು, ಪೌರ ಕಾರ್ಮಿಕರಿಗೆ ಮತ್ತು ಸಿಬ್ಬಂದಿಗಳಿಗೆ ಬೂಸ್ಟರ್ ಡೋಸ್ ಲಸಿಕೆಗೆ ಇಂದು ದೇಶವ್ಯಾಪಿ ಚಾಲನೆ ನೀಡಲಾಗಿದೆ ಎಂದರು.

**57 ಕೆರೆ ತುಂಬಿಸುವ ಯೋಜನೆ :** ಸಿರಿಗೆರೆ ಶ್ರೀಗಳ ಆಶೀರ್ವಾದದಿಂದ ಸಾಕಾರಗೊಂಡಿರುವ ಮಹತ್ತರ 57 ಕೆರೆ ತುಂಬಿಸುವ ಯೋಜನೆಯ ಪೈಪ್‌ಲೈನ್ ಕಾಮಗಾರಿಗೆ ನೆರೆಹೊರೆಯ ರೈತರಿಂದ ಪರಿಹಾರಕ್ಕಾಗಿ ತಡೆಯೊಡ್ಡಿ ಹೈಕೋರ್ಟ್ ಮೊರೆಹೋಗಿದ್ದರು. ಕಳೆದ 10 ದಿನಗಳಿಂದ ಬೇಸರ ಉಂಟುಮಾಡಿತ್ತು. ಆದರೆ ಇಂದು ಕೆಲ ನಿಬಂಧನೆಗೊಳಪಟ್ಟು ಅರ್ಜಿ ತಹಶಿಲ್ದಾರ್ ಕೋರ್ಟ್ ಗೆ ವರ್ಗಾವಣೆಗೊಂಡಿರುವ ಮಾಹಿತಿ ತಿಳಿದು ಬಂದಿದ್ದು, ಸಮಸ್ಯೆ ಶೀಘ್ರದಲ್ಲಿ ಪರಿಹಾರವಾಗಿ ಅಡೆತಡೆಯಿಲ್ಲದೆ ತಾಲ್ಲೂಕಿನ ಕೆರೆಗಳಿಗೆ ನೀರು ಹರಿಯುವ ಭರವಸೆ ಇದೆ ಎಂದು ತಿಳಿಸಿದರು.

ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ನಾಗರಾಜ್ ಮಾತನಾಡಿ, ತಾಲೂಕಿನಲ್ಲಿ ಸಿಬ್ಬಂದಿಗಳು ಹಾಗೂ ಪೌರಕಾರ್ಮಿಕರನ್ನೊಳಗೊಂಡು 1875 ಜನ ಸೇವಾನಿರತರಿಗೆ ಮುನ್ನೆಚ್ಚರಿಕೆ ಲಸಿಕೆ ಹಾಕಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಸಂತೋಷ್ ಕುಮಾರ್, ಡಾ.ಮಲ್ಲಪ್ಪ, ಪ.ಪಂ ಅಧ್ಯಕ್ಷ ಎಸ್. ಸಿದ್ದಪ್ಪ, ಉಪಾಧ್ಯಕ್ಷೆ ಮಂಜಮ್ಮ, ಸದಸ್ಯರಾದ ದೇವರಾಜ್, ಪಾಪಲಿಂಗಪ್ಪ, ಪ.ಪಂ ನಾಮನಿರ್ದೇಶಿತ ಸದಸ್ಯರಾದ ಬಿ.ಪಿ.ಸುಭಾನ್, ರುದ್ರಮುನಿ, ಆರೋಗ್ಯ ನಿರೀಕ್ಷಕ ಕಿಫಾಯತ್ , ಕಂದಾಯ ನಿರೀಕ್ಷಕ ಸಂತೋಷ. ಶ್ರೀಮತಿ ಪದ್ಮಾ ಮುಂತಾದವರು ಭಾಗವಹಿಸಿದ್ದರು.

# ಪಾದಯಾತ್ರೆಗೆ ಬಾರದ ನಾಯಕರು

ಬೆಂಗಳೂರು, ಜ. 9 - ಕಾಂಗ್ರೆಸ್ ಮೇಕೆದಾಟು ಪಾದಯಾತ್ರೆ ಡಿ.ಕೆ. ಶಿವಕುಮಾರ್ ಪಾದಯಾತ್ರೆಯಾಗಿ ಪರಿವರ್ತನೆಗೊಂಡಿದೆ. ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಪಾದಯಾತ್ರೆಯಿಂದ ಸರಿದ ಬೆನ್ನಲ್ಲೇ ಪಕ್ಷದ ಮುಂಚೂಣಿ ನಾಯಕರು ಎರಡನೇ ದಿನದ ಯಾತ್ರೆಯಲ್ಲಿ ಕಾಣಿಸಿಕೊಂಡಿಲ್ಲ.

ಕನಕಪುರದ ಕಾವೇರಿ ಸಂಗಮದಿಂದ ಯಾತ್ರೆಗೆ ನಿನ್ನೆ ಚಾಲನೆ ನೀಡಿದ ಸಂದರ್ಭದಲ್ಲಿ ರಾಜ್ಯಸಭೆ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪ ಮೊಯಿಲಿ, ಸಿದ್ದರಾ ಮಯ್ಯ ಸೇರಿದಂತೆ ಎಲ್ಲಾ ನಾಯಕ ಉಪಸ್ಥಿತರಿದ್ದರು.

ಅಷ್ಟೇ ಅಲ್ಲ, ಕೆಲವರು ಪಾದಯಾತ್ರೆಯಲ್ಲೂ ಪಾಲ್ಗೊಂಡಿದ್ದರು. ಆದರೆ ಇಂದು ಶಿವಕುಮಾರ್, ಸಹೋದರ ಸಂಸದ ಸುರೇಶ್ ಜೊತೆಗೂಡಿ ದೊಡ್ಡಾಲಹಳ್ಳಿಯಿಂದ ಕನಕಪುರದ ಕಡೆಗೆ ಹೆಜ್ಜೆ ಇಟ್ಟರು. ಇಂದು ಯಾವುದೇ ರಾಜ್ಯ ನಾಯಕರ ಸಹಕಾರವೂ ಅವರಿಗಿರಲಿಲ್ಲ. ಕೋವಿಡ್ ನಿಯಮಾವಳಿ ಮೀರಿ ಕಾರ್ಯಕರ್ತರು ಪಾದಯಾತ್ರೆಯಲ್ಲಿ ನಡೆದುಕೊಳ್ಳುತ್ತಿರುವುದು, ನಾಯಕರ ನಿದ್ದೆಗೆಡಿಸಿದೆ.

**ಡಿಕೆಶಿ ಪಾದಯಾತ್ರೆ ಆದ ಕಾಂಗ್ರೆಸ್‌ನ ಮೇಕೆದಾಟು ಹೋರಾಟ**

ಪಾದಯಾತ್ರೆಯಲ್ಲಿ ಪಾಲ್ಗೊಳ್ಳುತ್ತಿರುವ ಬಹುತೇಕ ಕಾರ್ಯಕರ್ತರು ಶಿವಕುಮಾರ್ ಬೆಂಬಲಿಗರೇ ಆಗಿದ್ದಾರೆ. ಕಾರ್ಯಕರ್ತರು ತಮ್ಮ ನಾಯಕನ ದೃಷ್ಟಿಗೆ ಬೀಳುವ ಉದ್ದೇಶದಿಂದ ನಿಯಮ ಮೀರಿ ಗುಂಪು ಗೂಡುತ್ತಿದ್ದಾರೆ. ಎಷ್ಟರ ಮಟ್ಟಿಗೆ ಎಂದರೆ ಶಿವಕುಮಾರ್ ಅವರ ಕಾಲನ್ನೇ ಎರಡು ಬಾರಿ ತುಳಿದಿದ್ದಾರೆ.

ಸರ್ಕಾರ ಎಷ್ಟೇ ಎಚ್ಚರಿಕೆ ನೀಡಿದರೂ, ಪಾದ ಯಾತ್ರೆ ಯಲ್ಲಿ ಪಾಲ್ಗೊಳ್ಳುತ್ತಿರುವವರು ನಿಯಮ ಪಾಲನೆ ಮಾಡು ತ್ತಿಲ್ಲ. ನಾಳೆ ಸಿದ್ದರಾಮಯ್ಯ ಪಾದ ಯಾತ್ರೆಯಲ್ಲಿ ಪಾಲ್ಗೊಳ್ಳು ತ್ತೇನೆ ಎಂದು ಹೇಳಿದ್ದಾರೆ. ಅವರು ಪಾಲ್ಗೊಂಡರೆ, ಕೆಲವು ಮುಖಂಡರು ಅವರ ಜೊತೆ ಹೆಜ್ಜೆ ಇಡಲಿದ್ದಾರೆ. ಶಿವಕುಮಾರ್ ಮಾತ್ರ ಯಾರು ಬರಲಿ, ಬಿಡಲಿ ಪಾದ ಯಾತ್ರೆ ಪೂರ್ಣಗೊಳಿಸುವ ತೀರ್ಮಾನ ಕೈಗೊಂಡಿದ್ದಾರೆ.

ಈ ಯಾತ್ರೆಯಿಂದ ಬೆಂಗಳೂರು ನಗರ ಮತ್ತು ಹಳೇ ಮೈಸೂರು ಭಾಗದಲ್ಲಿ ತಮ್ಮ ವರ್ಚಸ್ಸು ಹೆಚ್ಚಿಸಿಕೊಳ್ಳಬೇಕೆಂಬುದೇ ಅವರ ಉದ್ದೇಶ.

ಅಲ್ಲದೆ, 2023 ರ ವಿಧಾನಸಭಾ ಚುನಾವಣೆಯಲ್ಲಿ ಹಳೇ ಮೈಸೂರು ಭಾಗದಲ್ಲಿ ವಿಧಾನಸಭೆಯಲ್ಲಿ ಪಕ್ಷದ ಬಲವನ್ನು 15ಕ್ಕೂ ಹೆಚ್ಚು ಸ್ಥಾನ ಗಳಿಸಬೇಕೆಂಬುದು ಅವರ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಅವರು ಪಾದಯಾತ್ರೆ ಕೈಗೊಂಡಿದ್ದಾರೆ.

## ಧಾನ್ಯಗಳಲ್ಲಿ ಅರಳಿದ ಪುನೀತ್



ಹೊನ್ನಾಳಿ, ಜ.10- ಹೊನ್ನಾಳಿಯ ನಿವಾಸಿ ಚನ್ನಗಿರಿ ತಾಲ್ಲೂಕಿನ ದಾಗಿನಕಟ್ಟೆ ಸಮೀಪದ ಕಂಚುಗಾರನಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಚಿತ್ರಕಲಾ ಶಿಕ್ಷಕ ಅಶೋಕ್ ಕ್ಯಾತಣ್ಣನವರ್ ಜೋಳ ಮತ್ತು ರಾಗಿ ಧಾನ್ಯಗಳನ್ನು ಬಳಸಿ ರಚಿಸಿರುವ ಕರ್ನಾಟಕ ನಕ್ಷೆಯೊಳಗೆ ನಟ ಪುನೀತ್ ರಾಜ್‌ಕುಮಾರ್ ಅವರ ಚಿತ್ರ ಜನಾಕರ್ಷಣೆಯ ಕೇಂದ್ರ ಬಿಂದುವಾಗಿದೆ.

## ಸಿದ್ದೇಶ್ವರ ಸ್ವಾಮೀಜಿ ಆಸ್ಪತ್ರೆಗೆ ದಾಖಲು



ದಾವಣಗೆರೆ, ಜ.10 - ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿ ಆಯತಪ್ಪಿ ಬಿದ್ದು ಗಾಯಗೊಂಡಿರುವ ಹಿನ್ನೆಲೆಯಲ್ಲಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ಇಂದು ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾದ ನಂತರ ಅವರು ಚಿಕ್ಕೋಡಿಯ ಬಸವನಾಳಗಡ್ಡೆಯಲ್ಲಿ ತಂಗಿದ್ದರು. ಸ್ನಾನ ಗೃಹದಲ್ಲಿ ಆಯತಪ್ಪಿ ಬಿದ್ದು ಗಾಯಗೊಂಡಿದ್ದಾರೆ ಎಂದು ತಿಳಿದು ಬಂದಿದೆ. ನಂತರ ಅವರಿಗೆ ಚಿಕ್ಕೋಡಿಯ ಖಾಸಗಿ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ನೀಡಲಾಗಿದ್ದು, ಹೆಚ್ಚಿನ ಚಿಕಿತ್ಸೆಗೆ ಮಹಾರಾಷ್ಟ್ರಕ್ಕೆ ಕರೆದೊಯ್ಯಲಾಗಿದೆ.

**ಶೀಘ್ರ ಚೇತರಿಸಲಿ :** ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಶ್ರೀ ಸಿದ್ದೇಶ್ವರ ಸ್ವಾಮೀಜಿ ಶೀಘ್ರ ಗುಣಮುಖರಾಗಲಿ ಎಂದು ನಗರದ ಶ್ರೀಗಳ ಭಕ್ತರಾದ ಎನ್. ಜಿ. ಪುಟ್ಟಸ್ವಾಮಿ, ಎಸ್.ಟಿ. ಕುಸುಮಶೆಟ್ರು, ಅಜ್ಜಂಪುರ ಶೆಟ್ರು ರಾಜಣ್ಣ, ಅಜ್ಜಂಪುರ ಶೆಟ್ರು ಷಡಾಕ್ಷರಿ ಮತ್ತಿತರರು ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.

## ಮೇಕೆದಾಟು : ಕಾಂಗ್ರೆಸ್ ನಾಯಕರ ವಿರುದ್ಧ ಎಫ್.ಐ.ಆರ್.


ಬೆಂಗಳೂರು, ಜ. 10 – ಕಾಂಗ್ರೆಸ್ ಪಕ್ಷ ನಡೆಸುತ್ತಿರುವ ಮೇಕೆದಾಟು ಪಾದಯಾತ್ರೆ ಎರಡನೇ ದಿನಕ್ಕೆ ಕಾಲಿಟ್ಟಿರುವಂತೆಯೇ, ಪಕ್ಷದ ಹಿರಿಯ ನಾಯಕರಾದ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಸೇರಿದಂತೆ ಹಲವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಕೊರೊನಾ ನಿಯಮಗಳನ್ನು ಉಲ್ಲಂಘಿಸಿದ ಕಾರಣಕ್ಕಾಗಿ ಸುಮಾರು 30 ಕಾಂಗ್ರೆಸ್ ನಾಯಕರು ಮತ್ತಿತರರ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ.

ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್, ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಬೆಂಗಳೂರು ಗ್ರಾಮಾಂತರ ಸಂಸದ ಡಿ.ಕೆ. ಶಿವಕುಮಾರ್ ವಿರುದ್ಧ ಸಾತನೂರು ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಿಸಲಾಗಿದೆ. ಕಾಂಗ್ರೆಸ್ ನಾಯಕರಾದ ವೀರಪ್ಪ ಮೊಯ್ಲಿ, ಮಲ್ಲಿಕಾರ್ಜುನ ಖರ್ಗೆ, ಡಾ. ಜಿ. ಪರಮೇಶ್ವರ, ಚಿತ್ರನಟರಾದ ದುನಿಯಾ ವಿಜಯ್ ಹಾಗೂ ಸಂಗೀತ ನಿರ್ದೇಶಕ ಸಾಧು ಕೋಕಿಲ ಅವರ ಹೆಸರುಗಳು ಎಫ್.ಐ.ಆರ್.ನಲ್ಲಿವೆ ಎಂದು ಮೂಲಗಳು ತಿಳಿಸಿವೆ.

## ಗ್ರಾಮಾಂತರ ಪ್ರದೇಶಗಳಲ್ಲಿ ಇಂದು ವಿದ್ಯುತ್ ವ್ಯತ್ಯಯ

ಶಾಮನೂರು, ಜೆ.ಎಚ್. ಪಾಟೀಲ್ ನಗರ, ಡಾಲರ್ಸ್ ಕಾಲೋನಿ, ಶಿವ ಪಾರ್ವತಿ ಲೇಔಟ್, ವಾಜಪೇಯಿ ಲೇಔಟ್ ಮತ್ತು ಸಂಭ್ರಮ ಹೋಟೆಲ್ ಹಿಂಭಾಗ, ಹೊಸಕುಂದವಾಡ, ಹಳೇಕುಂದವಾಡ, ಕೆ.ಎಚ್.ಬಿ. ಕಾಲೋನಿ, ಮತ್ತು ರಶ್ಮಿ ಸ್ಕೂಲ್ ಸುತ್ತಮುತ್ತ, ಶಿರಮಗೊಂಡನಹಳ್ಳಿ, ನಾಗನೂರು, ಹೊಸ ಬಿಸಿಲೇರಿ, ಹಳೇ ಬಿಸಿಲೇರಿ, 6ನೇ ಕಲ್ಲು, 7 ನೇ ಕಲ್ಲು ಮತ್ತು ಬನಶಂಕರಿ ಬಡಾವಣೆ 2 ನೇ ಹಂತ, ಜರೀಕಟ್ಟೆ, ಮುದಹದಡಿ, ಬೆಳವನೂರು, ಹೊಸ ಬೆಳವನೂರು, ಬೆಳವನೂರು ಇಂಡಸ್ಟ್ರಿಯಲ್, ತುರ್ಚಘಟ್ಟ, ಪಾಮೇನಹಳ್ಳಿ, ಸಿದ್ದಗಂಗಾ ಬಡಾವಣೆ ಮತ್ತು ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಸಿಎಂ ಬೊಮ್ಮಾಯಿಗೆ ಕೊರೊನಾ



ಬೆಂಗಳೂರು, ಜ. 10 – ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕೊರೊನಾ ಸೋಂಕು ಕಾಣಿಸಿಕೊಂಡಿದೆ. ಸೋಂಕಿನ ನಂತರ ಅವರು ಮನೆಯಲ್ಲೇ ಪ್ರತ್ಯೇಕವಾಗಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಅವರು, ಲಘು ಲಕ್ಷಣಗಳು ಕಂಡು ಬಂದಿವೆ. ನನ್ನ ಆರೋಗ್ಯ ಚೆನ್ನಾಗಿದೆ, ಮನೆಯಲ್ಲೇ ಕ್ವಾರಂಟೈನ್‌ನಲ್ಲಿದ್ದೇನೆ. ಇತ್ತೀಚೆಗೆ ನನ್ನ ಸಂಪರ್ಕಕ್ಕೆ ಬಂದವರು ಪರೀಕ್ಷೆ ಮಾಡಿಸಿಕೊಳ್ಳಿ ಎಂದು ತಿಳಿಸಿದ್ದಾರೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿ ಕುಮಾರ್ ಅವರಿಗೂ ಕೊರೊನ ಸೋಂಕು ಬಂದಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಇದಕ್ಕೂ ಮುಂಚೆ, ದಕ್ಷಿಣ ಕನ್ನಡದ ಸಂಸದ ಹಾಗೂ ರಾಜ್ಯ ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರಲ್ಲಿ ಎರಡನೇ ಬಾರಿ ಕೊರೊನಾ ಸೋಂಕು ಕಾಣಿಸಿಕೊಂಡಿತ್ತು ಈ ಹಿಂದೆ ಆಗಸ್ಟ್ 2020ರಲ್ಲೂ ಅವರಿಗೆ ಕೊರೊನಾ ಸೋಂಕು ಉಂಟಾಗಿತ್ತು. ಸೋಂಕಿನ ಬಗ್ಗೆ ಹೇಳಿಕೆ ನೀಡಿರುವ ಅವರು, ನಾನು ಲಕ್ಷಣ ರಹಿತ ಹಾಗೂ ಆರೋಗ್ಯವಾಗಿದ್ದೇನೆ ಎಂದು ಹೇಳಿದ್ದಾರೆ.

## ಲಸಿಕಾ ಕೇಂದ್ರಗಳು ರಾತ್ರಿ 10ರವರೆಗೂ ಕಾರ್ಯ ನಿರ್ವಹಿಸಬಹುದು

ನವದೆಹಲಿ, ಜ. 10 – ಕೊರೊನಾ ಲಸಿಕಾ ಕೇಂದ್ರಗಳ ಕಾರ್ಯ ನಿರ್ವಹಣೆಗೆ ಯಾವುದೇ ಕಾಲ ಮಿತಿ ನಿಗದಿ ಪಡಿಸಿಲ್ಲ. ಮಾನವ ಸಂಪನ್ಮೂಲ ಹಾಗೂ ಮೂಲಭೂತ ಸೌಲಭ್ಯಗಳು ಲಭ್ಯವಿದ್ದರೆ ರಾತ್ರಿ 10 ಗಂಟೆಯವರೆಗೂ ಕೇಂದ್ರಗಳು ಕಾರ್ಯ ನಿರ್ವಹಿಸಬಹುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ರಾಜ್ಯಗಳಿಗೆ ಪತ್ರ ಬರೆದಿರುವ ಕೇಂದ್ರ ಆರೋಗ್ಯ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಮನೋಹರ್ ಅಗ್ನಾನಿ, ಬೆಳಿಗ್ಗೆ 8ರಿಂದ ರಾತ್ರಿ 8ವರೆಗೆ ಮಾತ್ರ ಲಸಿಕಾ ಕೇಂದ್ರಗಳು ಕಾರ್ಯ ನಿರ್ವಹಿಸಬಹುದು ಎಂಬ ಭಾವನೆ ಇದೆ. ಆದರೆ, ಸೌಲಭ್ಯಗಳು ಲಭ್ಯವಿದ್ದರೆ ರಾತ್ರಿ 10 ಗಂಟೆಯವರೆಗೂ ಕಾರ್ಯ ನಿರ್ವಹಿಸಬಹುದು ಎಂದಿದ್ದಾರೆ.

## ಡಿ.ಸಿ.ಟಿ ಪರೀಕ್ಷೆ : ಬಾಪೂಜಿ ಪಾಲಿಟೆಕ್ನಿಕ್‌ನ ಖುಷಿಗೆ 33ನೇ ರ್‍ಯಾಂಕ್



ದಾವಣಗೆರೆ, ಜ. 10- ನಗರದ ಬಾಪೂಜಿ ಪಾಲಿಟೆಕ್ನಿಕ್‌ನ ವಿದ್ಯಾರ್ಥಿನಿ ಖುಷಿ ನ್ಯಾಮತಿ ಇವರು ಈಚೆಗೆ ನಡೆದ ಡಿಪ್ಲೋಮಾ ಡಿಸಿಟಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದು, ರಾಜ್ಯಮಟ್ಟದಲ್ಲಿ 33ನೇ ರ್‍ಯಾಂಕ್ ಪಡೆದಿದ್ದು, ನಗರದ ಗಂಗಾಮತಸ್ಥರ ಸಮಾಜದ ವತಿಯಿಂದ ಸನ್ಮಾನಿಸಿ, ಗೌರವಿಸಲಾಯಿತು.

ಖುಷಿ, ಪೋದಾರ್ ಶಾಲಾ ಶಿಕ್ಷಕಿ ಶ್ರೀಮತಿ ಮಂಗಳಾ ಮಲ್ಲಿಕಾರ್ಜುನ್ ಮತ್ತು ಎ.ವಿ. ಮಲ್ಲಿಕಾರ್ಜುನ್ ದಂಪತಿ ಪುತ್ರಿ, ನ್ಯಾಮತಿ ವೀರಭದ್ರಪ್ಪ ಮತ್ತು ಆಲೂರು ಶಾರದಮ್ಮ , ದಳಪತಿ ರಾಜೇಂದ್ರಪ್ಪ ಮತ್ತು ಶ್ರೀಮತಿ ಪ್ರೇಮ ದಂಪತಿಗಳ ಮೊಮ್ಮಗಳು.

ಈ ಸಂದರ್ಭದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಸುಮತಿ ಜಯಪ್ಪ, ಮಾಗಾನಳ್ಳಿ ಮಂಜುನಾಥ್, ಮೀನಾಕ್ಷಿ ವೆಂಕಟೇಶ್, ಶೋಭಾ ಮಂಜುನಾಥ್, ಚಂದ್ರಕಲಾ, ಕೆ.ಜಿ. ಸೌಭಾಗ್ಯ, ಸುಧಾ, ಜ್ಯೋತಿ, ರೂಪಕಲಾ, ಕಲ್ಪನಾ ಉಪಸ್ಥಿತರಿದ್ದರು.

## ಕಾಶಿ ಕಾರಿಡಾರ್ ಉದ್ಘಾಟನೆಯಲ್ಲಿ ನಗರದ ಮಹಿಳಾ ತಂಡದ ವೀರಗಾಸೆ



ದಾವಣಗೆರೆ, ಜ. 10- ಈಚೆಗೆ ಕಾಶಿಯಲ್ಲಿ ನಡೆದ ಕಾರಿಡಾರ್ ಉದ್ಘಾಟನಾ ಕಾರ್ಯಕ್ರಮದಲ್ಲಿ ನಗರದ ಮಹಿಳಾ ವೀರಗಾಸೆ ತಂಡ ಶಿವ ಪಾರ್ವತಿ ಪುತ್ರ ಶ್ರೀ ವೀರಭದ್ರ ಕುರಿತಾದ ಪುರಾಣದ ಒಂದು ತುಣುಕು ವೀರಭದ್ರನ ಹುಟ್ಟು, ದಕ್ಷ ಬ್ರಹ್ಮನ ಸಂಹಾರದ ಕುರಿತು ಒಡಪು ಸಹಿತ ವೀರಗಾಸೆ ನೃತ್ಯ ಪ್ರದರ್ಶಿಸುವ ಮೂಲಕ ದೃಶ್ಯ ರೂಪಕ ನಡೆಸಿಕೊಟ್ಟರು.

ಮಾಗಾನಹಳ್ಳಿ ಮಂಜುನಾಥ ಅವರ ಮಾರ್ಗದರ್ಶನದಲ್ಲಿ ನಡೆದ ಈ ದೃಶ್ಯ ರೂಪಕದಲ್ಲಿ ತಾಲ್ಲೂಕು ಕಸಾಪ ಅಧ್ಯಕ್ಷರಾದ ಸುಮತಿ ಜಯಪ್ಪ, ತರಳಬಾಳು ಮಹಿಳಾ ಘಟಕದ ಅಧ್ಯಕ್ಷರಾದ ಮಂಗಳ ಮಲ್ಲಿಕಾರ್ಜುನ್, ಮೀನಾಕ್ಷಿ ವೆಂಕಟೇಶ್, ಶೋಭಾ ಮಂಜುನಾಥ್, ಚಂದ್ರಕಲಾ, ಗೀತಾಂಜಲಿ, ಅನುರಾಧ, ಸುಸ್ಮಿತ್ರ, ಸಹನ, ಅಮೀರ, ಹೇಮಲತ, ರವಿ ಹನಗವಾಡಿ, ಸಚಿನ್ ಹನಗವಾಡಿ, ರೇವಣಸಿದ್ದಪ್ಪ, ಸುರೇಶ್ ಹನಗವಾಡಿ ಪಾಲ್ಗೊಂಡಿದ್ದರು.

## ನಗರದಲ್ಲಿಂದು ವಿದ್ಯುತ್ ವ್ಯತ್ಯಯ

ಇಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 03 ರವರೆಗೆ ಎಸ್.ಎಸ್. ಬಡಾವಣೆ, ಬಿ ಬ್ಲಾಕ್, ಕುಂದುವಾಡ ರಸ್ತೆ, ಬಸವೇಶ್ವರ ಬಡಾವಣೆ, ಮಹಾಲಕ್ಷ್ಮಿ ಬಡಾವಣೆ, ಬಾಲಾಜಿ ನಗರ, ಕುಂದುವಾಡ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

## ಜುಲೈ - ಸೆಪ್ಟೆಂಬರ್‌ನಲ್ಲಿ ಉದ್ಯೋಗ ಹೆಚ್ಚಳ

ನವದೆಹಲಿ, 10 – 2021ರ ಜುಲೈ - ಸೆಪ್ಟೆಂಬರ್ ಚತುರ್ಥದಲ್ಲಿ ಒಂಭತ್ತು ಆಯ್ದ ವಲಯಗಳಲ್ಲಿ 3.10 ಕೋಟಿ ಉದ್ಯೋಗಗಳು ಸೃಷ್ಟಿಯಾಗಿವೆ. ಇದು ಏಪ್ರಿಲ್ - ಜೂನ್ ಅವಧಿಗೆ ಹೋಲಿಸಿದರೆ 2 ಲಕ್ಷ ಹೆಚ್ಚಾಗಿದೆ ಎಂದು ಕೇಂದ್ರ ಕಾರ್ಮಿಕ ಸಚಿವಾಲಯ ತಿಳಿಸಿದೆ.

ಎರಡನೇ ಅಲೆಯ ಲಾಕ್‌ಡೌನ್ ನಿರ್ಬಂಧಗಳನ್ನು ತೆರವುಗೊಳಿಸಿದ ನಂತರ ಆರ್ಥಿಕ ಚಟುವಟಿಕೆಗಳು ಹೆಚ್ಚಾಗಿರುವುದರಿಂದ ಉದ್ಯೋಗಾವಕಾಶಗಳಲ್ಲೂ ಏರಿಕೆಯಾಗಿದೆ ಎಂದು ವರದಿ ತಿಳಿಸಿದೆ.


**ನಲ್ಕುಂದ : ನಿವೃತ್ತ ಪ್ರಾಂಶುಪಾಲ ಕೆ. ದೇವೇಂದ್ರಪ್ಪ ನಿಧನ**



ದಾವಣಗೆರೆ ತಾಲ್ಲೂಕು ನಲ್ಕುಂದ ಗ್ರಾಮದವರಾದ ಚನ್ನಗಿರಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ **ಶ್ರೀ ಕೆ. ದೇವೇಂದ್ರಪ್ಪ** ಅವರು ದಿ. 10.01.2022ರ ಸೋಮವಾರ ಸಂಜೆ 5.50 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ ಸುಮಾರು 72 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ: 11.01.2022ರ ಮಂಗಳವಾರ ಬೆಳಿಗ್ಗೆ 11.30ಕ್ಕೆ ನಲ್ಕುಂದ ಗ್ರಾಮದಲ್ಲಿರುವ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬವರ್ಗ, ಫೋ : 99647 29950



**ಸಾಹಿತಿ ಚಂದ್ರಶೇಖರ ಪಾಟೀಲ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ**



ಇಂದು ನಮ್ಮನ್ನಗಲಿದ ನಾಡಿನ ಖ್ಯಾತ ಬಂಡಾಯ ಸಾಹಿತಿ, ಕವಿ, ನಾಟಕಕಾರ, ಕನ್ನಡ ಹೋರಾಟಗಾರ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರು ಹಾಗೂ ಮೈಸೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ **ಡಾಕ್ಟರ್ ಚಂದ್ರಶೇಖರ ಪಾಟೀಲ (ಚಂಪಾ)** ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಇವರೊಂದಿಗೆ ಹರಿಹರದ ಶ್ರೀ ವಿ.ಎಸ್. ಮಲ್ಲಿಕಾರ್ಜುನ್ ಇವರು ಕನ್ನಡ ನಾಡು ನುಡಿಗಾಗಿ ನಡೆಸಿದ ಹೋರಾಟದ ಕೆಲವು ಅಳಿದುಳಿದ ನೆನಪುಗಳೊಂದಿಗೆ ಗೋಕಾಕ್ ವರದಿ ಜಾರಿಗೆಯಾಗಿದ್ದರ ವಿಜಯೋತ್ಸವದಲ್ಲಿ ಭಾಗವಹಿಸಿದ್ದ ಪ್ರೊ. ಚಂದ್ರಶೇಖರ್ ಪಾಟೀಲ್, ಪ್ರಕಾಶ್ ಅವರೊಂದಿಗೆ **ಶ್ರೀ ವಿ.ಎಸ್. ಮಲ್ಲಿಕಾರ್ಜುನ್**
ಇಂಜಿನಿಯರ್, ಕನ್ನಡ ಗೆಳೆಯರ ಬಳಗ, ಹರಿಹರ.







**15ನೇ ವರ್ಷದ ಪುಣ್ಯಸ್ಮರಣೆ**



**ದಿ|| ಬಿ.ಎಸ್. ಜಯಂಧರ್ (ಅಪ್ಪಾಜಿ)**

ಜನನ : 26-06-1956 ನಿಧನ : 11-01-2007

" ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ಕಲ್ಪನೆಯೊಂದಿಗೆ,
ಕಾಯಕವೇ ಕೈಲಾಸವೆಂಬ ತತ್ವದೊಂದಿಗೆ ನಮ್ಮ ಮನೆ - ಮನಗಳಲ್ಲಿ
ದೀಪ ಮುಡಿಸಿ, ಶಿಸ್ತು-ಸಂಸ್ಕೃತಿ-ಸಂಸ್ಕಾರ ಕಲಿಸಿದ್ದೀರಿ.
ನಮಗೆ ನೀಡಿದ ಮಮಕಾರ, ಪ್ರೀತಿ-ವಾತ್ಸಲ್ಯಕ್ಕಾಗಿ ನಾವು ಸದಾ ಚಿರಋಣಿ.
ನಿಮ್ಮ ಸವಿನೆನಪೇ ನಮಗೆ ಆಶೀರ್ವಾದ.
ಭಗವಂತನು ದಿವ್ಯ ಆತ್ಮಕ್ಕೆ ಚಿರಶಾಂತಿ ಕರುಣಿಸಲಿ

ತಮ್ಮ ನೆನಪಿನಲ್ಲಿ ಪಯಣಿಸುತ್ತಿರುವ : ಪುತ್ರ - ಅಭಿಷೇಕ್ ಬೇತೂರ್, ಸೊಸೆ - ಶ್ರೀಮತಿ ಶ್ವೇತ ಅಭಿಷೇಕ್,
ಮೊಮ್ಮಗಳು - ನಿಧಿ ಬೇತೂರ್ ಮೊಮ್ಮಗ : ಸಮರ್ಥ್ ಬೇತೂರ್
ಹೆಚ್. ಆರ್. ಬೇತೂರ್, ವಿಜಯಲಕ್ಷ್ಮಿ ರಸ್ತೆ, ಹೆಚ್. ಆರ್. ಬೇತೂರ್ ಟ್ರೇಡರ್ಸ್, ಮಂಡಿಪೇಟೆ
ಬೇತೂರ್ ಕಮ್ಯೂನಿಕೇಷನ್ಸ್ , ಪಿ.ಜೆ. ಬಡಾವಣೆ, ಬೇತೂರ್ ಎಂಟರ್‌ಪ್ರೈಸಸ್, ನಿಜಲಿಂಗಪ್ಪ ಬಡಾವಣೆ,
ಬೇತೂರ್ ಕುಟುಂಬವರ್ಗ ಹಾಗೂ ಬಂಧು-ಮಿತ್ರರು


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte